ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರು

(ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ನಿಬಂಧ)

ಸಂಶೋಧಕರು

ಕು. ಗೀತಾಂಜಲಿ ದಿ. ಮುದಕವಿ

ಮಾರ್ಗದರ್ಶಕರು

ಡಾ. ಶ್ರೀಮತಿ ಸ್ಮಿತಾ ಪಿ. ಸುರೇಬಾನಕರ
ಮುಖ್ಯಸ್ಥರು, ಇತಿಹಾಸ ವಿಭಾಗ
ರಾಣಿ ಪಾರ್ವತಿದೇವಿ ಮಹಾವಿದ್ಯಾಲಯ, ಬೆಳಗಾವಿ

ಶ್ರೀ ಬಿ.ಆರ್ ದರೂರ ಸಂಶೋಧನಾ ಕೇಂದ್ರ
ಹಾರೂಗೇರಿ, ಜಿ. ಬೆಳಗಾವಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ – ೫೮೩ ೨೭೬
೨೦೧೨

948

948

AKSHARA GRANTHALAYA
ACC.NO.048757

948

948

ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರು

(ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ನಿಬಂಧ)

ಸಂಶೋಧಕರು

ಕು. ಗೀತಾಂಜಲಿ ದಿ. ಮುದಕವಿ

ಮಾರ್ಗದರ್ಶಕರು

ಡಾ. ಶ್ರೀಮತಿ ಸ್ಮಿತಾ ಪಿ. ಸುರೇಬಾನಕರ
ಮುಖ್ಯಸ್ಥರು, ಇತಿಹಾಸ ವಿಭಾಗ
ರಾಣಿ ಪಾರ್ವತಿದೇವಿ ಮಹಾವಿದ್ಯಾಲಯ, ಬೆಳಗಾವಿ

ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ
ಹಾರೂಗೇರಿ, ಜಿ. ಬೆಳಗಾವಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ – ೫೮೩ ೨೭೬
೨೦೧೨

954.87
MUD i
048757

ಧೃಡೀಕರಣ ಪತ್ರ

ಗೀತಾಂಜಲಿ ಬಿ. ಮುದಕವಿ ಇವರು **ಬಿನಾಪೂರದ ಸ್ವಾತಂತ್ರ್ಯ ಹೋರಾಟಗಾರರು** ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. **ಹಾರೂಗೇರಿಯ ಶ್ರೀ ಬಿ. ಆರ್.ದರೂರ ಸಂಶೋಧನಾ ಕೇಂದ್ರದ** ಮೂಲಕ **ಹಂಪಿ** ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. (ಶ್ರೀಮತಿ)ಸ್ಮಿತಾ ಪಿ. ಸುರೇಬಾನ್ಕರ್
ಮಾರ್ಗದರ್ಶಕರು,
ಇತಿಹಾಸ ವಿಭಾಗ, ರಾಣಿ ಪಾರ್ವತಿದೇವಿ
ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ,
ಬೆಳಗಾವಿ

ಸ್ಥಳ : ಹಾರೂಗೇರಿ
ದಿನಾಂಕ : 22-5-2012

ಪ್ರಮಾಣ ಪತ್ರ

ವಿಜಾಪೂರದ ಸ್ವಾತಂತ್ರ್ಯ ಹೋರಾಟಗಾರರು ಎಂಬ ಶೀರ್ಷಿಕೆಯ ನಿಬಂಧವನ್ನು **ಡಾ. (ಶ್ರೀಮತಿ) ಸ್ಮಿತಾ ಪಿ. ಸುರೇಬಾನಕರ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ್ದೇನೆ. ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದು ಹಾಗೂ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಗೀತಾಂಜಲಿ ಬಿ. ಮುದಕವಿ
ಸಂಶೋಧನಾ ವಿದ್ಯಾರ್ಥಿನಿ
ಶ್ರೀ ಬಿ. ಆರ್. ದರೂರ
ಸಂಶೋಧನಾ ಕೇಂದ್ರ, ಹಾರೂಗೇರಿ.

ಸ್ಥಳ : ಹಾರೂಗೇರಿ
ದಿನಾಂಕ : 22-5-2012

ಪರಿವಿಡಿ

- ದೃಢೀಕೃತ ಪತ್ರ
- ಪ್ರಮಾಣ ಪತ್ರ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಬ್ರಿಟೀಷರ ವಿರುದ್ಧ ಸಮಗ್ರ ಭಾರತದ ಜನತೆ ಹೋರಾಡುವ ಸಂದರ್ಭದಲ್ಲಿ ಕರ್ನಾಟಕವು ನಿರ್ವಹಿಸಿದ ಪಾತ್ರ ಗಣನೀಯವಾಗಿದೆ. ಅದರಲ್ಲೂ 'ಕರ್ನಾಟಕ ಪ್ಯಾಟರ್ನ್' ಎಂದು ಕರೆಯುವ ಬೆಳಗಾವಿ ಜಿಲ್ಲೆಯ ಪಾತ್ರ ಬಹಳ ಮಹತ್ವದ್ದಾಗಿದೆ. ಇಲ್ಲಿಯ ಪ್ರತಿಯೊಂದು ಗ್ರಾಮವೂ ಸಹ ಸ್ವಾತಂತ್ರ್ಯ ಸಂಗ್ರಾಮದ ಕಥೆಯನ್ನು ಹೇಳುತ್ತವೆ.

೧.೧ ಅಧ್ಯಯನದ ಉದ್ದೇಶ :

ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ ನಂತರ ಸತ್ಯ ಮತ್ತು ಅಹಿಂಸೆಯ ಮಾರ್ಗದ ಮೂಲಕ ಬ್ರಿಟೀಷರ ವಿರುದ್ಧ ಹೋರಾಟವನ್ನು ಆರಂಭಿಸಿದರು. ಅವರ ಕರೆಗೆ ಓಗೊಟ್ಟು ದೇಶದ ಮೂಲೆ ಮೂಲೆಗಳಿಂದ ಲಕ್ಷ-ಲಕ್ಷ ಸಂಖ್ಯೆಯಲ್ಲಿ ಜನರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ತಮ್ಮ ಆಸ್ತಿ ಪಾಸ್ತಿ ಕಳೆದುಕೊಂಡರೂ, ಜೈಲುವಾಸ ಅನುಭವಿಸಿದರೂ, ಲಾಠಿ ಏಟುಗಳನ್ನು ತಿಂದರೂ ಸಹ ಎಂದೆಂದೂ ಹಿಂಸೆಯ ಮಾರ್ಗವನ್ನು ಹಿಡಿಯಲಿಲ್ಲ. ಇದರಿಂದಾಗಿಯೇ ಜಗತ್ತಿನಲ್ಲಿ ಬೇರಾವುದೇ ದೇಶ ಗಳಿಸದಂತಹ ಸ್ವಾತಂತ್ರ್ಯವನ್ನು ಅಂದರೆ ಅಹಿಂಸೆಯ ಮಾರ್ಗದ ಮೂಲಕ ಗಳಿಸಲು ಸಾಧ್ಯವಾಯಿತು. ಇಂತಹ ಪವಿತ್ರ ಕಾರ್ಯದಲ್ಲಿ ತಮ್ಮ ಅಭೂತಪೂರ್ವವಾದ ಕೊಡುಗೆಯನ್ನು ನೀಡಿದ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸುವುದೇ ಒಂದು ಸುಯೋಗ ಮತ್ತು ಒಂದು ಪುಣ್ಯ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರತಿಯೊಂದು ರಾಜ್ಯ, ಜಿಲ್ಲೆ ಮತ್ತು ತಾಲೂಕುಗಳು ಅಮೂಲ್ಯವಾದ ಕೊಡುಗೆಯನ್ನು ನೀಡಿವೆ. ಹಲವಾರು ಜನ ಲೇಖಕರು ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಅದರಲ್ಲಿ ಕೆಲವು ಹೋರಾಟಗಾರರ ಹೆಸರುಗಳು ಬಿಟ್ಟುಹೋಗಿವೆ. ಅವರ ಬಗ್ಗೆ ಮಾಹಿತಿಗಳು

ಹಾಗೆಯೇ ಉಳಿದು ಹೋಗಿವೆ. ಅದಕ್ಕಾಗಿ ಅಂತಹವರ ಬಗ್ಗೆ ಆಳವಾದ ಅಧ್ಯಯನ ಅವಶ್ಯಕವಾಗಿದೆ.

ತಮ್ಮ ಅಮೂಲ್ಯ ಜೀವನವನ್ನೇ ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ಮಾಡಿದ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸುವುದು, ಪಡೆದ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂಬುದನ್ನು ತಿಳಿಸುವ ಉದ್ದೇಶವನ್ನು ಸಹ ಈ ಅಧ್ಯಯನ ಹೊಂದಿದೆ.

ನಮ್ಮ ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯವನ್ನು ಪಡೆಯಲು ಪಟ್ಟಂತಹ ಅಪಾರ ಕಷ್ಟ-ನಷ್ಟಗಳು, ಅನುಭವಿಸಿದ ನೋವುಗಳು ಮತ್ತು ಅವರ ಸಾಹಸಗಳನ್ನು ಗಮನಕ್ಕೆ ತಂದುಕೊಡುವುದು ಸಹ ಅಧ್ಯಯನದ ಆಶಯವಾಗಿದೆ. ಕೇವಲ ಸ್ವಾತಂತ್ರ್ಯ ದಿನಾಚರಣೆಗಳನ್ನು ವಿಜೃಂಭಣೆಯಿಂದ ಆಚರಿಸಿದರೆ ಮುಗಿಯಲಿಲ್ಲ. ಅದು ಸಾರ್ಥಕತೆಯನ್ನು ಕಾಣಬೇಕಾದರೆ ಹೋರಾಟಗಾರರು ಕಂಡಂತಹ ಕನಸನ್ನು ನನಸಾಗಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಸ್ವಾತಂತ್ರ್ಯ ಬಂದು ೬ ದಶಕಗಳು ಕಳೆದರೂ ದೇಶದಲ್ಲಿ ಬದಲಾವಣೆಯಾಗದಿರುವುದು ವಿಷಾದನೀಯ. ಪಡೆದ ಸ್ವಾತಂತ್ರ್ಯವನ್ನು ಸಾರ್ಥಕಗೊಳಿಸುವುದು ಬಹುದೊಡ್ಡ ಜವಾಬ್ದಾರಿಯಾಗಿದೆ. ಇಂತಹ ಅಮೂಲ್ಯವಾಗಿರುವ ಸ್ವಾತಂತ್ರ್ಯವನ್ನು ತಮ್ಮ ಪ್ರಾಣತೆತ್ತು ನಮ್ಮ ಕೈಯಲ್ಲಿತ್ತ ಸ್ವಾತಂತ್ರ್ಯ ಯೋಧರನ್ನು ಸ್ಮರಿಸುವ ಚಿಕ್ಕ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೧.೨ ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

ಈ ಅಧ್ಯಯನವು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಒಂದನೇಯ ಅಧ್ಯಾಯವು ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯನ್ನು ಒಳಗೊಂಡಿದೆ. ಎರಡನೇಯ ಅಧ್ಯಾಯವು ಭಾರತದ ಸ್ವಾತಂತ್ರ್ಯ ಚಳುವಳಿಯ ಹಿನ್ನಲೆಯನ್ನು ಒಳಗೊಂಡಿದೆ. ಮೂರನೇ ಅಧ್ಯಾಯವು 'ಬೆಳಗಾವಿ ಜಿಲ್ಲೆಯಲ್ಲಿಯ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಮಾಹಿತಿಯನ್ನು ಒಳಗೊಂಡಿದೆ. ಇನ್ನು ನಾಲ್ಕನೇ ಅಧ್ಯಾಯವು 'ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರ' ಬಗ್ಗೆ ಮತ್ತು ಅವರ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಒಳಗೊಂಡಿದೆ. ಐದನೇಯ ಅಧ್ಯಾಯವು ಹೋರಾಟದ ಸ್ವರೂಪ ಮತ್ತು ಪರಿಣಾಮಗಳನ್ನು ಒಳಗೊಂಡಿದೆ ಮತ್ತು ಆರನೇಯ ಅಧ್ಯಾಯವು ಸಮಾರೋಪವಾಗಿದೆ.

ವ್ಯಾಪ್ತಿ : ಲೋಕಮಾನ್ಯ ತಿಲಕರು ಬೆಳಗಾವಿಯನ್ನು 'ಸ್ವರಾಜ್ಯದ ಕೋಟೆ' ಎಂಬುದಾಗಿ ಕರೆದರು. ಅಥಣಿ ತಾಲೂಕು ಆ ಕೋಟೆಯನ್ನು ಕಟ್ಟಲು ಇಟ್ಟಿಗೆಯಾಗಿ

ಕಾರ್ಯನಿರ್ವಹಿಸಿದೆ.[೧] ಇದರಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಥಣಿ ತಾಲೂಕಿನ ಮಹತ್ವ ಎಷ್ಟಿತ್ತು ಎಂಬುದರ ಬಗ್ಗೆ ಅರಿವಾಗುವುದು. ಅಥಣಿ ತಾಲೂಕಿನಲ್ಲಿ ಕೃಷ್ಣೆಯ ದಡದಲ್ಲಿರುವ ಐನಾಪೂರ ಗ್ರಾಮವು ಸಹ ಆ ಕೋಟೆಯನ್ನು ಕಟ್ಟಲು ಬಳಸಿದ ಇಟ್ಟಿಗೆಗಳಲ್ಲಿ ಒಂದಾಗಿದೆ. ಇದು ಅಥಣಿ ತಾಲೂಕಿನ ಪಶ್ಚಿಮ ಭಾಗದಲ್ಲಿದೆ. ಜಿಲ್ಲಾ ಕೇಂದ್ರದಲ್ಲಿ ೧೧೦ ಕಿ.ಮೀ. ದೂರದಲ್ಲಿದೆ. ಅಥಣಿಯಿಂದ ೨೪ ಕಿ.ಮೀ. ಅಂತರದಲ್ಲಿದೆ.[೨] ೨೦೧೧ ರ ಜನಗಣತಿಯ ಪ್ರಕಾರ ೩೦,೦೦೦ ಜನಸಂಖ್ಯೆಯನ್ನು ಹೊಂದಿದೆ.

ಇದು ಲಕ್ಷ್ಮೀ ಸರಸ್ವತಿಯರ ಸಂಗಮ ಸ್ಥಾನವೂ ಹೌದು. ಕೃಷ್ಣಾ ನದಿಯ ನೀರಿನ ಸೌಕರ್ಯದಿಂದಾಗಿ ಕೃಷಿಯು ಅಭಿವೃದ್ಧಿಯಾಗಿದೆ. ಈಗ ಕೃಷ್ಣಾ ಮೇಲ್ದಂಡೆ ಏತನೀರಾವರಿ ಯೋಜನೆಯೂ ಪೂರ್ಣಗೊಂಡಿದೆ. ಸುತ್ತಮುತ್ತಲಿನ ಸಕ್ಕರೆ ಕಾರ್ಖಾನೆಗಳಿಗೆ ಹೆಚ್ಚು ಕಬ್ಬನ್ನು ಪೂರೈಕೆ ಮಾಡುವ ಗ್ರಾಮವೆಂದರೆ ಐನಾಪೂರ.

ಜೆ.ಎಂ. ದೇಶಪಾಂಡೆಯವರಿಂದ ಬಹಳ ಹಿಂದೆಯೇ ಒಂದು ಹೈಸ್ಕೂಲು ಸ್ಥಾಪನೆಯಾಗಿದ್ದು ಆಗಿನ ಕಾಲದಲ್ಲಿಯೇ ಸುತ್ತಮುತ್ತಲಿನ ಊರುಗಳಿಂದ ವಿದ್ಯಾರ್ಥಿಗಳು ಬಂದು ಶಿಕ್ಷಣ ಪಡೆಯುತ್ತಿದ್ದರು. ಈಗಂತೂ ಶೈಕ್ಷಣಿಕವಾಗಿ ಮತ್ತಷ್ಟು ಪ್ರಗತಿಯನ್ನು ಸಾಧಿಸಿದೆ. ಎರಡು ಕನ್ನಡ ಹಿರಿಯ ಪ್ರಾಥಮಿಕ ಶಾಲೆಗಳು, ಎರಡು ಹೈಸ್ಕೂಲುಗಳು ಒಂದು ಪದವಿಪೂರ್ವ ಮಹಾವಿದ್ಯಾಲಯ, ಒಂದು ಪದವಿ ಮಹಾವಿದ್ಯಾಲಯ ಮತ್ತು ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರವೂ ಸ್ಥಾಪನೆಯಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಎರಡು ಐನಾಪೂರಗಳಿವೆ. ಒಂದು ಯರಗಟ್ಟಿ ಐನಾಪೂರ, ಇನ್ನೊಂದು ಮೋಳೆ ಐನಾಪೂರ. ಇದಕ್ಕೆ ಮೋಳೆ ಐನಾಪೂರ ಎಂದು ಕರೆಯುತ್ತಾರೆ. ಅಥಣಿ ತಾಲೂಕಿನಲ್ಲಿ ಎರಡು ವಿಧಾನಸಭಾ ಕ್ಷೇತ್ರಗಳಿವೆ. ಒಂದು ಕಾಗವಾಡ ಇನ್ನೊಂದು ಅಥಣಿ. ಐನಾಪೂರ ಕಾಗವಾಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತದೆ.

ಐತಿಹಾಸಿಕ ಹಿನ್ನೆಲೆ :

ಐನಾಪೂರ ಗ್ರಾಮಕ್ಕೆ ಬಹಳ ಹಿಂದಿನ ಇತಿಹಾಸವಿದೆ. ಅದಕ್ಕೆ ಹಲವಾರು ಅಂಶಗಳು ಸಾಕ್ಷಿಯಾಗಿವೆ.

ಈ ಗ್ರಾಮದ ಬಗ್ಗೆ ಮೊದಲ ಉಲ್ಲೇಖದ ಕಾಲ ಕ್ರಿ.ಶ. ೧೬೩೯. ಜರ್ಮನಿಯ ಪ್ರವಾಸಿ ಮೆಂಡೆಸ್ಲೊ ಎಂಬುವವನು ಇದನ್ನು ‘ಈಯನಾತೋರ್’

ಎಂದು ಕರೆದಿದ್ದಾನೆ.[೩] ೧೭೯೧ ರಲ್ಲಿ ಕ್ಯಾಪ್ಟನ್ ಮೂರ್ ಇಲ್ಲಿಗೆ ಭೇಡಿ ನೀಡಿದ್ದನು. ಅವನು ಟಿಪ್ಪುವಿನ ವಿರುದ್ಧ ಮರಾಠರಿಗೆ ಸಹಾಯ ಮಾಡಲು ಇಲ್ಲಿಗೆ ಆಗಮಿಸಿದ್ದನು. ಅವನು ಹಿಂದೂ ಮತ್ತು ಮುಸ್ಲಿಂ ಶೈಲಿಯ ಕಟ್ಟಡಗಳು ಐನಾಪೂರದಲ್ಲಿವೆ ಎಂದು ಉಲ್ಲೇಖಿಸಿದ್ದಾನೆ.[೪] ಐನಾಪೂರ ಮೊದಲು ಆದಿಲ್‌ಷಾಹಿಗಳ ಕೈಯಲ್ಲಿತ್ತು ನಂತರ ಮರಾಠರ ಆಳ್ವಿಕೆಗೆ ಒಳಪಟ್ಟಿತ್ತು. ೧೮೪೨ ರಲ್ಲಿ ಮೀರಜದ ಗೋಪಾಲರಾವ್ ಪಟವರ್ಧನರ ಮರಣಾನಂತರ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತು.[೫]

ಐನಾಪೂರದ ಹೆಸರಿನ ನಿಷ್ಪತ್ತಿಯ ಬಗ್ಗೆ ಕೆಲವು ವಿಭಿನ್ನ ಅಭಿಪ್ರಾಯಗಳಿವೆ. ಐನಾಪೂರದ ಪ್ರಾಚೀನ ಹೆಸರು ಜೈನಾಪುರವಾಗಿತ್ತೆಂದು ಕೆಲವರ ಅಭಿಪ್ರಾಯ. ಆಯನಾ ಎಂಬುದರಿಂದಲೂ ಬಂದಿರಬಹುದು ಎಂದು ಮತ್ತೆ ಕೆಲವರ ಅಭಿಪ್ರಾಯ. ಅಯ್ಯನಾಪೂರದಿಂದ ಐನಾಪೂರವಾಗಿರಬಹುದೆಂದು ಕೆಲವರ ಅಭಿಪ್ರಾಯ. ಮತ್ತು ಇದೊಂದು ಅಗ್ರಹಾರವಾಗಿತ್ತು.[೬]

ಒಟ್ಟಿನಲ್ಲಿ ಜಯಂತಿಪುರ ಜೈನಾಪೂರವಾಗಿ ಜೈನಾಪೂರ ಮುಂದೆ ಐನಾಪೂರ ಆಗಿರಬಹುದು ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

ಆದಿನಾಥ ಜಿನಾಲಯದ ಕ್ರಿ.ಶ. ೧೬೩೫ರ ಶಾಸನದಲ್ಲಿ ಯತ(ನಾ?)ಪುರದ ಉಲ್ಲೇಖವಿದೆ.[೭] ಇದು ಐನಾಪೂರದ ಅಪಭ್ರಂಶ ರೂಪವಿರಬಹುದು. ಐನಾಪೂರದ ಗೌಡರ ವಾಡೆಯಲ್ಲಿರುವ ಕ್ರಿ.ಶ. ೧೮ನೇ ಶತಮಾನದ ತಾಮ್ರ ಯಂತ್ರದ ಹಿಂದಿನ ಭಾಗದಲ್ಲಿ 'ಅೈನಾಪೂರ' ಹೆಸರಿದೆ ಮತ್ತು ಅಲ್ಲಿ ಒಂದು ಶಾಸನವಿದೆ. ಆದರೆ ಅದು ಸಂಪೂರ್ಣ ತೃಟಿತಗೊಂಡಿದ್ದು ಐನಾಪೂರದ ಮೂಲ ಹೆಸರು ತಿಳಿಯದು.[೮]

ಇಲ್ಲಿ ಪ್ರಾಚೀನ ಕಾಲದ ಅನೇಕ ದೇವಾಲಯಗಳಿವೆ. ಇವು ೧೫೦೦ ವರ್ಷಗಳಷ್ಟು ಹಳೆಯವಾಗಿವೆ. ಪ್ರಾಚೀನ ಕಾಲದ ದೇವಾಲಯಗಳಲ್ಲಿ ರಾಮಲಿಂಗ ದೇವಾಲಯ ಬ್ರಹ್ಮದೇವಾಲಯ, ವಿಶ್ವನಾಥ ದೇವಾಲಯ, ವೆಂಕಟೇಶ್ವರ ದೇವಾಲಯ, ಬಸವಣ್ಣನ ದೇವಾಲಯ ಪ್ರಮುಖವಾಗಿವೆ. ಗ್ರಾಮದೇವತೆ ಸಿದ್ಧೇಶ್ವರನ ದೇವಾಲಯ ಇತ್ತೀಚೆಗೆ ಬೃಹತ್ತಾಗಿ ನವೀಕರಿಸಲ್ಪಟ್ಟಿದೆ.

ವಿಶ್ವನಾಥ ದೇವಾಲಯ ನಂತರದ ಚಾಲುಕ್ಯರ ಶೈಲಿಯ ಕಟ್ಟಡವಾಗಿದೆ. ಕದಂಬನಾಗರ ಶಿಖರವನ್ನು ಹೊಂದಿದೆ. ಬ್ರಹ್ಮದೇವಾಲಯ ಮತ್ತು ರಾಮಲಿಂಗ ದೇವಾಲಯಗಳು ವಿಜಯನಗರ ಶೈಲಿಯ ದೇವಾಲಯಗಳಾಗಿವೆ.[೯]

[illegible]

ಐನಾಪೂರದಲ್ಲಿ ಬಸದಿಗಳು ಇವೆ. ಅವು ತುಂಬಾ ಪ್ರಾಚೀನವಾಗಿದ್ದು, ಐನಾಪೂರದ ಪ್ರಾಚೀನತೆಗೆ ಸಾಕ್ಷಿಯಾಗಿವೆ. ಐದು ಬಸದಿಗಳಿವೆ. ಆದಿನಾಥ ಬಸದಿ ಮತ್ತು ಪಾರ್ಶ್ವನಾಥ ಬಸದಿಗಳು ನಂತರದ ಚಾಲುಕ್ಯರ ಕಾಲದ ಶೈಲಿಯಲ್ಲಿವೆ.[೧೦]

ವಾಡೆಯ ಬಸದಿ, ಕೆಳಗಿನ ವಾಡೆಯ ಬಸದಿ ಮತ್ತು ಶಾಂತಿನಾಥನ ಬಸದಿ ಇನ್ನುಳಿದ ಬಸದಿಗಳು. ಆದಿನಾಥನ ಬಸದಿಯನ್ನು ಏಣವ್ವಗೌಡತಿಯು ನಿರ್ಮಿಸಿದಳು. ನವರಂಗದಲ್ಲಿ ಬಾಹುಬಲಿಯ ನಾಲ್ಕು ಅಡಿ ಎತ್ತರದ ಖಡ್ಗಾಸನ ಮೂರ್ತಿಯಿದೆ. ಮತ್ತು ಅರ್ಧಮಂಟಪದಲ್ಲಿ ೨೪ ತೀರ್ಥಂಕರರ ಪ್ರಾಚೀನ ಹಿತ್ತಾಳೆಯ ಮೂರ್ತಿ ಇದೆ. ಹಿತ್ತಾಳೆಯ ಶ್ರುತಸ್ಕಂದಿವೆ. ಪಾದಪೀಠದಲ್ಲಿ ಶಾಸನಗಳಿವೆ. ಶ್ರುತಸ್ಕಂದದ ಪಾದುಕೆಯ ಮೇಲೆ ಏಣವ್ವಾ ಗೌಡತಿ ಮಾಡಿಸಿದುದು ಎಂದು ಶಾಸನವಿದೆ.[೧೧] ಇದನ್ನು ಹೊಸಬಸದಿ ಎಂದು ಕರೆಯುತ್ತಾರೆ.

ಐನಾಪೂರದ ಹಿರೇಮಠದ ಬಲಗೋಡೆಯಲ್ಲಿ ಒಂದು ಮಾಸ್ತಿ ಶಾಸನವಿದೆ. ಇದರ ಕಾಲ ಶಕ ೧೪೧೪. ಯಾಲೋಜಿಯ ಮಗ ನಾಗೋಜಿ ತೀರಿಕೊಂಡಾಗ ಅವನ ಹೆಂಡತಿಯರಾದ ಚಿನ್ನಾಂಬಿಕೆ ಮತ್ತು ನಾಗಾಜಿ ಚಿತೆ ಏರಿದ್ದನ್ನು ಉಲ್ಲೇಖಿಸಲಾಗಿದೆ. ಇದನ್ನು ಬರೆಯಿಸಿದವರು ಹೊನ್ನಾಂಬಿಕೆ.[೧೨]

ಪಂಡರ ಪುರ ನೋಡೊ ಪಗಡಿ ಬಾಚಾರ ನೋಡೊ
ಮುಂಧ್ಹರಿವ ಚಂದ್ರಭಾಗಾ ನದಿ ನೋಡೋ ।
ಮುಂಧ್ಹರಿವ ಚಂದ್ರಭಾಗಾ ನದಿ ನೋಡೋ ಎಲೆ ಭಕ್ತ
ತಂದಿ ವಿಠ್ಠಲನ ಗುಡಿ ನೋಡೋ॥[೧೩]

ಎಂದು ಜನಪದರು ಹಾಡಿದ ಪಂಡರಾಪೂರದ ಈ ವರ್ಣನೆಗೆ ಅಕ್ಷರಶಃ ಹೊಂದಾಣಿಕೆಯಾಗುವಂತೆ ಐನಾಪೂರದ ಪೇಟೆ ಪಗಡಿ ಪಟ್ಟವಾಕಾರವಾಗಿಯೇ ಇದೆ. ದಕ್ಷಿಣ ಭಾರತದ ಹಿರಿಹೊಳಿ ಎನಿಸಿಕೊಂಡಿರುವ ಕೃಷ್ಣಾ ನದಿಯೇ ಊರ ಪಕ್ಕದಲ್ಲಿ, ದಕ್ಷಿಣ ಭಾಗದಲ್ಲಿ ಹರಿದಿದೆ. ಪೇಟೆಯ ಉತ್ತರ ಭಾಗದಲ್ಲಿ ಹನುಮಂತನ ಗುಡಿಯಿದ್ದು, ಆ ಗುಡಿಯ ಮಧ್ಯದಲ್ಲಿ ಹನುಮಂತ ದೇವರಮೂರ್ತಿ ಅಕ್ಕಪಕ್ಕದಲ್ಲಿಯೇ ವಿಠ್ಠಲ-ರುಕ್ಮಿಣಿ ಮತ್ತು ಗಣೇಶನ ಮೂರ್ತಿಗಳಿವೆ.

ಐನಾಪೂರದಲ್ಲಿ ಮೊದಲು ಕೆರೆಯ ನೀರನ್ನೇ ಕುಡಿಯಲು ಉಪಯೋಗಿಸುತ್ತಿದ್ದರು. ಆ ಕೆರೆಯಿಂದ ಸ್ವಲ್ಪ ಮುಂದೆ ಬಂದರೆ ಅಲ್ಲಿಯೇ ಕಾಯಿಪಲ್ಲೆ ಮಾರುಕಟ್ಟೆ ಇತ್ತು. ಕೆರೆಗೆ ನೀರನ್ನು ಪೂರೈಸಲು ಮರಡಿ ಪ್ರದೇಶವಿತ್ತು. ಈಗ ಅದಕ್ಕೆ ಸಂಬಂಧಿಸಿದ ಎಂಟು ಎಕರೆ ಪ್ರದೇಶದಲ್ಲಿ ಪ.ಪೂ.ಶ್ರೀ ಸಿದ್ಧೇಶ್ವರ

[illegible]

[illegible]

[illegible]

ಮಹಾಸ್ವಾಮಿಗಳ ಗುರುಗಳಾದ ಪ.ಪೂ. ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳ ಆಶ್ರಮ ನಿರ್ಮಾಣವಾಗಿದೆ. ಇನ್ನೊಂದು ಕೆರೆ ಊರ ಪಶ್ಚಿಮ ಭಾಗದಲ್ಲಿದೆ. ಪ್ರತಿವರ್ಷ ಇಲ್ಲಿ ಸಿದ್ದೇಶ್ವರ ಜಾತ್ರೆಯಲ್ಲಿ ದನಗಳ ಜಾತ್ರೆ ಕೂಡುತ್ತದೆ.

ಗ್ರಾಮದಲ್ಲಿ ಯಾವಾಗಲೂ ಹಲವಾರು ಉತ್ಸವಗಳು ನಡೆದುಕೊಂಡು ಬರುತ್ತವೆ. ಹೀಗಾಗಿ ಯಾವಾಗಲೂ ಸಾಂಸ್ಕೃತಿಕ ವಾತಾವರಣವಿರುತ್ತದೆ.

ಇವೆಲ್ಲದರ ಜೊತೆಗೆ ರಾಮಪ್ಪಾ ಖವಟಕೊಪ್ಪರಂತಹ ಪಾರಿಜಾತ ಕಲಾವಿದರಿಗೆ, ಚಂದ್ರಪ್ಪಾ ಭಜಂತ್ರಿಯವರಂತಹ ಶಹನಾಯಿ ವಾದಕರಿಗೆ, ದುಂಡಪ್ಪಾ ನಿಂಗಪ್ಪಾ ಬೆಳಗಲಿಯವರಂತಹ ಸಾಹಿತಿಗಳಿಗೆ, ಕರ್ನಲ್ ತೋರೋರಂತಹ ವೀರಪುತ್ರರಿಗೆ, ತಾತ್ಯಾಸಾಹೇಬ ಶೇಡಶಾರವರಂತಹ ಬಹುಮುಖ ಪ್ರತಿಭೆಗಳಿಗೆ, ಕುಂತುಸಾಗರಮುನಿ ಮಹಾರಾಜರಂತಹ ಮುನಿಗಳಿಗೆ, ಮಾಹುಲಿ ಗೋಪಾಲಾಚಾರ್ಯರಂತಹ ವಿದ್ವಾಂಸರಿಗೆ ಜನ್ಮ ನೀಡಿದ ಐನಾಪೂರ ಭಾರತಮಾತೆಯನ್ನು ಬ್ರಿಟೀಷರ ದಾಸ್ಯಶೃಂಖಲೆಯಿಂದ ಬಿಡುಗಡೆ ಮಾಡಲು ಹೋರಾಡಿದಂತಹ ಜಿ.ಎಂ. ದೇಶಪಾಂಡೆ, ಎನ್.ಎಮ್. ದೇಶಪಾಂಡೆ, ಮಧ್ವರಾವ್ ಮುತಾಲಿಕ್, ಲಕ್ಷ್ಮಣ ಪಾರಶೆಟ್ಟಿ, ಶಿವಗೌಡ ಮಸರಗುಪ್ಪಿ, ವ್ಯಾಸರಾವ ಮುತಾಲೀಕ, ಶ್ರೀನಿವಾಸಾಚಾರ್ಯ ಕಟ್ಟಿ, ರಾಮಚಂದ್ರ ಪತಕಿ, ರಂಗೋ ಮುತಾಲೀಕ, ಕೃಷ್ಣಾಚಾರ್ಯ ಜೋಶಿ, ವಿ.ಎಸ್. ಜೋಶಿ, ಎಚ್.ಆರ್. ಕುಲಕರ್ಣಿ, ಕೃಷ್ಣ ಭೀ, ಜೋಶಿ, ಗೋಪಾಳ ವಿ. ಕಕಮರಿ, ದತ್ತಾತ್ರೇಯ ಕುಲಕರ್ಣಿ ಮುಂತಾದ ಸ್ವಾತಂತ್ರ್ಯ ಹೋರಾಟಗಾರರಿಗೂ ಜನ್ಮ ನೀಡಿದ್ದು ಹೆಮ್ಮೆಯ ವಿಷಯ.

೧.೩ ವೈಧಾನಿಕತೆ :

ಈ ಪ್ರಸ್ತುತ ಅಧ್ಯಯನವನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಆಕರಗಳ ಸಹಾಯದಿಂದ ಕೈಗೊಳ್ಳಲಾಗಿದೆ.

ಡಾ. ಸೂರ್ಯನಾಥ ಕಾಮತ್‌ರವರು 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು', ಸಂಪುಟ–೧ ರಲ್ಲಿ ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾದ ಶ್ರೀನಿವಾಸಾಚಾರ್ಯ ಕಟ್ಟಿಯವರ ಬಗ್ಗೆ ಹಲವಾರು ಮಾಹಿತಿಗಳನ್ನು ನೀಡಿದ್ದಾರೆ. ಅವರೊಂದಿಗೆ ನೇರವಾಗಿ ಸಂದರ್ಶನ ನಡೆಸಿ, ಅವರಿಂದಲೇ ಅವರ ಅನುಭವಗಳನ್ನು ಕೇಳಿ ಅವುಗಳನ್ನು ದಾಖಲಿಸಿದ್ದಾರೆ. ಈ ಮಾಹಿತಿಯ ಆಧಾರದ ಮೇಲೆ ಐನಾಪೂರದ ಇನ್ನುಳಿದ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಹಲವಾರು ಮಾಹಿತಿಗಳನ್ನು ಸಂಗ್ರಹಿಸಲು ಪ್ರಯತ್ನಿಸಲಾಗಿದೆ.

ಅಣ್ಣೂ ಗುರೂಜಿಯವರು 'ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ' ಸಂಪುಟ-೧ ಮತ್ತು ೨ ರಲ್ಲಿ ಐನಾಪೂರದ ಕೆಲವು ಸ್ವಾತಂತ್ರ್ಯ ಹೋರಾಟಗಾರರ ಹೋರಾಟ, ಸೆರೆಮನೆವಾಸದ ಅವಧಿಗಳನ್ನು ಮಾತ್ರ ದಾಖಲಿಸಿದ್ದಾರೆ. ಆದರೆ ಎಲ್ಲ ಹೋರಾಟಗಾರರ ಬಗ್ಗೆ ವಿವರವಾದ ದಾಖಲೆ ಇಲ್ಲ. ಸಂಕ್ಷಿಪ್ತವಾಗಿ ಹೇಳಿದ್ದಾರೆ. ಡಾ. ಸರೋಜಿನಿ ಚವಲಾರರ 'ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು' ಕೃತಿಯಲ್ಲಿ ಐನಾಪೂರದ ಎನ್.ಎಂ. ದೇಶಪಾಂಡೆ ಮತ್ತು ಜಿ.ಎಂ. ದೇಶಪಾಂಡೆಯವರ ಬಗ್ಗೆ ಮಾತ್ರ ಉಲ್ಲೇಖಿಸಿದ್ದಾರೆ. ಅವರ ಕಾರ್ಯಚಟುವಟಿಕೆಗಳು ಮತ್ತುಇನ್ನುಳಿದ ಹೋರಾಟಗಾರರ ಬಗ್ಗೆ ಮಾಹಿತಿ ಅದರಲ್ಲಿ ಸಿಗುವುದಿಲ್ಲ. ಆದ್ದರಿಂದ ಕ್ಷೇತ್ರ ಅಧ್ಯಯನ ಕೈಗೊಂಡು ಮಾಹಿತಿ ಸಂಗ್ರಹಿಸುವ ಪ್ರಯತ್ನ ಮಾಡಲಾಗಿದೆ.

೧.೪ ಅಧ್ಯಯನದ ಆಕರಗಳು :

ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಅಧ್ಯಯನ ಕೈಗೊಳ್ಳಲು ಇರುವ ಆಕರಗಳಾದ ಗ್ರಂಥಗಳು, ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನಗಳು ಮತ್ತು ಸರಕಾರಿ ದಾಖಲೆಗಳನ್ನು ಉಪಯೋಗಿಸುವುದರ ಜೊತೆಗೆ ಸ್ಥಳೀಯ ಹಿರಿಯರ ಸಂದರ್ಶನಗಳನ್ನು ಕೈಗೊಳ್ಳಲಾಗಿದೆ.

೧. **ಗ್ರಂಥಗಳು** : ಅಣ್ಣೂ ಗುರೂಜಿಯವರ 'ಬೆಳಗಾವಿ ಜಿಲ್ಲೆಯಲ್ಲಿಯ ಸ್ವಾತಂತ್ರ್ಯ ಸಮರ' ಸಂಪುಟ ೧ ಮತ್ತು ೨, ಡಾ. ಸೂರ್ಯನಾಥ ಕಾಮತರವರ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಸಂಪುಟ-೧ ಮತ್ತು ೨, ಡಾ. ಸರೋಜಿನಿ ಚವಲಾರರ ತಮ್ಮ 'ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು', ವ್ಹಿ.ಎಸ್. ಮಾಳಿಯವರ 'ಐನಾಪೂರ : ಇತಿಹಾಸದ ಪುಟಗಳು', 'ಐನಾಪೂರ : ಸಾಂಸ್ಕೃತಿಕ ಅಧ್ಯಯನ', ಕುಲಕರ್ಣಿ ವಾಮನ ಅ. ಅವರ 'ಸ್ವಾತಂತ್ರ್ಯ ಸಂಗ್ರಾಮದ ನೆನಪುಗಳು', ಶಾಸ್ತ್ರಿ ಎಲ್.ಎಸ್. ರವರ 'ಸ್ವಾತಂತ್ರ್ಯ ಸಂಗ್ರಾಮ (ರಾಷ್ಟ್ರ, ರಾಜ್ಯ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ) ಮುಂತಾದ ಗ್ರಂಥಗಳಿಂದ ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಬರೆಯಲಾಗಿದೆ.

೨. ಸರ್ಕಾರಿ ದಾಖಲೆಗಳು

ಬೆಳಗಾವಿ ಜಿಲ್ಲಾ ಡಿವಿಜನ್ ಸೆಷನ್ ನ್ಯಾಯಾಲಯದ ಕೇಸ ನಂಬರ ಚೆ.ಸಿ.ಕ್ಷಿ/೭೧೬೧/೭೩೫೩ ರ ದಿನಾಂಕ ೨೨-೭-೧೯೭೨ ರಂದು ಮಾಡಲಾದ ನ್ಯಾಯಾಲಯದ ಆದೇಶ ಪ್ರತಿ.

೩. ಸ್ಥಳೀಯ ಹಿರಿಯರ ಸಂದರ್ಶನಗಳು : ನಮ್ಮ ಮಧ್ಯದಲ್ಲಿರುವ ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಕಣ್ಣಾರೆ ಕಂಡಂತಹ ಗ್ರಾಮದ ಕೆಲವು ಹಿರಿಯರ ಸಂದರ್ಶನಗಳು.

೪. ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನಗಳು :

ಪ್ರಜಾವಾಣಿ ಪತ್ರಿಕೆ 'ಕರ್ನಾಟಕ ದರ್ಶನ', ೧೯೯೭, ಡಿಸೆಂಬರ್-೨೦, ಇಂಡಿಯನ್ ಎಕ್ಸ್‌ಪ್ರೆಸ್, ೧೯೯೮, ಸಪ್ಟೆಂಬರ್, ೧೪, ಸಂಯುಕ್ತ ಕರ್ನಾಟಕ ಪತ್ರಿಕೆ, ಏಪ್ರಿಲ್ ೨೫, ೨೦೦೪.

ಪ್ರಸ್ತುತ ಅಧ್ಯಯನಕ್ಕೆ ಈ ಎಲ್ಲ ಆಕರಗಳನ್ನು ಬಳಸಿಕೊಂಡು ಈ ನಿಬಂಧವನ್ನು ರಚಿಸಲಾಗಿದೆ.

ಅಡಿಟಿಪ್ಪಣಿಗಳು :

೧. ವಾಮನ ಅ. ಕುಲಕರ್ಣಿ : 'ಸ್ವಾತಂತ್ರ್ಯ ಸಂಗ್ರಾಮದ ನೆನಪುಗಳು', ವ್ಹಿ.ಎಸ್. ಮಾಳಿ (ಸಂ.), *ಅಥಣಿ ತಾಲೂಕು ಸಮಗ್ರ ದರ್ಶನ*, ಪ್ರಕಾಶನ : ವಿಮೋಚನ ಪ್ರಕಾಶನ ಅಥಣಿ, ೨೦೦೭, ಪು. ೬೫.

೨. ಸೂರ್ಯನಾಥ ಕಾಮತ್ : *ಬೆಳಗಾವಿ ಜಿಲ್ಲಾ ಗೆಜೆಟಿಯರ್*, ಬೆಂಗಳೂರು, ೧೯೮೬, ಪು. ೮೪೯.

೩. "ಅದೇ", ಪು. ೮೪೯.

೪. "ಅದೇ", ಪು. ೮೪೯.

೫. "ಅದೇ", ಪು. ೮೪೯.

೬. "ಅದೇ", ಪು. ೮೪೯.

೭. ವ್ಹಿ.ಎಸ್. ಮಾಳಿ : 'ಐನಾಪೂರ : ಇತಿಹಾಸದ ಪುಟಗಳು', ವ್ಹಿ.ಎಸ್. ಮಾಳಿ (ಸಂ.) *ಐನಾಪುರ : ಸಾಂಸ್ಕೃತಿಕ ಅಧ್ಯಯನ*, ಪ್ರಕಾಶಕರು : ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ ನಿಯಮಿತ, ಐನಾಪೂರ, ೨೦೦೬, ಪು. ೩.

೮. "ಅದೇ", ಪು. ೩.

೯. ಸೂರ್ಯನಾಥ ಕಾಮತ್ : *ಬೆಳಗಾವಿ ಜಿಲ್ಲಾ ಗೆಜೆಟಿಯರ್*, ಬೆಂಗಳೂರು, ೧೯೮೬, ಪು. ೮೪೯-೫೦.

೧೦. "ಅದೇ", ಪು. ೮೫೦.

೧೧. ವ್ಹಿ.ಎಸ್. ಮಾಳಿ : 'ಐನಾಪೂರ : ಇತಿಹಾಸದ ಪುಟಗಳು', ವ್ಹಿ.ಎಸ್. ಮಾಳಿ (ಸಂ.), *ಐನಾಪುರ : ಸಾಂಸ್ಕೃತಿಕ ಅಧ್ಯಯನ*, ಪ್ರಕಾಶಕರು : ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ ನಿಯಮಿತ, ಐನಾಪೂರ, ೨೦೦೬, ಪು. ೯.

೧೨. ಸೂರ್ಯನಾಥ ಕಾಮತ್ : *ಬೆಳಗಾವಿ ಜಿಲ್ಲಾ ಗೆಜೆಟಿಯರ್*, ಬೆಂಗಳೂರು, ೧೯೮೬, ಪು. ೮೫೦.

೧೩. ಮೌಖಿಕ ಪರಂಪರೆಯಿಂದ.

ಅಧ್ಯಾಯ–ಎರಡು

ಭಾರತದ ಸ್ವಾತಂತ್ರ್ಯ ಚಳುವಳಿಯ ಹಿನ್ನಲೆ

ಭಾರತದ ಸ್ವಾತಂತ್ರ್ಯ ಚಳುವಳಿಯ ಹಿನ್ನಲೆ

ಪ್ರಾಚೀನ ಕಾಲದಿಂದಲೂ ಭಾರತ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದ ಶ್ರೀಮಂತ ದೇಶ. ಭಾರತಕ್ಕೆ ವಿದೇಶೀಯರ ದಾಳಿಗಳು ಹೊಸತೇನಲ್ಲ. ಹೂಣರು, ಕುಶಾನರು, ಅಲೆಗ್ಸಾಂಡರ್, ಮಹಮ್ಮದ್ ಘೋರಿ, ಮಹಮ್ಮದ ಘಜ್ನಿಯಂತಹ ಆಕ್ರಮಣಕಾರರು ದಾಳಿ ಮಾಡಿ ಅಪಾರ ಸಂಪತ್ತನ್ನು ದೋಚಿದರು. ೧೨ನೇ ಶತಮಾನದಲ್ಲಿ ಬಂದ ಮೊಗಲರು ಇಲ್ಲಿಯೇ ನೆಲೆನಿಂತು ನಾಲ್ಕು ಶತಮಾನಗಳ ಕಾಲ ಭಾರತವನ್ನಾಳಿದರು. ಇವರ ನಂತರ ಪೋರ್ಚುಗೀಸರು, ಡಚ್ಚರು, ಇಂಗ್ಲೀಷರು ಮತ್ತು ಫ್ರೆಂಚರು ಬಂದರು. ೧೬ನೇ ಶತಮಾನದಲ್ಲಿ ಭಾರತಕ್ಕೆ ಬಂದ ವಿದೇಶೀಯರ ವಿಶೇಷತೆ ಎಂದರೆ ಆಕ್ರಮಣ ದೃಷ್ಟಿ ಅಲ್ಲ, ವ್ಯಾಪಾರೀ ದೃಷ್ಟಿ. ಆದರೆ ಮುಂದೆ ಅವರಲ್ಲಿ ರಾಜಕೀಯ ದೃಷ್ಟಿ ಬೆಳೆಯಲಾರಂಭಿಸಿತು. ತಮ್ಮ ತಮ್ಮಲ್ಲಿ ಪರಸ್ಪರ ಪೈಪೋಟಿಗಿಳಿದರು. ಅವರಲ್ಲಿ ಇಂಗ್ಲೀಷರು ಮಾತ್ರ ತಮ್ಮ ಪ್ರತಿಸ್ಪರ್ಧಿಗಳನ್ನು ಹಿಮ್ಮೆಟ್ಟಿಸಿ ಭಾರತದಲ್ಲಿ ನೆಲೆಯೂರಿ ನಿಂತರು. ಈಸ್ಟ್ ಇಂಡಿಯಾ ಕಂಪನಿ ಎಂಬ ವ್ಯಾಪಾರಿ ಸಂಸ್ಥೆಯನ್ನು ಕಟ್ಟಿ ೧೬೦೦ ಡಿಸೆಂಬರ್ ೩೧ ರಂದು ಎಲಿಜಬೆತ್ ರಾಣಿಯಿಂದ ಭಾರತದ ವಾಣಿಜ್ಯದಲ್ಲಿ ಸ್ವಾಮ್ಯವನ್ನು ಪಡೆದು ಇಂಗ್ಲೆಂಡಿನ ವಾಣಿಜ್ಯದ ಪ್ರಗತಿಯತ್ತ ಮೊದಲ ಹೆಜ್ಜೆ ಇಟ್ಟರು.[೧]

ವ್ಯಾಪಾರೀ ದೃಷ್ಟಿಕೋನ ಕ್ರಮೇಣ ರಾಜಕೀಯ ದೃಷ್ಟಿಕೋನವಾಗಿ ಪರಿವರ್ತನೆಯಾಯಿತು. ಇದಕ್ಕೆ ಪೂರಕವಾಗಿ ಇಲ್ಲಿಯ ಪರಿಸ್ಥಿತಿಯು ಬ್ರಿಟೀಷರಿಗೆ ಅನುಕೂಲಕರವಾಗಿಯೇ ಇತ್ತು. ಇಲ್ಲಿಯ ರಾಜಕೀಯ ಅನೈಕ್ಯತೆ, ರಾಜರ ಪರಸ್ಪರ ದ್ವೇಷಾಸೂಯೆಗಳು, ಇಂಗ್ಲೀಷರಿಗೆ ವರವಾಗಿ ಪರಿಣಮಿಸಿದವು. ಜೊತೆಗೆ ಬ್ರಿಟೀಷರ ಕುತಂತ್ರಗಳು, ರಾಜಕೀಯ ಸಂಪುಗಳು, ಕೃತ್ರಿಮ ಅಮಾನುಷ ವರ್ತನೆಗಳು, ಸುಲಿಗೆ ಲೂಟಿಗಳು, ಕ್ಲೈವ್ ಮತ್ತು ವಾರನ್ ಹೇಸ್ಟಿಂಗ್ಸ ಇತ್ಯಾದಿ ಗವರ್ನರ್ ಜನರಲ್‌ಗಳ ಅನಾಚಾರಗಳು, ಹಿಂದೂಗಳ ಅಸಹಾಯಕತೆಗಳು ಇವೆಲ್ಲದರ ಫಲವಾಗಿ ಭಾರತ

ಗುಲಾಮಗಿರಿಗೆ ತುತ್ತಾಯಿತು. ಬ್ರಿಟೀಷರು ಎಲ್ಲ ಅನುಕೂಲಕರ ಪರಿಸ್ಥಿತಿಗಳನ್ನು ಸದುಪಯೋಗಪಡಿಸಿಕೊಂಡು ಸ್ಥಳೀಯ ರಾಜರ ಆಂತರಿಕ ವ್ಯವಹಾರದಲ್ಲಿ ಮೂಗು ತೂರಿಸಲು ಪ್ರಾರಂಭಿಸಿದರು. ಕೆಲವು ರಾಜರು ಇವರ ಕೈಗೊಂಬೆಗಳಾಗಿ ತಮ್ಮ ಅಧಿಕಾರವನ್ನೆಲ್ಲಾ ಬ್ರಿಟೀಷರ ಕೈಗೆ ನೀಡಿದರು. ಇವರ ಕುಟಿಲ ನೀತಿಗಳು ಮೊದಲು ಸ್ಥಳೀಯ ರಾಜರಿಗೆ ತಿಳಿಯದೇ ಇದ್ದುದರಿಂದ ಅವರಿಂದ ಮೋಸ ಹೋದರು. ನಂತರ ಬ್ರಿಟೀಷರ ಅನ್ಯಾಯ, ದಬ್ಬಾಳಿಕೆಗಳು ಅವರಿಗೆ ತಿಳಿದಾಗ ಅವರ ವಿರುದ್ಧ ಹೋರಾಟವನ್ನು ಮಾಡಿದರು. ಆದರೆ ಯುದ್ಧ ಮತ್ತು ಪಿತೂರಿಗಳಿಂದ ಬ್ರಿಟೀಷರು ಒಂದೊಂದೇ ಪ್ರದೇಶಗಳನ್ನು ತಮ್ಮ ಹಿಡಿತದಲ್ಲಿ ತೆಗೆದುಕೊಂಡರು. ಇದರ ಪರಿಣಾಮವಾಗಿಯೇ ಆಳರಸರು ಮತ್ತು ಬ್ರಿಟೀಷರ ಮಧ್ಯೆ ಪ್ಲಾಸೀ ಮತ್ತು ಬಕ್ಸಾರ್ ಕಾಳಗಗಳಾದವು.

ಪ್ಲಾಸೀ ಮತ್ತು ಬಕ್ಸಾರ್ ಕಾಳಗಗಳಲ್ಲಿ ಜಯಶಾಲಿಗಳಾದ ಬ್ರಿಟೀಷರು ಹಲವಾರು ಪ್ರದೇಶಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು. ಈಗ ಇಂಗ್ಲೀಷರು ಬಂಗಾಳ, ಬಿಹಾರ ಮತ್ತು ಓರಿಸ್ಸಾಗಳ ನಿರ್ವಿವಾದ ಪ್ರಭುಗಳಾದರು.[೨] ನಂತರ ಬ್ರಿಟೀಷರು ಕ್ರಮೇಣ ತಮ್ಮ ದೃಷ್ಟಿಯನ್ನು ದಕ್ಷಿಣ ಭಾರತದತ್ತ ಹರಿಸಿದರು. ದಕ್ಷಿಣದಲ್ಲಿ ಹೈದರ್ ಬ್ರಿಟೀಷರಿಗೆ ವೈರಿಯಾಗಿದ್ದ. ಹೈದರನೂ ಸಹ ಬ್ರಿಟೀಷರನ್ನು ಭಾರತದಿಂದ ಹೊರಹಾಕಬೇಕೆಂದು ಬಯಸಿದ್ದ. ಆದರೆ ಮರಾಠರ ಮತ್ತು ನಿಜಾಮ ಬ್ರಿಟೀಷರಿಗೆ ತೋರಿಸಿದ ನಿಷ್ಠೆಯಿಂದ ಹೈದರ್ ಸೋತನು. ಹೈದರಾಲಿಯ ನಂತರ ಬಂದ ಟಿಪ್ಪು ಸಹ ಬ್ರಿಟೀಷರನ್ನು ಹೊಡೆದೋಡಿಸುವ ಕನಸು ಕಂಡಿದ್ದನು. ೧೭೯೦ ಜೂನ್ ೧ ರಂದು ಮರಾಠರು ಮತ್ತು ೧೭೯೦ ಜುಲೈ ೪ ರಂದು ನಿಜಾಮ ಇಂಗ್ಲೀಷರೊಂದಿಗೆ ಕರಾರಿಗೆ ಸಹಿ ಹಾಕಿದರು. ಮರಾಠರು ಮತ್ತು ನಿಜಾಮ ಟಿಪ್ಪುವಿಗೆ ಎದುರಾಗಿ ಇಂಗ್ಲೀಷರಿಗೆ ನೆರವಾಗಲು ಒಪ್ಪಿದರು. ಗೆದ್ದ ರಾಜ್ಯವನ್ನು ಮೂವರು ಹಂಚಿಕೊಳ್ಳಬೇಕೆಂದು ಒಪ್ಪಿಕೊಂಡರು.[೩]

೩ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಸೋಲನ್ನನುಭವಿಸಿದ. ಆದರೂ ಛಲ ಬಿಡದೆ ಟಿಪ್ಪೂ ಮತ್ತೊಮ್ಮೆ ಇಂಗ್ಲೀಷರ ವಿರುದ್ಧ ಹೋರಾಟಕ್ಕಿಳಿದನು. ವೀರಾವೇಶದಿಂದ ಹೋರಾಡಿದರೂ ಪಿತೂರಿಗಾರರಾದ ಇಂಗ್ಲೀಷರೇ ಜಯಶಾಲಿಗಳಾದರು. ದಕ್ಷಿಣ ಭಾರತದಲ್ಲಿ ಪ್ರಬಲ ವೈರಿಯನ್ನು ನಿರ್ನಾಮ ಮಾಡುವುದರ ಮೂಲಕ ದಕ್ಷಿಣದಲ್ಲಿಯೂ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದರು.

ಬ್ರಿಟಿಷರು ಇಷ್ಟಕ್ಕೆ ಸುಮ್ಮನಿರದೆ ಮರಾಠರ ಆಡಳಿತದಲ್ಲಿ ಮಧ್ಯ ಪ್ರವೇಶಿಸಲು ಪ್ರಾರಂಭಿಸಿದರು. ಮರಾಠರ ದೌರ್ಬಲ್ಯಗಳನ್ನು ಸರಿಯಾಗಿ ಬಳಸಿಕೊಂಡರು. ಪಿತೂರಿ ಅನ್ಯಾಯಗಳು ಅವರಲ್ಲಿ ರಕ್ತಗತವಾಗಿಯೇ ಇದ್ದವು. ಇದರಿಂದಾಗಿಯೇ ಮರಾಠರಿಗೆ ಮತ್ತು ಇಂಗ್ಲೀಷರಿಗೆ ಮಧ್ಯ ಮೂರು ಆಂಗ್ಲೋ ಮರಾಠಾ ಯುದ್ಧಗಳಾದವು. ಇಂಗ್ಲೀಷರೊಂದಿಗೆ ಮೊದಲ ಘರ್ಷಣೆಯಲ್ಲಿಯೇ ಮರಾಠಾ ಶಕ್ತಿಯು ಬುಡಸಹಿತ ತತ್ತರಿಸಿತು. (೧೭೭೫–೧೭೮೨). ಎರಡನೇಯ ಯುದ್ಧದಲ್ಲಿ ಸೋತುಹೋದರು, (೧೮೦೩–೧೮೦೫), ಮೂರನೇಯದರಲ್ಲಿ ನಾಶವಾದರು (೧೮೧೭–೧೮೧೮).[೪]

ಬ್ರಿಟೀಷರು (ಕಂಪನಿ) ಮುಂದೆ ತಮ್ಮ ದುರಾಡಳಿತವನ್ನು ಪ್ರಾರಂಭಿಸಿದರು. ಈ ದುರಾಡಳಿತದ ಫಲವೇ ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ. ಗವರ್ನರ್ ಜನರಲ್‌ಗಳ ಮೋಸದ ನೀತಿಗಳು ಆಳರಸರ ಆಕ್ರೋಶಕ್ಕೆ ಕಾರಣವಾದವು. ಲಾಡ್ ಡಾಲ್ ಹೌಸಿಯು 'ದತ್ತು ಪುತ್ರರಿಗೆ ಹಕ್ಕಿಲ್ಲ' ಎಂಬ ನೀತಿಯನ್ನು ಜಾರಿಗೆ ತಂದು ಹಲವಾರು ಪ್ರದೇಶಗಳನ್ನು ವಶಪಡಿಸಿಕೊಂಡನು. ಸಾತಾರಾ, ಝಾನ್ಸಿ, ಜೈಪುರ, ಸಂಭಲಪುರ, ಉದಯಪುರಗಳು ಈ ನೀತಿಗೆ ಬಲಿಯಾದ ರಾಜ್ಯಗಳು.[೫] ಇದರಿಂದ ಸಹಜವಾಗಿಯೇ ಭಾರತೀಯರ ಕಣ್ಣಲ್ಲಿ ಇಂಗ್ಲೀಷರು ವೈರಿಗಳಾದರು. ಡಾಲ್ ಹೌಸಿಯು ಭಾರತೀಯ ರಾಜರು ಪಡೆಯುತ್ತಿದ್ದ ಬಿರುದು ಬಾವಲಿಗಳನ್ನು ರದ್ದುಪಡಿಸಿದನು.[೬] ಇದು ರಾಜರ ಘನತೆ ಗೌರವಗಳಿಗೆ ಧಕ್ಕೆಯನ್ನುಂಟುಮಾಡಿತು. ಬಿರುತು ಬಾವಲಿಗಳ ರಾಜರ ಘನತೆ ಗೌರವಗಳ ಪ್ರತೀಕವಾಗಿದ್ದವು. ಅವುಗಳನ್ನು ರದ್ದುಪಡಿಸಿದ್ದರಿಂದ ರಾಜರಲ್ಲಿ ತಮ್ಮ ಸ್ಥಾನಗಳನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬ ಭಾವನೆ ಮೂಡಿತು.

ಲಾರ್ಡ್ ವೆಲ್ಲೆಸ್ಲಿಯ ಸೈನ್ಯ ಸಹಾಯಕ ಪದ್ಧತಿ ಸಹ ಭಾರತೀಯ ರಾಜರಲ್ಲಿ ಅಸಮಾಧಾನದ ಹೊಗೆಯಾಡಿಸಿತು.[೭] ಸಹಾಯಕ ಸೈನ್ಯ ಪದ್ಧತಿಯಿಂದ ಸ್ಥಳೀಯ ರಾಜರುಗಳು ಕೈಗೊಂಬೆಗಳಾಗಿ ತಮ್ಮ ಅಧಿಕಾರಗಳನ್ನೆಲ್ಲಾ ಅವರಿಗೆ ಒಪ್ಪಿಸುವಂತಾಯಿತು. ಅವರು ಒಪ್ಪಿದಾಗಲೇ ಯುದ್ಧ ಅಥವಾ ಶಾಂತಿ ಒಪ್ಪಂದಕ್ಕೆ ಸಹಿ ಹಾಕಬೇಕಿತ್ತು. ರಾಜರ ಆಸ್ಥಾನದಲ್ಲಿ ಸೈನ್ಯವನ್ನು ಇಟ್ಟು ಅಲ್ಲಿಯ ಆಗು ಹೋಗುಗಳನ್ನು ಗಮನಿಸುವ ಉದ್ದೇಶವನ್ನು ಇಂಗ್ಲೀಷರು ಹೊಂದಿದ್ದರು. ಪ್ರಥಮ ಬಾರಿಗೆ ಔಧ್ ೧೭೬೫ ರಲ್ಲಿ ಈ ಒಪ್ಪಂದಕ್ಕೆ ಒಳಗಾಯಿತು.[೮] ಇದರಿಂದ ಕಂಪನಿಗೆ ಅನುಕೂಲತೆಗಳಿದ್ದರೂ ದೇಶೀಯ ರಾಜರಿಗೆ ಅನಾನುಕೂಲತೆಯಾಯಿತು. ಇವರೆಲ್ಲ ಇಂಗ್ಲೀಷರ ಬೆಂಬಲಿಗರಾದರು. ಹಂತ ಹಂತವಾಗಿ ಬ್ರಿಟೀಷರ ಕೈಗೆ ತಮ್ಮ

ಅಧಿಕಾರವನ್ನು ಹಸ್ತಾಂತರಿಸಿದರು. ಬ್ರಿಟೀಷರು ತಾರತಮ್ಯ ನೀತಿಯನ್ನು ಅನುಸರಿಸಿದರು. ರೈತರಿಂದ ಅತೀಯಾದ ಕಂದಾಯ ವಸೂಲಿ ಮಾಡಿದರು. ರೈತರ ರಕ್ತ ಹೀರಿದರು. ಇದರಿಂದ ರೈತರು ಬ್ರಿಟೀಷರ ವಿರುದ್ಧ ಸೇಡಿನ ಮನೋಭಾವ ಬೆಳೆಸಿಕೊಂಡರು. ೧೮೫೨ ರಲ್ಲಿ ಜಾರಿಗೆ ಬಂದ ಇನಾಂ ಕಮೀಶನ್ ಶಿಕ್ಷಣ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಹಾಗೂ ಪಂಡಿತರು ಪಡೆದಿದ್ದ ಭೂಮಿಯನ್ನು ಮರಳಿ ಪಡೆಯಿತು.[೯] ಇದು ಭಾರತೀಯರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟುಮಾಡಿತು.

ಬ್ರಿಟೀಷರು ಭಾರತಕ್ಕೆ ಬಂದಿದ್ದೇ ಸಂಪತ್ತಿನ ವ್ಯಾಮೋಹದಿಂದ. ಹೀಗಾಗಿ ಸಂಪತ್ತನ್ನು ದೋಚುವುದೇ ಅವರ ಮುಖ್ಯ ಉದ್ದೇಶವಾಗಿತ್ತು. ಎಷ್ಟು ಸಾಧ್ಯವೋ ಅಷ್ಟು ಸಂಪತ್ತನ್ನು ಇಂಗ್ಲೆಂಡಿಗೆ ಸಾಗಿಸಿದರು. ಭಾರತದ ಕೈಗಾರಿಕೆಗಳಿಗೆ ಬೇಕಿದ್ದ ಕಚ್ಚಾ ವಸ್ತುಗಳನ್ನು ಇಂಗ್ಲೆಂಡಿಗೆ ಕೊಂಡೊಯ್ದರು. ಇದರಿಂದ ದೇಶೀಯ ಕೈಗಾರಿಕೆಗಳಿಗೆ ಭಾರೀ ಹೊಡೆತ ಉಂಟಾಯಿತು. ಗೃಹಕೈಗಾರಿಕೆಗಳು ನಾಶವಾಗಿ ಭಾರತೀಯ ಕುಶಲಕರ್ಮಿಗಳು ನಿರುದ್ಯೋಗಿಗಳಾದರು. ಇಂಗ್ಲೆಂಡಿನ ಕೈಗಾರಿಕೆಗಳಿಗೆ ರಕ್ಷಣೆ ಕೊಡಲು ಭಾರತೀಯ ವಸ್ತುಗಳ ಮೇಲೆ ಅಧಿಕ ತೆರಿಗೆ ವಿಧಿಸುವುದು ಹಾಗೂ ಇಂಗ್ಲೆಂಡಿನ ಉತ್ಪನ್ನಕ್ಕೆ ಧಕ್ಕೆಯಾಗುವ ಭಾರತದ ಉತ್ಪನ್ನಗಳನ್ನು ನಿಷೇಧಿಸುವುದು ಅವರ ಕೈಗಾರಿಕಾ ನೀತಿಯ ಸಾರವಾಗಿತ್ತು.[೧೦]

ಬ್ರಿಟೀಷರ ನೀತಿಯಿಂದಾಗಿ ಭಾರತೀಯರು ನಿರುದ್ಯೋಗಿಗಳಾದರು. ರಾಜರ ಸೈನ್ಯವನ್ನು ವಿಸರ್ಜಿಸಿದ್ದರಿಂದ ಸೈನಿಕರು, ಬೀದಿ ಪಾಲಾದರು. ತಮ್ಮ ಜೀವನಾಧಾರ ಕಳೆದುಕೊಂಡರು. ಔಧನ ೬೦,೦೦೦ ಸೈನಿಕರು ಉದ್ಯೋಗ ಕಳೆದುಕೊಂಡರು.[೧೧]

ಕ್ರಿಶ್ಚಿಯನ್ ಮತಕ್ಕೆ ಮತಾಂತರಗೊಳಿಸುವ ನೀತಿ ಹಿಂದೂಗಳನ್ನು ಕೆರಳಿಸಿತು. ಆಸೆ ಆಮಿಶಗಳ ಮೂಲಕ ಭಾರತೀಯರನ್ನು ಮತಾಂತರಗೊಳಿಸುವ ಪ್ರಕ್ರಿಯೆ ಅವರ ವಿರುದ್ಧ ಜನರಲ್ಲಿ ದ್ವೇಷದ ಮನಸ್ಥಿತಿ ನಿರ್ಮಾಣವಾಗಲು ಸಹಾಯಕಾರಿಯಾಯಿತು. ಮತಾಂತರಗೊಂಡವರನ್ನು ರೈಸ್ ಕ್ರಿಶ್ಚಿಯನ್ ಎಂದು ಕರೆಯಲಾಗುತ್ತಿತ್ತು.[೧೨]

ಭಾರತೀಯರನ್ನು ಗುಲಾಮರ ಹಾಗೆ ನೋಡಿಕೊಳ್ಳುತ್ತಿದ್ದರು. ಹಿಂದೂಗಳ ದೇವತೆಗಳನ್ನು ಗ್ರಂಥಗಳನ್ನು ಅವಮಾನಿಸುತ್ತಿದ್ದುದು ಜನರ ಅಸಹನೆಗೆ ಕಾರಣವಾಯಿತು. ಲಾರ್ಡ್ ಮೆಕಾಲೆ ಹಿಂದೂ ಧರ್ಮ ಗ್ರಂಥಗಳನ್ನು ಟೀಕಿಸಿದನು. ಸೈನಿಕರಿಗೆ ಹೆಚ್ಚುವರಿ ಭತ್ಯೆಯನ್ನು ಬ್ರಿಟೀಷರು ನೀಡುತ್ತಿರಲಿಲ್ಲ. ಮತ್ತು ವಿದೇಶಗಳಿಗೆ ಹೋಗುವುದೆಂದರೆ ಭಾರತೀಯ ಸಂಪ್ರದಾಯಸ್ಥರ ಭಾವನೆಗಳಿಗೆ

ವಿರುದ್ಧವಾದುದಾಗಿತ್ತು. ಹೀಗಾಗಿ ಭಾರತೀಯ ಸೈನಿಕರು ವಿದೇಶಗಳಿಗೆ ಕಳಿಸಲು ಹಿಂಜರಿಯುತ್ತಿದ್ದರು. ಆದರೆ ಒತ್ತಾಯ ಪೂರ್ವಕವಾಗಿ ಇಂಗ್ಲೀಷರು ಕಳಿಸಲು ಕಾನೂನುಗಳನ್ನು ಜಾರಿಗೆ ತಂದರು. ೧೮೫೬ ರಲ್ಲಿ ಕ್ಯಾನಿಂಗನು ಜನರಲ್ ಸರ್ವಿಸ್ ಎನ್‌ಲೀಸ್ಟ್‌ಮೆಂಟ್ ಕಾಯಿದೆಯನ್ನು ಜಾರಿ ಮಾಡಿನು.[೧೪] ಇದರಿಂದ ಸೈನಿಕರಲ್ಲಿ ಅತೃಪ್ತಿ ಉಂಟಾಯಿತು.

ಬ್ರಿಟೀಷರು ಮುಂದೆ ಜ್ಯೂರಿ ನ್ಯಾಯಾಂಗ ಪದ್ಧತಿಯನ್ನು ಜಾರಿಗೊಳಿಸಿದರು ಮತ್ತು ಖಾಯಂ ಜಮೀನ್‌ದಾರಿ ಪದ್ಧತಿಗಳನ್ನು ಪರಿಚಯಿಸಿದರು. ಇವುಗಳಿಂದ ಜನತೆ ಮತ್ತು ರೈತರು ತತ್ತರಿಸಿ ಹೋದರು. ಜ್ಯೂರಿ ಪದ್ಧತಿ ವೆಚ್ಚದಾಯಕವಾಗಿತ್ತು ಮತ್ತು ಜಮೀನ್‌ದಾರಿ ಪದ್ಧತಿಯು ಎಷ್ಟೇ ಕಷ್ಟದ ಪರಿಸ್ಥಿತಿಯಲ್ಲಿದ್ದರೂ ರೈತರನ್ನು ಶೋಷಿಸುವುದನ್ನು ತಪ್ಪಿಸಲಿಲ್ಲ. ಇನ್ನೂ ಹಲವಾರು ಕಾಯಿದೆಗಳನ್ನು ಪದ್ಧತಿಗಳನ್ನು ಜಾರಿಗೆ ತಂದು ಭಾರತೀಯರನ್ನು ಶೋಷಿಸಿದರು.

ಭಾರತೀಯರು ಗುಲಾಮರು, ಅನಾಗರೀಕವೆಂದು ಭಾವಿಸಿದ್ದ ಬ್ರಿಟೀಷರ ದಬ್ಬಾಳಿಕೆ ಅನ್ಯಾಯಗಳು ಎಲ್ಲೆ ಮೀರಿದವು. ಪ್ರತಿಯೊಂದರಲ್ಲಿಯೂ ಭಾರತೀಯರನ್ನು ಶೋಷಿಸುವುದೊಂದೇ ಅವರ ಕುಕೃತ್ಯವಾಗಿತ್ತು. ಇವರ ನೀತಿಗಳಿಂದ ಭಾರತ ಬಡತನಕ್ಕೆ ಜಾರಿತು. ಗ್ರಾಮಗಳು ಪರಾವಲಂಬಿಯಾದವು ಜನ ಬೀದಿಗೆ ಬಿದ್ದರು. ತಮ್ಮ ಈ ದುಃಸ್ಥಿತಿಯನ್ನು ಅರಿತುಕೊಂಡು ಭಾರತೀಯರು ಬ್ರಿಟೀಷರ ಧೂರ್ತ ಆಕ್ರಮಣ ದಾಸ್ಯಶೃಂಖಲೆಯನ್ನು ಕಿತ್ತೊಗೆಯಲು ಪ್ರಯತ್ನಿಸಿದರು. ಅದು ಮೊದಲ ಬಾರಿಗೆ ೧೮೫೭ ರಲ್ಲಿ. ಬ್ರಿಟೀಷರು ಭಾರತೀಯರಿಂದ ಇಂತಹ ಪ್ರತಿಭಟನೆಯನ್ನು ಬಹುಶಃ ನಿರೀಕ್ಷಿಸಿರಲಿಲ್ಲ. ಇದು ಬ್ರಿಟೀಷರ ದಬ್ಬಾಳಿಕೆಯ ವಿರುದ್ಧ ವಿರುದ್ಧ ಭಾರತೀಯರ ಮೊದಲ ಹೋರಾಟ. ಅದುವೇ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ. ಬ್ರಿಟೀಷರ ದುರಹಂಕಾರಕ್ಕೆ ಭಾರತೀಯರು ನೀಡಿದ ತಕ್ಕ ಉತ್ತರವಾಗಿತ್ತು. ಮಂಗಲ್‌ಪಾಂಡೆ, ಝಾನ್ಸಿರಾಣಿ ಲಕ್ಷ್ಮೀಬಾಯಿ, ತಾತ್ಯಾಟೋಪಿ, ನಾನಾಸಾಹೇಬರಂತಹ ದೇಶಭಕ್ತರು ಇದರಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು. ಆದರೆ ಬ್ರಿಟೀಷರ ಕುತಂತ್ರಗಳು ಕೆಲವು ರಾಜರ, ನಿಷ್ಠೆಯ ಬ್ರಿಟೀಷ್ ಸೇವೆ, ಭಾರತೀಯ ಸೈನ್ಯದಲ್ಲಿದ್ದ ಅಸಂಘಟನೆ, ಅಶಿಸ್ತು ಮುಂತಾದವುಗಳಿಂದ ಹೋರಾಟ ವಿಫಲವಾಯಿತು. ಆದರೆ ಇದು ಮುಂದಿನ ರಾಷ್ಟ್ರೀಯ ಚಳುವಳಿಗೆ ಪ್ರೇರಣೆಯಾಯಿತು. ೧೯೪೭ ರ ಹೋರಾಟಕ್ಕೆ ಜನರಲ್ಲಿ ಜಾಗೃತಿಯನ್ನು ಉಂಟುಮಾಡಲು ಸಹಾಯಕಾರಿಯಾಯಿತು.

ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಿಂದ ಭಾರತೀಯರು ಬೇಸತ್ತಿದ್ದರೆಂಬುದಕ್ಕೆ ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೇ ನಿದರ್ಶನ. ಇದನ್ನು ಅರಿತ ಇಂಗ್ಲೆಂಡಿನ ರಾಣಿ ಎಲಿಜಬೆತ್ ಕಂಪನಿಯ ಆಳ್ವಿಕೆಯನ್ನು ೧೮೫೮ ರಲ್ಲಿ ಮೊಟಕುಗೊಳಿಸಿ ತಾನೇ ನೇರವಾಗಿ ಅಧಿಕಾರವನ್ನು ವಹಿಸಿಕೊಂಡಳು. ಕೆಲವೊಂದು ಬದಲಾವಣೆಗಳನ್ನು ಮಾಡಿ ಭಾರತೀಯರಿಗೆ ತಮ್ಮ ಮೇಲೆ ನಂಬಿಕೆ ಬರುವ ಹಾಗೆ ಮಾಡಿದಳು.

ಬ್ರಿಟೀಷರು ಜನರ ಕೈಯಲ್ಲಿದ್ದ ಆಯುಧಗಳನ್ನು ಕಿತ್ತುಕೊಂಡರು. ಸಭೆ ಸಮಾರಂಭಗಳನ್ನು ನಡೆಸದಂತೆ ನಿರ್ಬಂಧಗಳನ್ನು ಹಾಕಿ ಗುಲಾಮರನ್ನಾಗಿ ಮಾಡಿದರು. ಇದರಿಂದ ಜನಜಾಗೃತಿ ಮಾಡಲು ದೇಶಾದ್ಯಂತ ಮಹಾನ್ ವ್ಯಕ್ತಿಗಳು ಹುಟ್ಟಿಕೊಂಡರು. ಬ್ರಿಟೀಷರ ವಿರುದ್ಧ ಪ್ರತಿಭಟಿಸಲು ಆತ್ಮಸ್ಥೈರ್ಯ ತುಂಬಿದರು. ಸಮಾಜದ ದೌರ್ಬಲ್ಯಗಳನ್ನು ತೊಲಗಿಸಲು ಪ್ರಯತ್ನಿಸಿದರು. ಸಮಾಜ ಅವನತಿಯತ್ತ ಸಾಗುತ್ತಿತ್ತು. ಅದನ್ನು ಪುನಃ ಮೇಲೆತ್ತಲು ಅನೇಕ ಸಂಘ ಸಂಸ್ಥೆಗಳು ಹುಟ್ಟಿಕೊಂಡವು. ಇಂತಹವುಗಳಲ್ಲಿ ಬ್ರಹ್ಮೋ ಸಮಾಜವು ಒಂದು. ರಾಜಾರಾಮ್ ಮೋಹನ್ ರಾಯರು ೧೮೨೮ ರಲ್ಲಿ ಬ್ರಹ್ಮಸಮಾಜವನ್ನು ಸ್ಥಾಪಿಸಿದರು.[೧೫] ಇವರು ಸಮಾಜದಲ್ಲಿದ್ದ ಅನಿಷ್ಠ ಪದ್ಧತಿಗಳನ್ನು ಖಂಡಿಸಿದರು. ಇವರ ವಿಚಾರಗಳು ಜನರ ಮೇಲೆ ಪ್ರಭಾವ ಬೀರಿದವು. ಸತೀ ಪದ್ಧತಿಯನ್ನು ತೊಡೆದುಹಾಕಲು ಶ್ರಮಿಸಿದರು. ಇದರ ಫಲವಾಗಿ ಲಾರ್ಡ್ ವಿಲಿಯಂ ಬೆಂಟಿಂಕ್‌ನು ಡಿಸೆಂಬರ್ ೪, ೧೮೨೯ ರಂದು ಸತೀ ಸಹಗಮನ ನಿಷೇಧ ಕಾಯಿದೆಯನ್ನು ಜಾರಿಗೆ ತಂದು ಅದರ ಆಚರಣೆಯನ್ನು ಶಿಕ್ಷಾರ್ಹ ಅಪರಾಧ ಎಂದು ಘೋಷಿಸಿದನು.[೧೬] ಪತ್ರಿಕೆಗಳು ಮತ್ತು ಭಾಷಣಗಳ ಮೂಲಕ ಜನರಲ್ಲಿ ದೇಶಾಭಿಮಾನ ಮೂಡಿಸಿದರು.

ಇವರ ವಿಚಾರಗಳು ಜನರಲ್ಲಿ ತಿಳುವಳಿಕೆಯನ್ನು ಮೂಡಿಸಿದವು. ಸಾಮಾಜಿಕ ಪರಿವರ್ತನೆಗಾಗಿ ಶ್ರಮಿಸಿದರು. ದಯಾನಂದ ಸರಸ್ವತಿಯವರು ರಾಜಾರಾಮ ಮೋಹನ್ ರಾಯರಂತೆ ಒಬ್ಬ ಸಮಾಜ ಸುಧಾರಕರು. ಇವರೂ ಸಹ ಸಾಮಾಜಿಕ ಪಿಡುಗುಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಿದವರು. ವೇದಗಳ ಅಧ್ಯಯನವನ್ನು ಪ್ರೋತ್ಸಾಹಿಸಿದರು. ದಯಾನಂದರು ಏಪ್ರಿಲ್ ೧೦, ೧೮೭೫ ರಂದು ಲಾಹೋರಿನಲ್ಲಿ ಆರ್ಯ ಸಮಾಜವನ್ನು ಸ್ಥಾಪಿಸಿದರು.[೧೭]

ಸ್ವಾಮಿ ವಿವೇಕಾನಂದರೂ ಸಹ ಜನಜಾಗೃತಿಯ ಕಾರ್ಯ ಮಾಡಿದರು. ಹಿಂದೂ ಧರ್ಮದ ಮಹತ್ವವನ್ನು ಸಾರಿದರು. ರಾಮಕೃಷ್ಣ ಮಿಶನ್‌ನ್ನು ಸ್ಥಾಪಿಸಿದರು.

ಆ ಮೂಲಕ ಹಲವಾರು ಸಾಮಾಜಿಕ ಕಾರ್ಯಗಳನ್ನು ಮಾಡಿದರು. ೧೮೯೩ ರಲ್ಲಿ ಚಿಕ್ಯಾಗೋಗೆ ಹೋಗಿ ಅಲ್ಲಿ ಭಾರತೀಯ ಧರ್ಮ ಪರಂಪರೆಯ ಮಹತ್ವವನ್ನು ತಿಳಿಸಿದರು. ಶಾಲೆ, ಕಾಲೇಜುಗಳನ್ನು ಪ್ರಾರಂಭಿಸಿ ಬಡತನ, ಅನಕ್ಷರತೆ ಮತ್ತು ಜಾತೀಯತೆಗಳ ನಿರ್ಮೂಲನೆಗೆ ಶ್ರಮಿಸಿದರು. ಪ್ರಬುದ್ಧ ಭಾರತ ಮತ್ತು ಉದ್ಬೋಧನ ಎಂಬ ಪತ್ರಿಕೆಗಳನ್ನು ಹೊರಡಿಸಿದರು.[೧೮]

ಮೆಕಾಲೆ ವರದಿಯು ಬಂದ ಮೇಲೆ ಭಾರತದಲ್ಲಿ ಇಂಗ್ಲೀಷ್ ಶಿಕ್ಷಣ ಹೆಚ್ಚಾಯಿತು. ೧೮೧೩ ರ ಚಾರ್ಟರ್ ಕಾಯ್ದೆಯಂತೆ ೧ ಲಕ್ಷ ರೂಪಾಯಿಗಳನ್ನು ಭಾರತದಲ್ಲಿ ಇಂಗ್ಲೀಷ್ ಶಿಕ್ಷಣಕ್ಕಾಗಿ ಬಳಸಲಾಯಿತು. ರಾಷ್ಟ್ರೀಯ ನಾಯಕರು ಜನರನ್ನು ಸಂಘಟಿಸಿದರು. ಒಂದು ರಾಷ್ಟ್ರೀಯ ಪಕ್ಷವನ್ನು ಸ್ಥಾಪಿಸಬೇಕೆಂಬ ಉದ್ದೇಶವನ್ನು ಹೊಂದಿದ್ದರು. ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ೧೮೮೫ರಲ್ಲಿ ಸ್ಥಾಪಿಸಿದರು. ಈ ಸಂಸ್ಥೆ ಮೊದಲು ಬ್ರಿಟಿಷ್ ಸರ್ಕಾರಕ್ಕೆ ವಿನಯದಿಂದ ಮನವಿಗಳನ್ನು ಸಲ್ಲಿಸುತ್ತಿತ್ತು.[೧೯]

ಕಾಂಗ್ರೆಸ್ಸ್ ಸ್ಥಾಪನೆಯಾದಾಗಿನಿಂದ ೨೦ ವರ್ಷ ಕಾಂಗ್ರೆಸ್ ಮಂದಗಾಮಿಗಳ ಕೈಯಲ್ಲಿ ಇತ್ತು. ಇವರಲ್ಲಿ ದಾದಾಬಾಯಿ ನವರೋಜಿ, ಫಿರೋಜ್ ಶಾ ಮೆಹ್ತಾ, ಸುರೇಂದ್ರನಾಥ ಬ್ಯಾನರ್ಜಿಯವರು ಇದ್ದರು. ಇವರ ಮಾರ್ಗ ಸೌಮ್ಯವಾಗಿತ್ತು. ಕಾನೂನಿನ ಚೌಕಟ್ಟಿನಲ್ಲಿಯೇ ಕಾರ್ಯಗಳನ್ನು ಮಾಡುತ್ತಿದ್ದರು. ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸುವುದು, ಸ್ವದೇಶಿ ವಸ್ತುಗಳ ಪ್ರಚಾರ, ಪಾನ ನಿಷೇಧ ಮುಂತಾದವುಗಳು ಪ್ರಮುಖ ಕಾರ್ಯಗಳಾಗಿದ್ದವು. ಗೋಖಲೆಯವರೂ ಸಹ ಪ್ರಮುಖ ಮಂದಗಾಮಿಗಳು. ಇವರು ೧೯೦೫ ರಲ್ಲಿ ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿಯನ್ನು ಸ್ಥಾಪಿಸಿದರು.[೨೦] ಹೆಸರೇ ಹೇಳುವ ಹಾಗೆ ಇದು ಭಾರತದ ಸೇವೆಗೆ ಸ್ಥಾಪನೆಯಾದದ್ದು.

ದಾದಾಬಾಯಿ ನವರೋಜಿಯವರು ಭಾರತದ ಸಂಪತ್ತು ಹೇಗೆ ಬರಿದಾಗುತ್ತಿದೆ ಎಂಬುದನ್ನು ತಿಳಿಸಿದರು. ಇವರ ಭಾಷಣಗಳು, ಗ್ರಂಥಗಳು ಜನರಲ್ಲಿ ಚಳುವಳಿಯ ಬಗ್ಗೆ ಉತ್ಸಾಹವನ್ನು ಮೂಡಿಸಿದವು. ಮಂದಗಾಮಿಗಳು ಬ್ರಿಟೀಷರ ಆರ್ಥಿಕ ಶೋಷಣೆಯನ್ನು ಬಯಲಿಗೆ ಎಳೆದರು.

ಮಂದಗಾಮಿಗಳ ನಂತರ ಬಂದವರು ತೀವ್ರಗಾಮಿಗಳು. ಲಾಲ ಬಾಲ ಪಾಲರು ಪ್ರಮುಖ ತೀವ್ರಗಾಮಿ ನಾಯಕರು. ಇವರೂ ಸಹ ಜನಜಾಗೃತಿ ಕಾರ್ಯ ಮಾಡಿದರು. ಪತ್ರಿಕೆಗಳಲ್ಲಿ ಪ್ರಭಾವಶಾಲಿ ಲೇಖನಗಳನ್ನು ಬರೆದು ನೈಜ ಪರಿಸ್ಥಿತಿಯ

ಅರಿವನ್ನು ಮೂಡಿಸಿದರು. ತಿಲಕರು ನಾಟಕಗಳ ಮೂಲಕ, ಉತ್ಸವಗಳ ಮೂಲಕ ಜಾಗೃತಿ ಮಾಡಿದರೂ ನಾಟಕಗಳಲ್ಲಿಯ ಪಾತ್ರಗಳು ಪೌರಾಣಿಕವಾಗಿದ್ದರೆ ಅದರಿಂದ ಸಮಾಜಕ್ಕೆ ಹೋಗುವ ಸಂದೇಶ ವಾಸ್ತವ ಪರಿಸ್ಥಿತಿಗೆ ಅನುಗುಣವಾಗಿತ್ತು. ಬ್ರಿಟೀಷರು ಭಾರತೀಯರ ಧಾರ್ಮಿಕ ಆಚರಣೆಗಳಿಗೆ ಅಡ್ಡಿಮಾಡುತ್ತಿರಲಿಲ್ಲ. ಇದರಿಂದ ತಿಲಕರು ಹಬ್ಬಗಳನ್ನು ಸಾರ್ವಜನಿಕ ಉತ್ಸವಗಳಾಗಿ ಮಾಡಿ ಜನರಲ್ಲಿ ಸಂಘಟನೆಯ ಮನೋಭಾವವನ್ನು ಮೂಡಿಸಿದರು. ೧೮೯೪ ರಲ್ಲಿ ಗಣೇಶೋತ್ಸವ ಮತ್ತು ೧೮೯೬ ರಲ್ಲಿ ಶಿವಾಜಿ ಉತ್ಸವಗಳನ್ನು ಆರಂಭಿಸಿದರು.[೨೧] ೧೯೧೬ ರಲ್ಲಿ ಹೋಂರೂಲ್ ಲೀಗ್ ಎಂಬ ಸಂಸ್ಥೆಯನ್ನು ಆರಂಭಿಸಿದರು. ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು ಅದನ್ನು ಪಡೆದೇ ತೀರುತ್ತೇನೆ ಎಂದು ಘೋಷಣೆ ಮಾಡಿದರು.[೨೨] ಅದರ ಮೂಲಕ ದೇಶವನ್ನು ರಾಷ್ಟ್ರೀಯ ಹೋರಾಟಕ್ಕೆ ಅಣಿಗೊಳಿಸಿದರು.

ಲಾಲಾ ಲಜಪತರಾಯ್ ಅವರು ಸಹ ತೀವ್ರಗಾಮಿ ಗುಂಪಿನ ನಾಯಕರು. ಇವರು ಬ್ರಿಟೀಷರ ವಿರುದ್ಧ ಭಾರತೀಯರಲ್ಲಿ ದೇಶಾಭಿಮಾನ ಮೂಡಿಸಲು ಶ್ರಮಿಸಿದರು. ಬಿಪಿನ್ ಚಂದ್ರಪಾಲರೂ ಸ್ವರಾಜ್ಯ ಸಾಧನೆಗಾಗಿ ಹೋರಾಡಿದರು. ಭಾಷಣಗಳ ಮೂಲಕ ಜನಜಾಗೃತಿ ಮಾಡಿದರು. ತಿಲಕರ ಜೊತೆಗೂಡಿ ಕೆಲಸ ಮಾಡಿದರು. ಕಲ್ಕತ್ತಾದ ವಂದೇ ಮಾತರಂ, ಅಲಹಾಬಾದ್, ಇಂಡಿಪೆಂಡೆಂಟ್, ಲಾಹೋರಿನ ದಿ ಟ್ರಿಬ್ಯುನ್ ಪತ್ರಿಕೆಗಳ ಸಂಪಾದಕರಾಗಿದ್ದರು.[೨೩]

ಮಂದಗಾಮಿಗಳು ಮತ್ತು ತೀವ್ರಗಾಮಿಗಳ ಹೋರಾಟ ತೀವ್ರವಾಗಿದ್ದಾಗಲೇ ಬ್ರಿಟೀಷರ ವಿರುದ್ಧ ತಮ್ಮ ಹೋರಾಟವನ್ನು ಪ್ರಾರಂಭಿಸಿದವರೆಂದರೆ ಕ್ರಾಂತಿಕಾರಿಗಳು. ಇವರ ವಿಚಾರಗಳು ತೀರ ಭಿನ್ನವಾಗಿದ್ದವು. ಶಸ್ತ್ರಾಸ್ತ್ರಗಳ ಮೂಲಕ ಬ್ರಿಟೀಷರಿಗೆ ಉತ್ತರವನ್ನು ಕೊಡಲು ಬಯಸಿದ್ದರು. ಶಾಂತಿಮಾರ್ಗ ಇವರಿಗೆ ವಿರುದ್ಧವಾದುದು, ರಕ್ತಕ್ಕೆ ರಕ್ತವೇ, ಹಿಂಸೆಗೆ ಪ್ರತಿಹಿಂಸೆಯೇ ಇವರ ನೀತಿಯಾಗಿತ್ತು. ಇವರ ಹೋರಾಟದ ಮಾರ್ಗ ವಿಫಲವಾಯಿತು. ಆದರೆ ಅವರು ಮಾಡಿದ ಪ್ರಭಾವ ಜನರಲ್ಲಿ ಅಚ್ಚಳಿಯದೇ ಉಳಿದವು. ಇವರು ತಮ್ಮ ಪ್ರಾಣವನ್ನು ಲೆಕ್ಕಿಸದೇ ಹೋರಾಟ ಮಾಡಿದರು. ವಾಸುದೇವ ಬಲವಂತ ಫಡ್ಕೆ ಇವನು ಕ್ರಾಂತಿಕಾರಿ ಯುಗದ ಪ್ರವರ್ತಕ.[೨೪] ವಿ.ಸಿ. ಸಾವರಕರ್‌ರು ಸಹ ಒಬ್ಬ ಕ್ರಾಂತಿಕಾರರೇ. ಇವರ ಅಭಿನವ ಭಾರತ ಸಂಸ್ಥೆಗೆ ಭಾರತದ ದಾಸ್ಯ ವಿಮೋಚನೆಯೇ ಗುರಿಯಾಗಿತ್ತು. ೧೮೫೭ ರ ಹೋರಾಟವನ್ನು ಅವರು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂಬುದಾಗಿ ಕರೆದರು. ಫ್ರಾನ್ಸಿನಲ್ಲಿ ಭಾರತೀಯ ಸ್ವಾತಂತ್ರ್ಯ ಯುದ್ಧ ಎಂಬ ಅಮೂಲ್ಯ ಪುಸ್ತಕ ಮುದ್ರಿಸಿದರು.[೨೫] ಅವರು ಒಂದು ವೇಳೆ 'ಸ್ವಾತಂತ್ರ್ಯ ಸಂಗ್ರಾಮ' ಎಂಬುದಾಗಿ

ಹೇಳದೇ ಹೋಗಿದ್ದರೆ ಅದರ ನೈಜ ಪರಿಸ್ಥಿತಿ ತಿಳಿಯಲಾರದೆ ಅದು ಸಿಪಾಯಿ ದಂಗೆ ಎಂದು ಉಳಿದು ಬಿಡುತ್ತಿತ್ತು. ಸಾವರ್ಕರರ ಭಾಷಣಗಳು, ವ್ಯಕ್ತಿತ್ವಗಳು ಜನರಿಗೆ ಸ್ಫೂರ್ತಿಯಾದವು.

ಊರೂರು ಸುತ್ತಿ ಹರಿಕಥೆ ಹೇಳುವ ತಮ್ಮ ಸಾತ್ವಿಕ ಪ್ರವಚನಗಳಲ್ಲಿ ಬ್ರಿಟೀಷರನ್ನು ರಾಕ್ಷಸರಿಗೆ ಹೋಲಿಸುತ್ತಾ ದೇಶಪ್ರೇಮದ ಕಂಪು ಹರಡಿದವರು ಛಾಪೇಕರ ಸಹೋದರರು. ರ್‍ಯಾಂಡ್ ಮತ್ತು ಆಯಸ್ಟರ್ನ್‌ರಂತಹ ದುರಹಂಕಾರಿ ಅಧಿಕಾರಿಗಳ ಹತ್ಯೆ ಮಾಡಿದರು.[೧೬]

ಇವರು ಅಷ್ಟೇ ಅಲ್ಲದೆ ಬುದಿರಾಮ್ ಭೋಸ್, ಮದನ್ಲಾಲ್ ದಿಂಗ್ರ, ಸುಖದೇವ, ರಾಜಗುರು, ಬಿಸ್ಮಿಲ್ಲಾ, ಚಂದ್ರಶೇಖರ ಆಜಾದ್, ಭಗತಸಿಂಗ್‌ರಂತಹ ಕ್ರಾಂತಿಕಾರಿಗಳು ಹೋರಾಟದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಗಲ್ಲುಗಂಬ ಏರಿದರು. ಇವರ ಕೆಚ್ಚೆದೆಯ ಹೋರಾಟ ಜನರನ್ನು ಬಡಿದೆಬ್ಬಿಸಿತು.

ಸುಭಾಷ್ ಚಂದ್ರ ಭೋಸರು ಸಹ ಪ್ರಮುಖರು. ದೇಶಸೇವೆಗಾಗಿ ತಮ್ಮನ್ನೇ ಅರ್ಪಿಸಿಕೊಂಡವರು. ಅಸಹಕಾರ ಮತ್ತು ಕಾನೂನು ಭಂಗ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗಿಯಾದರು.[೧೭] ಗಾಂಧೀಜಿಯವರೊಂದಿಗೆ ವೈಚಾರಿಕ ಭಿನ್ನತೆ ಉಂಟಾಗಿ ಕಾಂಗ್ರೆಸ್ಸಿನಿಂದ ಹೊರಬಂದರು. ಗಾಂಧೀಜಿಯವರ ಶಾಂತಿಮಾರ್ಗದಿಂದ ಬ್ರಿಟೀಷರನ್ನು ಸೋಲಿಸಲಾಗದು ಎಂಬುದು ಸುಭಾಷರ ವಿಚಾರವಾಗಿತ್ತು. ಹೀಗಾಗಿ ಅವರು ಪರದೇಶಗಳಿಗೆ ಹೋಗಿ ಅಲ್ಲಿ ಜನರನ್ನು ಸಂಘಟಿಸಿ ಸೈನ್ಯವನ್ನು ತರಬೇತಿಗೊಳಿಸಿದರು.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕೆಲವು ವಿದೇಶೀ ಮಿತ್ರರು ಜನರಲ್ಲಿ ಜಾಗೃತಿಯನ್ನುಂಟು ಮಾಡುವ ಕಾರ್ಯಗಳನ್ನು ಮಾಡಿದರು. ಇವರ ಕಾರ್ಯಗಳಿಂದ ಭಾರತದ ದುಸ್ಥಿತಿ ಭಾರತೀಯರಿಗೆ ಮತ್ತು ವಿದೇಶಿಯರಿಗೆ ತಿಳಿಯುವಂತಾಯಿತು. ಭಾರತದ ಸ್ವಾತಂತ್ರ್ಯ ಹೋರಾಟದ ನಾಯಕರುಗಳ ಜೊತೆಗೆ ಇವರೂ ಹೋರಾಡಲು ಪ್ರಯತ್ನಿಸಿದರು.

"ಯಾವ ದೇಶಕ್ಕೂ ಇನ್ನೊಂದು ದೇಶವನ್ನಾಳುವ ಹಕ್ಕಿಲ್ಲ, ಅಂತೆಯೇ ಗ್ರೇಟ್ ಬ್ರಿಟನ್ನಿಗೂ ಭಾರತವನ್ನು ಆಳಲು ಯಾವ ಹಕ್ಕು ಇಲ್ಲ" ಎಂದು ರೆವರೆಂಡ್ ಜೆ.ಟಿ. ಸುಂದರ್‌ಲ್ಯಾಂಡ್ ಅವರು ಹೇಳಿದ್ದಾರೆ.[೧೮] ಇವರು ಅಮೇರಿಕಾದ ಕ್ರೈಸ್ತ ಪಾದ್ರಿ. ಭಾರತದ ಕುರಿತು 'ಬಂಧನದಲ್ಲಿ ಭಾರತ, ಅದರ ಬಿಡುಗಡೆಗಾಗಿ ಹಕ್ಕು' (India in Bondage- Her Right to Freedom) ಎಂಬ ಕೃತಿಯನ್ನು ರಚಿಸಿದರು.[೧೯] ಇವರ ಈ

ಕೃತಿ ಎಲ್ಲೆಡೆ ಬಹಳ ಮೆಚ್ಚುಗೆಯನ್ನು ಪಡೆಯಿತು. ಮತ್ತು ಬ್ರಿಟೀಷರು ವಿಶ್ವಾದ್ಯಂತ ಭಾರತದ ಬಗ್ಗೆ ಮಾಡಿದ್ದ ಸುಳ್ಳು ಆರೋಪ ಜನತೆಗೆ ತಿಳಿಯುವಂತಾಯಿತು. ಏಕೆಂದರೆ ವಿದೇಶಿಗರೊಬ್ಬರು ಭಾರತದ ಬಗ್ಗೆ ಬರೆಯುವುದು ದೇಶೀಯರು ಬರೆಯುವುದಕ್ಕಿಂತ ಹೆಚ್ಚು ಪರಿಣಾಮಕಾರಿ. ಅಷ್ಟೇ ಅಲ್ಲದೆ ಇವರು ಇಲ್ಲಿಯ ಸತ್ಯಾಗ್ರಹಗಳಲ್ಲಿಯೂ ಭಾಗವಹಿಸಿದರು. ಲಾಲಾ ಲಜಪತರಾಯರು ಅಮೇರಿಕಾದಲ್ಲಿ ಹೋಂ ರೂಲ್ ಲೀಗ್ ಆಫ್ ಅಮೇರಿಕಾ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ೧೯೧೭ ರಲ್ಲಿ, ೧೯೧೪-೧೯ ರ ಅವಧಿಯಲ್ಲಿ ಲಾಲಾಜಿಯವರು ಈ ಸಾಧನೆಯಲ್ಲಿ ಜೊತೆಜೊತೆಯಾಗಿ ದುಡಿದರು. ಹೋಂ ರೂಲ್ ಲೀಗಿಗೆ ಉಪಾಧ್ಯಕ್ಷರಾಗಿದ್ದರು.[೨೦]

ಭಾರತದ ಬಗ್ಗೆ ಅಭಿಮಾನ ಪ್ರೀತಿಯನ್ನು ಸುಂದರ್‌ಲ್ಯಾಂಡರು ಹೊಂದಿದ್ದರೆಂಬುದಕ್ಕೆ ಅವರ ಬರಹಗಳು ಸಾಕ್ಷಿ. ಅವರ ಕಾರ್ಯಚಟುವಟಿಕೆಗಳೇ ನಿದರ್ಶನವಾಗಿವೆ. ಭಾರತೀಯ ಸಂಸ್ಕೃತಿಯ ಬಗ್ಗೆ ಅವರು ಆಳವಾದ ಅಧ್ಯಯನ ಮಾಡಿದ್ದರು. ಭಾರತದ ಜನ ಖಾಸಬಂಗಲೆಯ ಕಾಡುಮೃಗಗಳಲ್ಲಿ ಒಂದೆರಡು ಶತಮಾನಗಳು ಭಾರತವೇ ಯುರೋಪವನ್ನು ಆಳಿದರೆ ನಿಜವಾದ ನಾಗರೀಕತೆ, ಶಾಂತಿ ಎಂದರೇನು ಎಂಬುದನ್ನು ಯೂರೋಪ್ ಕಲಿತೀತು[೨೧] ಎಂದು ಭಾರತೀಯ ಸಂಸ್ಕೃತಿ ಎಂದರೆ ಅನಾಗರೀಕ ಸಂಸ್ಕೃತಿ, ಪಶ್ಚಿಮದ ಸಂಸ್ಕೃತಿಗಿಂತ ಕೀಳು ಎಂದು ಭಾರತೀಯ ಸಂಸ್ಕೃತಿಯ ಬಗ್ಗೆ ಅವಹೇಳನಕಾರಿಯಾದ ಮಾತುಗಳನ್ನು ಆಡುತ್ತಿದ್ದ ಬ್ರಿಟೀಷರಿಗೆ ತಕ್ಕ ಉತ್ತರ ನೀಡಿದರು.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮ ಕೊಡುಗೆ ನೀಡಿದ ಇನ್ನೋರ್ವ ವಿದೇಶಿ ಮಿತ್ರರೆಂದರೆ ವಿಲ್ ಡ್ಯುರಾಂಡ್. ಇವರು ತಮ್ಮ ಲೇಖನಗಳ ಮೂಲಕ ಭಾರತದ ಶಿಕ್ಷಣ ಸಂಪತ್ತು ಹೇಗೆ ನಾಶವಾಯಿತೆಂದು ವಿವರಿಸಿದರು. 'ಭಾರತದ ರಾಜಕೀಯ ಸಮಸ್ಯೆ' (The Case for India) ಎಂಬ ಕೃತಿಯನ್ನು ರಚಿಸಿದರು.[೨೨]

ಬ್ರೇಲ್ಸ್ ಪೋರ್ಡ ಎಂಬುವವರ 'ದಾಸಭಾರತ' ಕೃತಿಯು ೧೯೪೨ ರ ಆರಂಭಕ್ಕೂ ಮೊದಲು ರಚನೆಯಾಯಿತು.[೨೩] ಈ ಗ್ರಂಥದ ಮೂಲಕ ಆಗಿನ ಕಾಲದ ಪರಿಸ್ಥಿತಿಗಳನ್ನು ವಿವರಿಸಿದರು.

ಬಿ.ಜಿ. ಹಾರ್ನಿಮನ್ ಇವರು ಇಂಗ್ಲೆಂಡಿನವರೇ ಆಗಿದ್ದು ಭಾರತದಲ್ಲಿ ಬ್ರಿಟೀಷರ ದಬ್ಬಾಳಿಕೆಯ ವಿರುದ್ಧ ಪ್ರತಿಭಟನೆಯನ್ನು ಮಾಡಿದರು. ಇವರು 'ಅಮೃತಸರ, ಭಾರತಕ್ಕೆ ನಮ್ಮ ಕರ್ತವ್ಯ' ಎಂಬ ಕೃತಿಯಲ್ಲಿ ಪಂಜಾಬಿನ ದುರಂತದ ಬಗ್ಗೆ ನೈಜ ಚಿತ್ರಣ ಕೊಟ್ಟಿರುವರು.[೨೪] ಜಲಿಯನ್ ವಾಲಾಭಾಗದ ಬಗ್ಗೆ ಚಿತ್ರಣವನ್ನು

ನೀಡುತ್ತದೆ. ಹೀಗೆ ಅನೇಕ ಪಾಶ್ಚಿಮಾತ್ಯ ಚಿಂತಕರು ಭಾರತದ ನೈಜಪರಿಸ್ಥಿತಿಯನ್ನು ಜಗತ್ತಿಗೆ ತಿಳಿಸುವ ಕಾರ್ಯವನ್ನು ಮಾಡಿದ್ದಾರೆ.

ಗಾಂಧೀಜಿಯವರು ಭಾರತಕ್ಕೆ ಹಿಂದಿರುಗುವ ಮುಂಚೆ ತಿಲಕರು ಹೋರಾಟದ ನಾಯಕತ್ವವನ್ನು ವಹಿಸಿಕೊಂಡು ಎಲ್ಲ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದ್ದರು. ೧೯೧೫ ರಲ್ಲಿ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ವರ್ಣಬೇಧ ನೀತಿಯ ವಿರುದ್ಧವಾದ ತಮ್ಮ ಹೋರಾಟವನ್ನು ಸತ್ಯ ಮತ್ತು ಅಹಿಂಸೆಯ ತತ್ವಗಳಿಂದ ಯಶಸ್ವಿಗೊಳಿಸಿ ಭಾರತಕ್ಕೆ ಬಂದರು. ಆಗ ಇಲ್ಲಿ ಬ್ರಿಟೀಷರ ವಿರುದ್ಧ ಹೋರಾಟ ತೀವ್ರವಾಗಿತ್ತು. ಗಾಂಧೀಜಿ ಈ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದರು. ಗಾಂಧೀಜಿಯವರ ವ್ಯಕ್ತಿತ್ವ ಜನರ ಮೇಲೆ ಪ್ರಭಾವ ಬೀರಿ ಸ್ವಾತಂತ್ರ್ಯ ಚಳುವಳಿಯ ಯಶಸ್ವಿಯಾಯಿತು. ಗಾಂಧೀಜೀಯವರ ಕರೆಯಂತೆ ಜನ ಶಾಂತಿ ಸಹನೆಯ ಮಾರ್ಗವಿಡಿದು ಹೋರಾಟದಲ್ಲಿ ಪಾಲ್ಗೊಂಡರು. ಗಾಂಧೀಜಿ ೧೯೧೫ ರಲ್ಲಿ ಅಹಮದಾಬಾದಿನಲ್ಲಿ ಸಾಬರಮತಿ ಆಶ್ರಮವನ್ನು ಸ್ಥಾಪಿಸಿದರು.[೩೫] ಚಂಪಾರಣ್, ಖೇಡಾ, ಅಹಮದಾಬಾದ್ ಗಿರಣಿ ಸತ್ಯಾಗ್ರಹಗಳಲ್ಲಿ ಗಾಂಧೀಜಿಯವರಿಗೆ ಯಶಸ್ಸು ದೊರೆಯಿತು. ಸಾಬರಮತಿ ಆಶ್ರಮದಿಮದಲೇ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದರು.

ರೌಲತ್ ಕಾಯಿದೆಯನ್ನು ವಿರೋಧಿಸಿ ಚಳುವಳಿಯನ್ನು ಆರಂಭಿಸಿದರು. ನಂತರ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದರು. ವಿದೇಶೀ ವಸ್ತುಗಳನ್ನು ಬಹಿಷ್ಕರಿಸುವುದು, ಸ್ವದೇಶೀ ವಸ್ತುಗಳಿಗೆ ಬೆಂಬಲ ಕೊಡುವುದು, ಕರನಿರಾಕರಣೆ, ಈ ಚಳುವಳಿಯ ಉದ್ದೇಶವಾಗಿತ್ತು. ೧೯೨೦ ರಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಆರಂಭಿಸಿದರು.

ಭಾರತೀಯರಿಗೆ ಯಾವುದೇ ಪ್ರಾತಿನಿಧ್ಯ ನೀಡದ ಕಾಯಿದೆಗಳನ್ನು ಖಂಡಿಸಿದರು. ಕಾನೂನು ಭಂಗ ಚಳುವಳಿ, ದಂಡಿ ಸತ್ಯಾಗ್ರಹ, ಚಲೇಜಾವ್ ಚಳುವಳಿಯನ್ನು ಕೈಗೊಂಡರು. ಈ ಎಲ್ಲ ಚಳುವಳಿಯಲ್ಲಿ ಭಾರತದಾದ್ಯಂತ ಲಕ್ಷಾವಧಿ ಜನ ಭಾಗವಹಿಸಿದರು. ಗಾಂಧೀಜಿಯವರು ದಂಡಿ ಸತ್ಯಾಗ್ರಹ ಕೈಗೊಂಡಾಗ ಗಾಂಧೀಜಿಯವರೊಡನೆ ಹಲವಾರು ಜನ ಹೋರಾಟಗಾರರ ಬಂಧನವಾಯಿತು. ೧೯೩೧ರ ಮಾರ್ಚ್ ೫ ರಂದು ಗಾಂಧೀ–ಇರ್ವಿನ್ ಒಪ್ಪಂದವಾಯಿತು. ಇದರ ಪ್ರಕಾರ ಬಂಧಿತರ ಬಿಡುಗಡೆಯಾಯಿತು.[೩೬]

ಸ್ವಾತಂತ್ರ್ಯ ಸಮರವನ್ನು ಜನಸಮೂಹದ ಸಾರ್ವತ್ರಿಕ ಕಾರ್ಯಕ್ರಮವಾಗಿ ಗಾಂಧೀಜಿಯವರು ಬದಲಾವಣೆ ಮಾಡಿದರು. ಅವರಲ್ಲಿದ್ದ ಶಕ್ತಿ, ಜನಸಂಘಟನೆಗೆ ಸಹಾಯಕಾರಿಯಾಯಿತು. ಗಾಂಧೀಜಿಯವರ ಆಗಮನದಿಂದ ಜನತೆಯಲ್ಲಿ ಒಂದು ರೀತಿಯ ಹುರುಪು, ಹುಮ್ಮಸ್ಸು ಮೂಡಿದವು. ಜನರೆಲ್ಲಾ ಸಂಘಟನೆಯಿಂದ ಇಡೀ ದೇಶವೇ ಒಂದಾಗಿ ಅವರ ಬೆಂಬಲಕ್ಕೆ ನಿಂತರು. ಗಾಂಧೀಜಿಯವರು ಲೇಖನಗಳ ಮೂಲಕವೂ ಜನರನ್ನು ಬಡಿದೆಬ್ಬಿಸಿದರು.

ಇಂಗ್ಲೆಂಡ್, ಭಾರತೀಯರ ಒಪ್ಪಿಗೆ ಇಲ್ಲದೆ ವಿನಾಕಾರಣ ೨ನೇ ಜಾಗತಿಕ ಯುದ್ಧದಲ್ಲಿ ಭಾರತೀಯರನ್ನು ಎಳೆಯಲು ಪ್ರಯತ್ನಿಸಿತು. ಆಗ ಕಾಂಗ್ರೆಸ್ ರಾಷ್ಟ್ರೀಯ ಸರ್ಕಾರ ಸ್ಥಾಪಿಸಿದಲ್ಲಿ ಮಾತ್ರ ಸಹಕರಿಸುವುದಾಗಿ ಹೇಳಿತು. ೨ನೇ ಜಾಗತಿಕ ಯುದ್ಧದ ನಂತರ ಭಾರತಕ್ಕೆ ಒಂದು ಹೊಸ ಸಂವಿಧಾನ ರೂಪಿಸಲು ಬ್ರಿಟೀಷರು ಒಪ್ಪಿ ಲಾರ್ಡ್ ಲಿನ್‌ಲಿತ್‌ಗೋ ೧೯೪೦ ಅಗಸ್ಟ್ ೮ ರಂದು ಒಂದು ಪ್ರಸ್ತಾವನೆಯನ್ನು ಭಾರತೀಯರ ಮುಂದಿಟ್ಟ.[೩೭] ಕಾಂಗ್ರೆಸ್ ಈ ನೀಡಿಕೆಯನ್ನು ತಿರಸ್ಕರಿಸಿತು. ಮುಂದೆ ಕ್ರಿಪ್ಸ್ ಆಯೋಗ ಭಾರತೀರಯ ಮನ ಒಲಿಸಲು ಬಂದು ವಿಫಲವಾಯಿತು.

ಆದ್ದರಿಂದ ಗಾಂಧೀಜಿಯವರು ಬ್ರಿಟೀಷರ ವಿರುದ್ಧ ಮತ್ತೆ ಹೋರಾಟವನ್ನು ಆರಂಭಿಸಿದರು. ೧೯೪೨ ರ ಅಗಸ್ಟ್ ೮ ರಂದು ಬೊಂಬಾಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಕೊನೆಯ ಸತ್ಯಾಗ್ರಹ ಹೂಡಿತು. ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಎಂದು ಗಾಂಧೀಜಿಯವರ ಕರೆಗೆ ಲಕ್ಷಾಂತರ ಜನ ಒಕ್ಕೊರಲಿನಿಂದ ಓಗೊಟ್ಟರು. ಗಾಂಧೀಜಿಯವರನ್ನು ಈ ಸಭೆಯ ಸರ್ವಾಧಿಕಾರಿ ನಾಯಕರನ್ನಾಗಿ ಮಾಡಿದರು.[೩೮] ಗಾಂಧೀಜಿಯವರು 'ಮಾಡು ಇಲ್ಲವೆ ಮಡಿ' ಎಂದು ಹೇಳಿಕೆ ಕೊಟ್ಟರು. 'ಭಾರತ ಬಿಟ್ಟು ತೊಲಗಿ' ಎಂದು ಸಾರಿದರು. ಈ ಸಾಂದರ್ಭಿಕ ಹೇಳಿಕೆಗಳು ಶಾಶ್ವತ ಪರಿಣಾಮವನ್ನು ಉಂಟುಮಾಡಿದವು. ಗಾಂಧೀಜಿಯವರ ಕರೆಗೆ ಓಗೊಟ್ಟು ದೇಶದ ಮೂಲೆ-ಮೂಲೆಗಳಿಂದ ಜನರು ತಮ್ಮ ಜೀವದ ಹಂಗು ತೊರೆದು ಹೋರಾಡಿದರು. ಖಾದಿಧಾರಿಗಳಾಗಿ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಗೋಲಿಬಾರ್, ಲಾಟಿ ಚಾರ್ಜ್‌ಗಳನ್ನು ಮಾಡಿದರೂ ಸಹನೆಯಿಂದಲೇ ಅವುಗಳನ್ನು ಅನುಭವಿಸಿದರು. ಜೈಹಿಂದ್, ವಂದೇ ಮಾತರಂ ಘೋಷಣೆಗಳಿಂದ ಪ್ರಭಾತಫೇರಿಗಳನ್ನು ಕೈಗೊಂಡು ಎಲ್ಲೆಡೆ ಪ್ರತಿಭಟನೆಯ ವಾತಾವರಣವನ್ನು ನಿರ್ಮಿಸಿದರು.

ಸೆರೆಮನೆಗೆ ಅಟ್ಟಿದಾಗಲೂ ತಮ್ಮಿಂದ ತಪ್ಪಾಯಿತೆಂದು ಬ್ರಿಟೀಷರನ್ನು ಕೇಳಿಕೊಂಡರೆ ಇವರನ್ನು ಬಿಡುಗಡೆ ಮಾಡುವುದಾಗಿ ಹೇಳಿದರೂ ಈ ಕೆಚ್ಚೆದೆಯ ವೀರರು ಎಂದೂ ಅವರ ಮುಂದೆ ಶರಣಾಗತರಾಗಲಿಲ್ಲ. ಜೀವ ಬಿಡುವ ಪ್ರಸಂಗ ಬಂದರೆ 'ವಂದೇ ಮಾತರಂ' ಎಂಬ ದಿವ್ಯ ಘೋಷಣೆಯನ್ನು ಮಾಡುತ್ತಾ ಪ್ರಾಣ ತ್ಯಜಿಸಿದರು ನಮ್ಮ ಹೋರಾಟಗಾರರು. ಕೊನೆಗೆ ಸ್ವಾತಂತ್ರ್ಯವನ್ನು ಗಳಿಸಲು ಯಶಸ್ವಿಯಾದರು. ಈ ಅಭೂತಪೂರ್ವ ರಾಷ್ಟ್ರೀಯ ಹೋರಾಟದಲ್ಲಿ ಕರ್ನಾಟಕವೂ ಬಹಳ ಮಹತ್ವದ ಪಾತ್ರವನ್ನು ನಿರ್ವಹಿಸಿತು. ಗಾಂಧೀಜಿಯವರ ಅಸಹಕಾರ ಚಳುವಳಿಯಲ್ಲಿ ಹುರುಪಿನಿಂದ ಇಲ್ಲಿಯ ಜನ ಭಾಗವಹಿಸಿದರು. ಗಾಂಧೀಜಿಯವರೂ ಕರ್ನಾಟಕಕ್ಕೆ ಬಂದು ಜನರಿಗೆ ಕರೆ ಕೊಟ್ಟರು. ಕರ್ನಾಟಕದಲ್ಲಿ ಮೈಸೂರು, ಉತ್ತರ ಕನ್ನಡ, ಶಿವಮೊಗ್ಗ, ಕೊಡಗು ಹೀಗೆ ಹಲವಾರು ಜಿಲ್ಲೆಗಳು ಮಹತ್ವದ ಪಾತ್ರವನ್ನು ನಿರ್ವಹಿಸಿದವು. ಅದರಲ್ಲಿ ಅಗ್ರಪಂಕ್ತಿಯಲ್ಲಿದ್ದುದು ಬೆಳಗಾವಿ ಜಿಲ್ಲೆ.

ಅಡಿಟಿಪ್ಪಣಿಗಳು:

೧. ಕೆ. ಸದಾಶಿವ : *ಆಧುನಿಕ ಭಾರತದ ಇತಿಹಾಸ*, ಪ್ರಕಾಶಕರು, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, ೨೦೦೭, ಪು. ೫.

೨. "ಅದೇ", ಪು. ೨೩.

೩. "ಅದೇ", ಪು. ೩೭.

೪. "ಅದೇ", ಪು. ೫೫.

೫. ಕೆ.ಎ.ಎನ್.ಎಚ್ಚಾರ್ಕೆ, *ಇತಿಹಾಸ–II*, ಪ್ರಕಾಶಕರು, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯–೧೦, ಪು. ೨೨೯.

೬. "ಅದೇ", ಪು. ೨೩೦.

೭. "ಅದೇ", ಪು. ೨೩೦.

೮. ಕೆ. ಸದಾಶಿವ : *ಆಧುನಿಕ ಭಾರತದ ಇತಿಹಾಸ*, ಪ್ರಕಾಶಕರು, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, ೨೦೦೭, ಪು. ೧೦೭.

೯. ಕೆ.ಎ.ಎನ್.ಎಚ್ಚಾರ್ಕೆ, *ಇತಿಹಾಸ–II* ಪ್ರಕಾಶಕರು, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯–೧೦, ಪು. ೨೩೧.

೧೦. "ಅದೇ", ಪು. ೨೩೧.

೧೧. "ಅದೇ", ಪು. ೨೩೨.

೧೨. ಕೆ. ಸದಾಶಿವ : *ಆಧುನಿಕ ಭಾರತದ ಇತಿಹಾಸ*, ಪ್ರಕಾಶಕರು, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, ೨೦೦೭, ಪು. ೨೫೧.

೧೩. "ಅದೇ", ಪು. ೨೫೧.

೧೪. ಕೆ.ಎ.ಎನ್. ಎಚ್ಚಾರ್ಕೆ, *ಇತಿಹಾಸ–II*, ಪ್ರಕಾಶಕರು, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯–೧೦, ಪು. ೨೩೩.

೧೫. "ಅದೇ", ಪು. ೨೫೪.

೧೬. "ಅದೇ", ಪು. ೨೫೫.

೧೭. "ಅದೇ", ಪು. ೨೫೭.

೧೮. "ಅದೇ", ಪು. ೨೬೦.

೧೯. ಕೆ.ಎಸ್. ನಾರಾಯಣಸ್ವಾಮಿ, *ಭಾರತ ಸ್ವಾತಂತ್ರ್ಯ ಸಮರದ ಮೈಲಿಗಲ್ಲುಗಳು*, ಪ್ರಕಾಶಕರು, ಗಾಂಧೀ ಶಾಂತಿ ಪ್ರತಿಷ್ಠಾನ, ಬೆಂಗಳೂರು, ೧೯೪೭, ಪು. ೧೯.

೨೦. ಕೆ.ಎ.ಎನ್.ಎಚ್ಚಾರ್ಕೆ, *ಇತಿಹಾಸ-II*, ಪ್ರಕಾಶಕರು, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯-೧೦, ಪು. ೨೭೦.

೨೧. ಕೆ. ಸದಾಶಿವ : *ಆಧುನಿಕ ಭಾರತದ ಇತಿಹಾಸ*, ಪ್ರಕಾಶಕರು, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, ೨೦೦೭, ಪು. ೨೮೭.

೨೨. ಕೆ.ಎ.ಎನ್.ಎಚ್ಚಾರ್ಕೆ, *ಇತಿಹಾಸ-II*, ಪ್ರಕಾಶಕರು, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯-೧೦, ಪು. ೨೭೬.

೨೩. "ಅದೇ", ಪು. ೨೭೭.

೨೪. "ಅದೇ", ಪು. ೨೭೮.

೨೫. ಅಣ್ಣು ಗುರೂಜಿ, *ಬೆಳಗಾವಿ ಜಿಲ್ಲೆಯಲ್ಲಿಯ ಸ್ವಾತಂತ್ರ್ಯ ಸಮರ*, ಸಂಪುಟ-೧, ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾವಿ, ೧೯೭೩, ಪು. ೭.

೨೬. ವಿನೋದ ಕಡಕೋಳ್, *ಛಾಪೇಕರ್ ಸಹೋದರರು*, ಬುತ್ತಿ ಮಾಸಪತ್ರಿಕೆ, ಬೆಂಗಳೂರು, ೨೦೧೧, ಪು. ೩೨.

೨೭. ಕೆ.ಎ.ಎನ್.ಎಚ್ಚಾರ್ಕೆ, *ಇತಿಹಾಸ-II*, ಪ್ರಕಾಶಕರು, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯-೧೦, ಪು. ೨೮೩.

೨೮. ನೀಲತ್ತಹಳ್ಳಿ ಕಸ್ತೂರಿ, *ಬಿಡುಗಡೆಗಾಗಿ ಬರಹ*, ಪ್ರಕಾಶಕರು ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು, ೧೯೪೯, ಪು. ೨೬.

೨೯. "ಅದೇ", ಪು. ೨೮.

೩೦. "ಅದೇ", ಪು. ೩೦.

೩೧. "ಅದೇ", ಪು. ೪೩.

೩೨. "ಅದೇ", ಪು. ೫೩.

೩೩. "ಅದೇ", ಪು. ೬೯.

೩೪. "ಅದೇ", ಪು. ೧೧೪.

೩೫. ಕೆ.ಎ.ಎನ್.ಎಚ್ಚಾರ್ಕೆ, *ಇತಿಹಾಸ–II*, ಪ್ರಕಾಶಕರು, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯–೧೦, ಪು. ೨೮೪.

೩೬. "ಅದೇ", ಪು. ೨೮೯.

೩೭. ಕೆ. ಸದಾಶಿವ, *ಆಧುನಿಕ ಭಾರತದ ಇತಿಹಾಸ*, ಪ್ರಕಾಶಕರು ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, ೨೦೦೭, ಪು. ೩೯೧.

೩೮. ಕೆ.ಎಸ್. ನಾರಾಯಣಸ್ವಾಮಿ, *ಭಾರತ ಸ್ವಾತಂತ್ರ್ಯ ಸಮರದ ಮೈಲಿಗಲ್ಲುಗಳು*, ಪ್ರಕಾಶಕರು ಗಾಂಧೀ ಪ್ರತಿಷ್ಠಾನ, ಬೆಂಗಳೂರು, ೧೯೯೭, ಪು. ೨೮.

ಅಧ್ಯಾಯ – ಮೂರು

ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿ

ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿ

ಬ್ರಿಟೀಷರನ್ನು ಭಾರತದಿಂದ ತೊಲಗಿಸಲು ದೇಶಾದ್ಯಂತ ಆರಂಭವಾಗಿದ್ದ ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕವೂ ಹಿಂದೆ ಬಿದ್ದಿಲ್ಲ. ಕರ್ನಾಟಕದ ಅನೇಕ ಜಿಲ್ಲೆಗಳು ಈ ಹೋರಾಟದಲ್ಲಿ ವಿಶೇಷವಾದ ಕೊಡುಗೆಯನ್ನು ನೀಡಿದವು. ಅವುಗಳಲ್ಲಿ ಬೆಳಗಾವಿ ಜಿಲ್ಲೆಯೂ ಒಂದು. ಬೆಳಗಾವಿ ಮೊದಲಿನಿಂದಲೂ ಕ್ಷಾತ್ರ ಗುಣಗಳಿಗೆ ಹೆಸರಾದ ಭೂಮಿ. ಕಿತ್ತೂರಿನ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಬೆಳವಡಿ ಮಲ್ಲಮ್ಮರಂತಹ ದೇಶಪ್ರೇಮಿಗಳು ಜನಿಸಿದ ಈ ನಾಡಿಗೆ ವೀರ-ಶೂರ ಗುಣಗಳು ಬಳುವಳಿಯಾಗಿ ಬಂದಂತಹವುಗಳು. ಬೆಳಗಾವಿಯು ಬ್ರಿಟೀಷರ ಕಾಲದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದರ ಮೂಲಕ ಬ್ರಿಟೀಷರಿಗೆ ನಡುಕ ಹುಟ್ಟಿಸಿತ್ತು. ಇಲ್ಲಿಯ ಹೋರಾಟಗಾರರು ತಮ್ಮ ಸ್ವಂತ ಸುಖವನ್ನು, ಜೀವನವನ್ನು ತ್ಯಾಗ ಮಾಡಿ ದೇಶವನ್ನು ಬಂಧಮುಕ್ತ ಮಾಡಲು ಹೋರಾಡಿದರು.

೩.೧ ಬೆಳಗಾವಿ ಜಿಲ್ಲೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಲು ಸ್ಫೂರ್ತಿ ಪಡೆದದ್ದು:

ಬೆಳಗಾವಿ ಜಿಲ್ಲೆಗೆ ಪ್ರತಿಭಟನೆಯ ಗುಣ ಹುಟ್ಟಿನಿಂದಲೇ ಬಂದಿದ್ದು. ಹೀಗಾಗಿ ಅದು ದಬ್ಬಾಳಿಕೆಯನ್ನು ಮೊದಲಿನಿಂದಲೂ ವಿರೋಧಿಸಿದ ನಾಡು. ಹೀಗಾಗಿ ಇಲ್ಲಿಯ ಜನತೆಗೆ ಆ ಗುಣಗಳು ರಕ್ತಗತವಾಗಿಯೇ ಬಂದಂತಹವು. ಜೊತೆಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೆಳಗಾವಿ ಜಿಲ್ಲೆಗೆ ಅನೇಕ ರಾಷ್ಟ್ರೀಯ ನಾಯಕರು ಭೇಟಿ ನೀಡಿದರು. ಇದರಿಂದಾಗಿ ಇಲ್ಲಿಯ ಜನರಿಗೆ ಹೋರಾಟದಲ್ಲಿ ಹೋರಾಡಲು ಮತ್ತಷ್ಟು ಸ್ಫೂರ್ತಿ ಬಂದಿತು. ಆ ಮೂಲಕ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಲು ಸಾಧ್ಯವಾಯಿತು. ಕಾಂಗ್ರೆಸ್ಸ್ ಸ್ಥಾಪನೆಯಾದಾಗ ಅದರ ಮೊದಲ ಅಧಿವೇಶನಕ್ಕೆ ಜಿಲ್ಲೆಯಿಂದ ಪ್ರತಿನಿಧಿಗಳು ಹೋಗಿದ್ದರು.

ಬಾವುಸಾಹೇಬ ಭಾತೆ ಕಾಂಗ್ರೆಸ್ಸಿನ ಮೊದಲೆರಡು ಅಧಿವೇಶನಕ್ಕೆ ಪ್ರತಿನಿಧಿಯಾಗಿ ಹೋಗಿದ್ದರು. ಅನಂತರ ವಿಷ್ಣುಪಂತ ನಾಥೂ ಅವರು ಪ್ರತಿವರ್ಷ ಕಾಂಗ್ರೆಸ್ ಅಧಿವೇಶನಕ್ಕೆ ಹೋಗುತ್ತಿದ್ದರು. ಅವರೇ ಬೆಳಗಾವಿ ಜಿಲ್ಲೆಯಲ್ಲಿಯ

ರಾಜಕೀಯ ಮತ್ತು ಸಾರ್ವಜನಿಕ ಚಟುವಟಿಕೆಗಳ ಉಪಕ್ರಮಾರ್ಚಾರು.[೧] ಇದರಿಂದ ಜಿಲ್ಲೆಯಲ್ಲಿ ಸ್ವಾತಂತ್ರ್ಯದ ಪಂಜು ಹೊತ್ತಿತು. ಮುಂದೆ ಅನೇಕ ಜನ ಮುಖಂಡರು ಬೆಳಗಾವಿಗೆ ಭೇಟಿ ನೀಡಿದರು. ಸ್ವಾಮಿ ವಿವೇಕಾನಂದರು ಬೆಳಗಾವಿಗೆ ಬಂದಿದ್ದರು. ಇದರ ವ್ಯಕ್ತಿತ್ವ ಜನತೆಯ ಮೇಲೆ ಪ್ರಭಾವ ಬೀರಿತು.

ಲೋಕಮಾನ್ಯ ತಿಲಕರು ೩-೪ ಸಾರೆ ಬೆಳಗಾವಿ ಜಿಲ್ಲೆಗೆ ಬಂದು ಪ್ರಚಾರ ಮಾಡಿದರು. ಬೆಳಗಾವಿ, ಸಂಕೇಶ್ವರ, ಅಥಣಿ, ಬೈಲಹೊಂಗಲ, ಗುರ್ಲಹೊಸೂರುಗಳಲ್ಲಿ ಸಭೆ ಸಮ್ಮೇಳನಗಳು ನಡೆದವು. ಪುಣೆಯ ನಂತರ ಬೆಳಗಾವಿಯೇ ಆಗ ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿತ್ತು.[೨] ತಿಲಕರು ಸ್ವದೇಶೀ ಪ್ರಚಾರ, ವಿದೇಶೀ ವಸ್ತುಗಳ ಬಹಿಷ್ಕಾರ, ರಾಷ್ಟ್ರೀಯ ಶಾಲೆಗಳ ಸ್ಥಾಪನೆಯ ಬಗ್ಗೆ ಎಲ್ಲೆಡೆ ಪ್ರಚಾರ ಕೈಗೊಂಡರು. ಇವರ ಭಾಷಣಗಳಿಂದ ಜನರ ಮೇಲೆ ಪ್ರಭಾವವಾಗಿ ಜನತೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಪ್ರೇರೇಪಿಸಿತು. ಜನರು ಎಂತಹ ಕಷ್ಟದ ಪರಿಸ್ಥಿತಿಯಲ್ಲಿಯೂ ತಮ್ಮ ಹೋರಾಟವನ್ನು ಮುಂದುವರಿಸಿದರು. ಅನೇಕ ಜನ ತಮ್ಮ ನೌಕರಿಗಳಿಗೆ ರಾಜೀನಾಮೆ ನೀಡಿ ಚಳುವಳಿಯಲ್ಲಿ ಭಾಗಿಯಾದರು.

ತಿಲಕರು ೨೬-೪-೧೯೧೬ ರಲ್ಲಿ ಮುಂಬಯಿ ಪ್ರಾಂತೀಯ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವರಾಜ್ಯ ಸಂಘವನ್ನು ಸ್ಥಾಪಿಸಿದರು. ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಎಂದು ಘೋಷಿಸಿದರು. ಇದರೊಂದಿಗೆ ನರಸೋಪಂತ ಕೇಳಕರ, ಕೃಷ್ಣಾಜಿ ಪಂತ ಖಾಡಿಲಕರ, ಬಾಬುರಾವ್ ಗೋಖಲೆ, ಶಿವರಾಮ ಪಂತ ಪರಾಂಜಪೆ ಬಂದಿದ್ದರು. ೧೯೧೬ ರಲ್ಲಿ ತಿಲಕರೊಂದಿಗೆ ಗಾಂಧೀಜಿಯವರು ಮತ್ತು ಘೋರ್ಪಡೆಯವರು ಬಂದಿದ್ದರು.[೩]

ಈ ನಾಯಕರ ಆಗಮನ ಜನರಲ್ಲಿ ಹೊಸ ಹುರುಪು, ಚೈತನ್ಯವನ್ನು ಮೂಡಿಸಿ ಮತ್ತಷ್ಟು ಹುರುಪಿನಿಂದ ಚಳುವಳಿಯಲ್ಲಿ ಭಾಗವಹಿಸಲು ಪ್ರೇರೇಪಿಸಿತು. ಸಾವರ್ಕರ್‌ರವರ ಪ್ರಭಾವವೂ ಈ ಜಿಲ್ಲೆಯ ಮೇಲಾಯಿತು. ಇವರ ಬರಹಗಳು ಜನರನ್ನು ಪ್ರಭಾವಿಸಿದವು. ಸಾವರ್ಕರರು ಲಂಡನ್ನಿನಲ್ಲಿದ್ದಾಗ ಮ್ಯಾರಿಯನಿಯ ಬಗ್ಗೆ ಒಂದು ಕೃತಿಯನ್ನು ರಚಿಸಿದ್ದರು. ೧ ರೂ. ಬೆಲೆಯ ಪುಸ್ತಕವನ್ನು ೨೦೦-೩೦೦ ರೂ. ಬೆಲೆಗೆ ಜನ ಕೊಂಡುಕೊಂಡರು. ಬೆಳಗಾವಿ ಜಿಲ್ಲೆಗೂ ಪುಸ್ತಕದ ಕೆಲ ಪ್ರತಿಗಳು ಬಂದಿದ್ದವು. ಇವು ಇಲ್ಲಿಯ ಯುವಕರಿಗೆ ಸ್ಫೂರ್ತಿ ನೀಡಿದವು.[೪]

ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯವರು ಬೆಳಗಾವಿಗೆ ಬಂದಿದ್ದರು. ಇದೂ ಜನತೆಗೆ ಮಾರ್ಗದರ್ಶಿಯಾಯಿತು.

೧೯೨೯, ಸಪ್ಟಂಬರ್ ೫ ರಂದು ಉಕ್ಕಿನ ಮನುಷ್ಯರೆಂದು ಹೆಸರಾದ ಸರ್ದಾರ್ ವಲ್ಲಭಭಾಯಿ ಪಟೇಲರು ಹಿರೇಬಾಗೇವಾಡಿಗೆ ಬಂದಿದ್ದರು. ಬ್ರಿಟೀಷರ ರಾಕ್ಷಸೀ ರಾಜ್ಯ ಶಕ್ತಿಯನ್ನು ನಾಶಗೊಳಿಸಿ ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲು ಪ್ರತಿಯೊಬ್ಬನು ಸಿದ್ಧನಾಗಬೇಕೆಂದು ತಮ್ಮ ಭಾಷಣದಿಂದ ಕರೆ ಕೊಟ್ಟರು. ೧೭-೧೨-೧೯೩೧ ರಂದು ಪಂಡಿತ ನೆಹರುರವರು ಹಿರೇಬಾಗೇವಾಡಿಗೆ ಬಂದಿದ್ದರು. ಅವರ ಜೊತೆ ಕಮಲಾಬಾಯಿ ಚಟ್ಟೋಪಾಧ್ಯಾಯ, ಡಾ. ನಾರಾಯಣರಾವ್ ಹರ್ಡಿಕರ್ ಅವರು ಬಂದಿದ್ದರು. ೪-೩-೧೯೩೪ ರಲ್ಲಿ ಗಾಂಧೀಜಿಯವರು ಇಲ್ಲಿಗೆ ಬಂದಿದ್ದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅದ್ವಿತೀಯರು, ಅಪ್ರತಿಮವಾಗಿ ಹೋರಾಡಿದ ಸುಭಾಷ್ ಚಂದ್ರಭೋಸರು ೧೯೩೪ ರಲ್ಲಿ ಹಿರೇಬಾಗೇವಾಡಿಗೆ ಬಂದಿದ್ದರು. ೧೩-೨-೧೯೩೭ ರಲ್ಲಿ ನೆಹರುರವು ಮತ್ತೊಮ್ಮೆ ಇಲ್ಲಿಗೆ ಬಂದಿದ್ದರು.[೫]

ಇವರೆಲ್ಲರ ಭೇಟಿಯಿಂದ ಜಿಲ್ಲೆಯಾದ್ಯಂತ ಚಳುವಳಿ ಮತ್ತಷ್ಟು ಚುರುಕುಗೊಂಡಿತು. ಇದರಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೆಳಗಾವಿ ಜಿಲ್ಲೆ ಅಚ್ಚಳಿಯದ ಕಾರ್ಯವನ್ನು ಮಾಡಿತು. ಇವರು ಅನೇಕ ಸ್ಥಳಗಳಿಗೆ ಭೇಟಿ ನೀಡಿದರು. ಇದರಿಂದಾಗಿ ಹಳ್ಳಿಹಳ್ಳಿಗಳಲ್ಲಿ ಹೋರಾಟಗಾರರು ತಯಾರಾದರು. ಎಲ್ಲೆಡೆ ಅಸಹಕಾರ, ಬಹಿಷ್ಕಾರ, ಹರತಾಳಗಳು ಪ್ರಾರಂಭವಾದವು. ಗಾಂಧೀಜಿ ಮತ್ತು ತಿಲಕರ ವ್ಯಕ್ತಿತ್ವ ಜನರಲ್ಲಿ ಹೊಸ ಚೈತನ್ಯವನ್ನು ಮೂಡಿಸಿತು. ಇವರ ಮಾರ್ಗದರ್ಶನದಲ್ಲಿ ವ್ಯವಸ್ಥಿತವಾಗಿ ಕಾರ್ಯಗಳು ನಡೆಯಲು ಸಾಧ್ಯವಾಯಿತು.

೩.೨ ವಿವಿಧ ಚಳುವಳಿಗಳಲ್ಲಿ ಬೆಳಗಾವಿ ಜಿಲ್ಲೆ :

ರಾಷ್ಟ್ರೀಯ ಕಾಂಗ್ರೆಸ್ಸ ೧೮೮೫ ರಲ್ಲಿ ಸ್ಥಾಪನೆಯಾಯಿತು. ಕಾಂಗ್ರೆಸ್ ಅಧಿವೇಶನಗಳು ಪ್ರತಿವರ್ಷ ನಡೆಯುತ್ತಿದ್ದವು. ಮೊದಲಿನ, ಎರಡು ಅಧಿವೇಶನಗಳಿಗೆ ಬೆಳಗಾವಿ ಜಿಲ್ಲೆಯಿಂದ ಭಾವುಸಾಹೇಬ ಭಾತೆಯವರು ಹೋಗಿದ್ದರು.[೬] ಇವರು ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯದ ಜ್ಯೋತಿಯನ್ನು ಬೆಳಗಿಸಿದರು. ೧೯೦೫ ರಿಂದ ೧೯೪೨ ರ ಚಲೇಜಾವ್ ಕ್ರಾಂತಿಯವರೆಗಿನ ಎಲ್ಲ ಸ್ವಾತಂತ್ರ್ಯ ಹೋರಾಟಗಳಲ್ಲಿ ಈ ಜಿಲ್ಲೆ ಅಗ್ರಗಣ್ಯವಾಗಿ ಕೆಲಸ ಮಾಡಿದೆ.[೭] ಗಂಗಾಧರರಾವ್ ದೇಶಪಾಂಡೆಯವರು ಟಿಳಕರಿಂದ ಪ್ರಭಾವಿತರಾಗಿ ಜಿಲ್ಲೆಯಾದ್ಯಂತ ಚಳುವಳಿಯನ್ನು ಮತ್ತಷ್ಟು ಚುರುಕುಗೊಳಿಸಿದರು. ಕಾಂಗ್ರೆಸ್ ಹುಟ್ಟಿದಾಗಿನಿಂದ (೧೮೮೫) ದೇಶ

ಸ್ವಾತಂತ್ರ್ಯಗಳಿಸುವ ವರೆಗಿನ ಎಲ್ಲ ಚಳುವಳಿಗಳಲ್ಲಿ ಗಂಗಾಧರರಾವ್ ದೇಶಪಾಂಡೆ ಪಾಲ್ಗೊಂಡಿದ್ದರು.[೮] ಹುದಲಿಯಲ್ಲಿ ಕುಮರಿ ಆಶ್ರಮವನ್ನು ಪ್ರಾರಂಭಿಸಿದರು. ೧೯೦೭ರ ಸೂರತ್ ಅಧಿವೇಶನದಲ್ಲಿ ಬೆಳಗಾವಿ ಜಿಲ್ಲೆಯಿಂದಲೂ ಕಾರ್ಯಕರ್ತರು ಹೋಗಿದ್ದರು. ಶ್ರೀನಿವಾಸರಾವ್ ಕೌಜಲಗಿ, ಕಟ್ಟಿ ವಕೀಲರು ಮತ್ತು ದೇಶಪಾಂಡೆಯವರು ಭಾಗವಹಿಸಿದ್ದರು.

ತಿಲಕರು ಮಂಡಾಲೆ ಜೈಲಿನಿಂದ ಬಿಡುಗಡೆಯಾದ ಮೇಲೆ ಬೆಳಗಾವಿಗೆ ಬಂದಿದ್ದರು. ೧೯೧೬ ರಲ್ಲಿ ತಿಲಕರು ಹೋಂ ರೂಲ್ ಲೀಗನ್ನು ಸ್ಥಾಪಿಸಿದ ಸ್ಥಳ ಬೆಳಗಾವಿ.[೯] ತಿಲಕರು ಬೆಳಗಾವಿ ಜಿಲ್ಲೆಯಾದ್ಯಂತ ಹಲವಾರು ಸ್ಥಳಗಳಿಗೆ ಭೇಟಿ ನೀಡಿದರು. ತಿಲಕರು ಈ ಭಾಗದ ಜನರ ಮೇಲೆ ಪ್ರಭಾವ ಬೀರಿದರು.

೧೯೨೧ರ ಅಸಹಕಾರ ಚಳುವಳಿಯಲ್ಲಿಯೂ ಬೆಳಗಾವಿ ಜಿಲ್ಲೆಯ ಹಲವು ತಾಲೂಕು-ಹಳ್ಳಿಗಳ ಜನ ಪಾಲ್ಗೊಂಡಿದ್ದರು.[೧೦] ಗಾಂಧೀಜಿಯವರ ಆಜ್ಞೆಯಂತೆ ಇಲ್ಲಿಯ ಜನ ಅಸಹಕಾರ ಚಳುವಳಿಯಲ್ಲಿ ಬ್ರಿಟೀಷರಿಗೆ ಅಸಹಕಾರವನ್ನು ತೋರಿಸಿದರು. ಸೆರೆಮನೆವಾಸವನ್ನು ಅನುಭವಿಸಿದರು. ಗಂಗಾಧರರಾವ್ ದೇಶಪಾಂಡೆಯವರು, ಅಣ್ಣೂ ಗುರೂಜಿಯವರು, ಅಣ್ಣೂ ಕಾಕಾ, ಗೋವಿಂದರಾವ್ ಯಾಳಗಿ ಹೀಗೆ ಹಲವಾರು ಜನರು ಮುಖಂಡರು ಚಳುವಳಿಯ ನೇತೃತ್ವವನ್ನು ವಹಿಸಿದರು. ನೂರಾರು ಜನ ಜೈಲುಗಳಿಗೆ ಹೋದರು. ಶಿಕ್ಷೆಯನ್ನು ಅನುಭವಿಸಿದರು. ದಂಡವನ್ನು ಕಟ್ಟಿದರು. ಜಿಲ್ಲೆಯಾದ್ಯಂತ ವಿದ್ಯಾರ್ಥಿಗಳು ತಮ್ಮ ಶಾಲೆಗಳನ್ನು, ಕಾಲೇಜುಗಳನ್ನು ತೊರೆದು ಚಳುವಳಿಯಲ್ಲಿ ಭಾಗವಹಿಸಿದರು. ಬೆಳಗಾವಿ, ಹುದಲಿ, ಸುಲಧಾಳ, ಪಾಶ್ಚಾಪೂರ, ಸಂಕೇಶ್ವರ, ಹುಕ್ಕೇರಿ, ನಿಪ್ಪಾಣಿ, ಶಮನೇವಾಡಿ, ಅಥಣಿ, ಗೋಕಾಕ, ಸವದತ್ತಿ, ಬೈಲಹೊಂಗಲ ಹೀಗೆ ಬೆಳಗಾವಿ ಜಿಲ್ಲೆಯಾದ್ಯಂತ ಎಲ್ಲೆಡೆಯಿಂದ ಹೋರಾಟಗಾರರು ಇದರಲ್ಲಿ ಭಾಗವಹಿಸಿದ್ದರು.

ಗಂಗಾಧರ್ ರಾವ್ ದೇಶಪಾಂಡೆಯವರು ಎಲ್ಲರಿಗೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಬೇಕೆಂದು ಕರೆಕೊಟ್ಟರು. ಅಸಹಕಾರ ಆಂದೋಲನದಲ್ಲಿ ರಾಜದ್ರೋಹದ ಭಾಷಣಕ್ಕಾಗಿ ದೇಶಪಾಂಡೆಯವರಿಗೆ ೬ ತಿಂಗಳು ಕಠಿಣ ಶಿಕ್ಷೆಯಾಯಿತು. ದತ್ತೋಪಂತ ಮಜಲಿ, ರಾಮಚಂದ್ರ ಜೋಷಿ, ವಿಶ್ವಂಬರ ದೇಶಪಾಂಡೆ, ಹಣಮಂತ ನಾಯಕ, ಕೇಶವ ಗೋಖಲೆ, ಧೊಂಡೋ ರಾಜಾರಾಮ್ ಠಾಕೂರ್, ಶಿವರಾಮ ಕೊಪ್ಪಳರವರಿಗೆ ತಲಾ ಒಂದು ವರ್ಷ ಕಠಿಣ ಶಿಕ್ಷೆಗಳಾದವು.[೧೧]

ಅವರಷ್ಟೇ ಅಲ್ಲದೆ ಜಿಲ್ಲೆಯಾದ್ಯಂತ ಸಾವಿರಾರು ಜನ ಚಳುವಳಿಯಲ್ಲಿ ಭಾಗಿಯಾಗಿದ್ದರು. ಅವರಿಗೂ ಜೈಲು ಶಿಕ್ಷೆಯನ್ನು ವಿಧಿಸಲಾಯಿತು.

೧೯೨೩ ರ ನಾಗಪೂರದಲ್ಲಿ ಝುಂಡಾ ಸತ್ಯಾಗ್ರಹ ನಡೆಯಿತು. ಅಲ್ಲಿ ಕಾಂಗ್ರೆಸ್ ಧ್ವಜ ಹಾರಿಸಲು ಅಡ್ಡಿ ಮಾಡಲಾಗಿತ್ತು. ಇದರಿಂದ ಅದನ್ನು ಪ್ರತಿಭಟಿಸಿ ದೇಶಾದ್ಯಂತ ಹೋರಾಟಗಾರರು ಅಲ್ಲಿ ಬಂದಿದ್ದರು. ಈ ಸತ್ಯಾಗ್ರಹದಲ್ಲಿ ಬೆಳಗಾವಿ ಜಿಲ್ಲೆಯಿಂದಲೂ ಜನರು ಹೋಗಿದ್ದರು. ಸತ್ಯಾಗ್ರಹದಲ್ಲಿ ಬೆಳಗಾವಿ ಜಿಲ್ಲೆಯಿಂದ ದಾಮ್ಲೊ, ಅಣ್ಣಾ ಲೇಂಗಡೆ, ಶಹಾಪುರ, ದಯಾನಂದ ಅರಳೀಕಟ್ಟಿ ಬೆಳಗಾವಿ ಪಾಶ್ಚಾಪೂರದ ಕಲ್ಲೋ ಬಾಳಾಜಿ ದೀಕ್ಷಿತ ಮತ್ತು ಅಥಣಿಯ ಗುರುನಾಥ ಜೇರೆ, ಚಿಕ್ಕೋಡಿಯ ಅಣ್ಣಾಜಿ ಕುಲಕರ್ಣಿ ಮತ್ತು ಮಾಧ್ವಮಾಸ್ತರ ಗೋಕಾಕ ಮೊದಲಾದವರು ಭಾಗವಹಿಸಿದ್ದರು ಮತ್ತು ಇವರು ಒಂದೂವರೆ ವರ್ಷದ ಶಿಕ್ಷೆಗೊಳಗಾದರು.[೧೨]

೧೯೨೪ ರ ಡಿಸೆಂಬರ್ ತಿಂಗಳಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನವು ಬೆಳಗಾವಿಯಲ್ಲಿ ಕೂಡಿತು. ಗಾಂಧೀಜಿಯವರು ಈ ಅಧಿವೇಶನಕ್ಕೆ ಅಧ್ಯಕ್ಷರಾಗಿದ್ದರು. ಅವರು ತಮ್ಮ ಜೀವಮಾನದಲ್ಲಿ ಒಂದೇ ಒಂದು ಸಲ ಕಾಂಗ್ರೆಸ್ಸಿನ ಅಧ್ಯಕ್ಷರಾದದ್ದು ಬೆಳಗಾವಿಯ ಈ ಅಧಿವೇಶನವು.[೧೩] ಇದು ಸ್ವಾತಂತ್ರ್ಯ ಸಂಗ್ರಾಮದ ಒಂದು ಮಹತ್ವದ ಅಂಶವಾಗಿದೆ. ಅವರು ಅಧ್ಯಕ್ಷರಾದುದು ಒಂದು ಸೌಭಾಗ್ಯ. ಗಂಗಾಧರರಾವ್ ದೇಶಪಾಂಡೆವರು ಸ್ವಾಗತ ಸಮಿತಿಯಲ್ಲಿ ಅಧ್ಯಕ್ಷರಾಗಿ ಅವರ ನೇತೃತ್ವದಲ್ಲಿ ಎಲ್ಲ ಕಾರ್ಯಗಳು ನಡೆದವು. ದೇಶದ ಮೂಲೆ ಮೂಲೆಗಳಿಂದ ಜನ ಇಲ್ಲಿಗೆ ಬಂದಿದ್ದರು. ಗಾಂಧೀಜಿಯವರನ್ನು ಸಮೀಪದಿಂದ ನೋಡುವ ಅವಕಾಶ ಅವರೆಲ್ಲದಾಯಿತು. ಗಾಂಧೀಜಿಯವರ ವಿಚಾರಗಳಿಂದ ಜನ ಪ್ರಭಾವಿತರಾಗಿ ಅವುಗಳನ್ನು ಅನುಷ್ಠಾನಕ್ಕೆ ತರಲು ಶ್ರಮಿಸಿದರು. ಬೆಳಗಾವಿಯ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಬೆಳಗಾವಿಯ ಜನತೆ ನೀರಿಗಾಗಿ ಒಂದು ಭಾವಿಯನ್ನೇ ತೋಡಿದರು. ಕಾಂಗ್ರೆಸ್ ಭಾವಿ ಎಂದೇ ಅದನ್ನು ಇಂದಿಗೂ ಕರೆಯುತ್ತಾರೆ. ಬೆಳಗಾವಿ ಜಿಲ್ಲೆಯ ಜನರಲ್ಲಿ ಇಂತಹದ್ದೊಂದು ವಿಶೇಷ ಗುಣ ಇತ್ತು. ಮತ್ತು ದೇಶಕ್ಕಾಗಿ ನಿಸ್ವಾರ್ಥ ಭಾವದಿಂದ ಹೋರಾಡುವ ಮನೋಭಾವನೆ ಇಲ್ಲಿಯ ಜನರಲ್ಲಿತ್ತು.

ಬೆಳಗಾವಿ ಜಿಲ್ಲೆಯ ಕಾಂಗ್ರೆಸ್ ಅಧಿವೇಶನದ ವೈಶಿಷ್ಟ್ಯವೆಂದರೆ ವಿಭಿನ್ನ ರಾಜಕೀಯ ಹಿನ್ನಲೆಯ ಸಂಘಟನೆಗಳನ್ನು ಪ್ರತ್ಯೇಕವಾಗಿ ಮತ್ತು ವಿಭಿನ್ನ ರಾಜಕೀಯ ಹಿನ್ನಲೆಯ ಸಂಘಟನೆಗಳನ್ನು ಪ್ರತ್ಯೇಕವಾಗಿ ಮತ್ತು ಜಂಟಿಯಾಗಿ ಚರ್ಚೆ ನಡೆಸಲು

ಆಹ್ವಾನಿಸಲಾಗಿತ್ತು. ಖಿಲಾಫತ್ ಸಂಘಟನೆ ಮುಸ್ಲಿಂಲೀಗ್‌ನವರಿಂದ ಉದಾರವಾದಿಗಳವರೆಗೆ, ಬ್ರಾಹ್ಮಣೇತರರ ಪಕ್ಷದಿಂದ ಹಿಡಿದು ನಿಮ್ನ ವರ್ಗಗಳವರೆಗೆ ಎಲ್ಲರನ್ನು ಸಮಾವೇಶದಲ್ಲಿ ಭಾಗವಹಿಸಲು ಕರೆಯಲಾಗುತ್ತಿತ್ತು. ಪರಸ್ಪರ ವಿರೋಧವಾದ ಭಿನ್ನಾಭಿಪ್ರಾಯವುಳ್ಳ ಪಕ್ಷಗಳು ಸೇರಿದ್ದರಿಂದ ಮಾತ್ರ ಅದು ಒಂದು ರಾಷ್ಟ್ರೀಯ ಸಮಾವೇಶವೆಂದು ವರ್ಣಿಸಲಾಗದು. ಆದರೆ ಈ ಸಮಸ್ಯೆಗಳನ್ನು ಅಮೂಲಾಗ್ರವಾಗಿ ಅರಿತು ಅವುಗಳಿಗೆ ನಿಜವಾಗಿ ಪರಿಹಾರ ಕಂಡುಹಿಡಿಯಬೇಕೆಂದು ತುಡಿಯುತ್ತಿದ್ದ ಒಬ್ಬ ವ್ಯಕ್ತಿ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದು ಆ ಅಧಿವೇಶನಕ್ಕೆ ರಾಷ್ಟ್ರೀಯತೆಯ ವೈಶಾಲ್ಯತೆಯನ್ನು ತಂದುಕೊಟ್ಟಿತು.[೧೪]

ಗಾಂಧೀಜಿಯವರು ಪರಸ್ಪರ ದ್ವೇಷಾಸೂಯೆಗಳನ್ನು ಮರೆತು ದೇಶಕ್ಕಾಗಿ ಒಂದಾಗಿ ದುಡಿಯಬೇಕೆಂದು ಕರೆ ನೀಡಿದರು. ಬೆಳಗಾವಿಯ ಅಧಿವೇಶನ ಐಕ್ಯತಾ ಅಧಿವೇಶನವಾಗಿತ್ತು. ಜನರು ಗಾಂಧೀಜಿಯವರಿಂದ ಸ್ಫೂರ್ತಿಯನ್ನು, ಪ್ರೇರಣೆಯನ್ನು ಪಡೆದರು. ಇದು ಚಳುವಳಿಗೆ ಆನೆಯ ಬಲ ತಂದುಕೊಟ್ಟಿತು. ಅಧಿವೇಶನದ ಮೂಲಕ ಗಾಂಧೀಜಿಯವರ ವಿಚಾರಗಳು ಜಿಲ್ಲೆಯಾದ್ಯಂತ ಹರಡಿ ಜನರನ್ನು ಸಂಘಟಿಸಿ ಹೋರಾಡಲು ಅಣಿಗೊಳಿಸಿದವು.

೧೯೨೦ ಜನೇವರಿ ೨೬ ರನ್ನು ಗಾಂಧೀಜಿಯವರು ಸ್ವಾತಂತ್ರ್ಯದ ದಿನವೆಂದು ಆಚರಿಸಲು ಕರೆ ನೀಡಿದರು. ಆ ದಿನ ಪ್ರತಿಯೊಬ್ಬ ಭಾರತೀಯನು ಜಾಹೀರ ಸಭೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಯನ್ನಾಚರಿಸಿ ಪ್ರತಿಜ್ಞೆ ಸ್ವೀಕರಿಸಬೇಕೆಂದು ಆದೇಶವಿತ್ತರು.[೧೫] ಬೆಳಗಾವಿ ಜಿಲ್ಲೆಯಲ್ಲಿ ಬೆಳಗಾವಿ, ಪಾಶ್ಚಾಪೂರ, ಸಂಕೇಶ್ವರ, ಹುದಲಿ, ನಿಪ್ಪಾಣಿ, ಬೈಲಹೊಂಗಲ ಮುಂತಾದ ಅನೇಕ ಸ್ಥಳಗಳಲ್ಲಿ ಜಾಹೀರ ಸಭೆಗಳಾದವು. ಸಾವಿರಾರು ಜನರು ಸ್ವಾತಂತ್ರ್ಯದ ಪ್ರತಿಜ್ಞೆ ಸ್ವೀಕರಿಸಿದರು.[೧೬] ಹೀಗೆ ಬೆಳಗಾವಿ ಜಿಲ್ಲೆಯು ೧೯೩೦ ರಲ್ಲಿ ಸ್ವಾತಂತ್ರ್ಯ ದಿನವನ್ನಾಚರಿಸುವಲ್ಲಿಯೂ ತನ್ನ ಪಾತ್ರ ನಿರ್ವಹಿಸಿತು.

೧೯೩೦ ರ ದಂಡಿ ಸತ್ಯಾಗ್ರಹ ಆರಂಭವಾದಾಗ ದೇಶಪಾಂಡೆಯವರು ಗಾಂಧೀಜಿ ನಿಗದಿಪಡಿಸಿದ ಒಂದು ದಿನ ಮುಂಚಿತವಾಗಿ ಕಾಯಿದೆ ಭಂಗಮಾಡಿ ಜೈಲಿಗೆ ಹೋದರು.[೧೭] ಪಾಶ್ಚಾಪೂರ, ಹುದಲಿ, ಮುರಗೋಡ, ಅಥಣಿ, ನಿಪ್ಪಾಣಿ, ಇನ್ನೂ ಮುಂತಾದ ಕಡೆಗಳಿಂದ ಸತ್ಯಾಗ್ರಹಿಗಳು ಭಾಗವಹಿಸಿದರು. ಉಪ್ಪು ಮಾರುವುದು, ಈಚಲಗಿಡ ಕಡಿಯುವುದು ಸತ್ಯಾಗ್ರಹಿಗಳ ಚಟುವಟಿಕೆಗಳಾಗಿದ್ದವು. ಈ ಹೋರಾಟಗಾರರು ಬ್ರಿಟೀಷರಿಂದ ಬಂಧನಕ್ಕೊಳಗಾದರು. ಕಾರಾಗೃಹದಲ್ಲಿ ಸ್ಥಳ

ಇಲ್ಲದಾಯಿತು. ಆಗಿನ ಮುಂಬಯಿ ಪ್ರಾಂತ್ಯದ ಕರ್ನಾಟಕ ವಿಭಾಗದಿಂದ ಸೆರೆಕಂಡ ಸತ್ಯಾಗ್ರಹಿಗಳಲ್ಲಿ ಅರ್ಧದಷ್ಟು ಅಂದರೆ ೭೫೦ ಮಂದಿ ಬೆಳಗಾವಿ ಜಿಲ್ಲೆಯವರೇ ಆಗಿದ್ದರು. ಮುಂಬಯಿ ಸರ್ಕಾರದ ಆಂಗ್ಲ ಕಂದಾಯ ಕಾರ್ಯದರ್ಶಿ ಕರ್ನಾಟಕವು ಗುಜರಾತಿಗಿಂತ ಕೇಡು ಎಂಬುದಾಗಿ ದಾಖಲು ಮಾಡಿದ್ದಾರೆ.[೧೮]

ಬೆಳಗಾವಿ ಜಿಲ್ಲೆಯಾದ್ಯಂತ ಅನೇಕ ತಾಲೂಕುಗಳ, ಹಳ್ಳಿಗಳ ಜನತೆ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಜನರ ಜೀವನಾವಶ್ಯಕ ವಸ್ತುವಾದ ಉಪ್ಪಿನ ಮೇಲಿನ ಕಂದಾಯವನ್ನು ಸರ್ಕಾರ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ಎಲ್ಲೆಡೆ ವ್ಯಾಪಕ ಪ್ರತಿಭಟನೆಗಳಾದವು. ಸ್ವಯಂ ಸ್ಫೂರ್ತಿಯಿಂದ ಜನರು ಇದರಲ್ಲಿ ಭಾಗವಹಿಸಿದರು. ಬೇರೆ ಬೇರೆ ಪಥಕಗಳನ್ನು ಮಾಡಿ ಆಯಾ ಪಥಕದ ಮುಖ್ಯಸ್ಥರೊಡನೆ ಜನ ಭಾಗವಹಿಸಿದರು. ಜಿಲ್ಲೆಯಾದ್ಯಂತ ಮುಂಜಾನೆ ಪ್ರಭಾತಪೇರಿಯಲ್ಲಿ ಪದಗಳನ್ನು ಹಾಡುತ್ತಾ ಜನರಲ್ಲಿ ರಾಷ್ಟ್ರಭಕ್ತಿಯ ಭಾವನೆಯನ್ನು ಬೆಳೆಸಿದರು. ಈ ಕಾರ್ಯದಲ್ಲಿ ಅಬಾಲವೃದ್ಧರಾಗಿ ಎಲ್ಲರೂ ಭಾಗವಹಿಸಿದರು. ೧೯೩೦-೩೧ ರ ಆಂಧೋಲನದಲ್ಲಿ ಸ್ತ್ರೀಯರೂ ತಮ್ಮ ಪಾಲಿನ ಕರ್ತವ್ಯವನ್ನು ವೀರ ಮಹಿಳೆಯರಿಗೆ ಶೋಭಿಸುವ ಹಾಗೆ ಮಾಡಿದರು.[೧೯] ಜಿಲ್ಲೆಯಾದ್ಯಂತ ಅನೇಕ ಊರುಗಳಿಂದ ಜನರು ಬಂಧಿತರಾದರು.

೧೯೩೨ ರಲ್ಲಿ ಗಾಂಧೀಜಿಯವರ ಬಂಧನವಾಗುತ್ತಲೇ ಜಿಲ್ಲೆಯಲ್ಲಿ ಹಲವಾರು ಮುಖಂಡರನ್ನು ಬಂಧಿಸಲಾಯಿತು.[೨೦] ವೆಂಕಟರೆಡ್ಡಿ ಹೂಲಿಯವರಿಗೆ ಈ ಆಂದೋಲನದಲ್ಲಿ ೧೦ ವರ್ಷದ ಕಠಿಣ ಶಿಕ್ಷೆಯನ್ನು ವಿಧಿಸಲಾಗಿತ್ತು. ಕರ್ನಾಟಕದಲ್ಲಿ ಅಷ್ಟೇ ಏಕೆ ಇಡೀ ದೇಶದೆಲ್ಲೆಡೆ ಸವಿನಯ ಕಾಯಿದೆ ಭಂಗಕ್ಕಾಗಿ ಇಷ್ಟು ದೀರ್ಘಾವಧಿ ಶಿಕ್ಷೆಗೆ ಗುರಿಯಾದವರು ಇವರೊಬ್ಬರೆ. ಈ ಚಳುವಳಿಯಲ್ಲಿ ೧೦೦೦ ಜನ ಸ್ವಾತಂತ್ರ್ಯ ಯೋಧರು ಈ ಜಿಲ್ಲೆಯಿಂದ ಜೈಲು ಸೇರಿ ಈ ಜಿಲ್ಲೆಗೆ ಅಗ್ರಸ್ಥಾನ ತಂದುಕೊಟ್ಟಿತು.[೨೧] ಇದು ಬೆಳಗಾವಿ ಜಿಲ್ಲೆ ಗಾಂಧೀಜಿಯವರ ಪ್ರತಿಯೊಂದು ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿಕೊಂಡು ಬಂದಿತೆಂಬುದಕ್ಕೆ ಇನ್ನೊಂದು ನಿದರ್ಶನ.

೧೯೩೨ ರಲ್ಲಿ ದಿಲ್ಲಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ದಿಲ್ಲಿ ಕಾಂಗ್ರೆಸ್ಸಿಗೆ ಕರ್ನಾಟಕದಿಂದ ೫ ಜನ ಪ್ರತಿನಿಧಿಗಳು ಹೋಗಿದ್ದರು. ಅವರೆಲ್ಲರೂ ಬೆಳಗಾವಿ ಜಿಲ್ಲೆಯವರೇ! ಸರ್ವಶ್ರೀ ಬಾಬಾಸಾಹೇಬ ಸೋಮಣ್ಣ, ಅಣ್ಣೂ ಗುರೂಜಿ, ರಾವಸಾಹೇಬ ಸತ್ತಿ, ಅಣ್ಣಾಸಾಹೇಬ ಸಿದ್ಧಾಂತಿ (ಅಥಣಿ) ಹಾಗೂ ಶ್ರೀಮತಿ ಅಂಬಕ್ಕಾ ಬಳಿಗಾರ (ಅಥಣಿ) ಇವರೇ ಆ ಪ್ರತಿನಿಧಿಗಳು.[೨೨]

ಗಾಂಧೀಜಿಯವರು ಮೇ-೫, ೧೯೩೩ ರಂದು ೨೧ ದಿನಗಳ ಉಪವಾಸ ಆರಂಭಿಸಿದರು.[೨೩] ಈ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಕಾರ್ಯಕರ್ತರು ಕಾಲುನಡಿಗೆಯಿಂದ ಪ್ರಚಾರ ಕೈಗೊಂಡರು. ಇಲ್ಲಿಯ ಮುಖಂಡರು ಹಳ್ಳಿ ಹಳ್ಳಿಗೆ ಕಾಲ್ನಡಿಗೆಯಿಂದಲೇ ಹೋಗಿ ಗಾಂಧೀ ತತ್ವಗಳನ್ನು ಪ್ರಸಾರ ಮಾಡಿದರು. ಜನರಲ್ಲಿ ಜಾಗೃತಿ ಮೂಡಿಸಿದರು. ಧ್ವಜವಂದನೆ ಕಾರ್ಯಕ್ರಮಗಳು, ಸಿಂಧಿಗಿಡ ಕಡಿಯುವುದು, ಮೆರವಣಿಗೆಗಳು, ಸ್ಟೇಷನ್‌ಗಳನ್ನು ಸುಡುವುದು, ತಂತಿ ಕತ್ತರಿಸುವ ಕಾರ್ಯಗಳಲ್ಲಿ ಬೆಳಗಾವಿ ಜಿಲ್ಲೆಯ ಹೋರಾಟಗಾರರು ಪಾಲ್ಗೊಂಡರು. ಸೇವಾದಲದ ಕಾರ್ಯಕರ್ತರಾಗಿ ರಾಜ್ಯಾದ್ಯಂತ ಅನೇಕ ಜನ ಕಾರ್ಯ ನಿರ್ವಹಿಸಿದರು. ಸೇವಾದಳದ ಕಾರ್ಯದಲ್ಲಿ ಬೆಳಗಾವಿ ಜಿಲ್ಲೆಯೂ ತನ್ನ ಕಾರ್ಯ ನಿರ್ವಹಿಸಿತು. "ನಮ್ಮ ಜಿಲ್ಲೆಯಲ್ಲಿ ಈ ಕಾರ್ಯವನ್ನು ಅಥಣಿಯ ಗುರುಮಾಸ್ತರ ಜೇರೆ, ಶಹಾಪೂರಿನ ಲೇಂಗಡೆ, ಮುರಗೋಡದ ಧೋಂಡೋ, ಎಲ್ಲೋ ಕುಲಕರ್ಣಿ, ರಾಮಚಂದ್ರ ಜೋಷಿ ಮುಂತಾದವರು ಬಹಳ ನಿಷ್ಠೆಯಿಂದ ಮಾಡಿದರು."[೨೪] ಜಿಲ್ಲೆಯಾದ್ಯಂತ ಪ್ರವಾಸ ಕೈಗೊಂಡು ಜನರ ದುಃಖಗಳಿಗೆ ಸ್ಪಂದಿಸಿ ಅವರನ್ನು ಮೇಲೆತ್ತುವ ಕಾರ್ಯಗಳು ಎಲ್ಲೆಡೆ ನಡೆದವು.

ಅಖಿಲ ಭಾರತ ಗಾಂಧೀ ಸೇವಾ ಸಮ್ಮೇಲನ ೧೯೩೭ ರಲ್ಲಿ ಏಪ್ರಿಲ್‌ನಲ್ಲಿ ಹುದಲಿಯಲ್ಲಿ ಕೂಡಿತು. ಮಹಾತ್ಮಾ ಗಾಂಧೀಜಿ ಸೇರಿದಂತೆ ಹಲವಾರು ಮುಖಂಡರು ಬೆಳಗಾವಿಗೆ ಬಂದಿದ್ದರು.[೨೫]

೧೯೪೧ ರಲ್ಲಿ ಗಾಂಧೀಜಿಯವರು ಯುದ್ಧವಿರೋಧಿ ಘೋಷಣೆಯ ವಯಕ್ತಿಕ ಸತ್ಯಾಗ್ರಹ ಆರಂಭಿಸುತ್ತಲೇ ಬೆಳಗಾವಿ ಜಿಲ್ಲೆಯು ಅದರಲ್ಲೂ ಉತ್ಸಾಹದಿಂದ ಭಾಗವಹಿಸಿತು. ವಾಮನರಾವ್ ಬಿದರಿಯವರ ನೇತೃತ್ವದಲ್ಲಿ ಅಣ್ಣುಗುರೂಜಿ, ಜಯದೇವರಾವ್ ಕುಲಕರ್ಣಿಯವರು ಭಾಗವಹಿಸಿದರು. ಸವದತ್ತಿಯಲ್ಲಿ ಒಂದೇ ದಿನ ೧೦೦ ಮಹಿಳೆಯರು ಒಂದೇ ಸ್ಥಳದಲ್ಲಿ ಒಬ್ಬರ ನಂತರ ಒಬ್ಬರಂತೆ, ಯುದ್ಧ ವಿರೋಧಿ ಘೋಷಣೆ ಮಾಡಿ ಬಂಧಿತರಾದರು.[೨೬] ಹೀಗೆ ವಯಕ್ತಿಕ ಸತ್ಯಾಗ್ರಹ ಸಾಮೂಹಿಕ ಸತ್ಯಾಗ್ರಹವಾಗಿ ಬೆಳಗಾವಿ ಜಿಲ್ಲೆಯಲ್ಲಿ ಪರಿವರ್ತನೆಯಾಯಿತು. ಕಾರ್ಯಕರ್ತರಕಾರ್ಯಗಳು ಪೋಲೀಸರನ್ನು ದಂಗುಬಡಿಸಿದವು. ಶ್ರೀರಂಗ ಕಾಮತ, ಚನ್ನಪ್ಪಾ ವಾಲಿ, ಅಣ್ಣುಗುರೂಜಿ ಮತ್ತು ರಾಮಚಂದ್ರ ವಡವಿಯವರನ್ನು ಬಂಧಿಸಲು ಅನುಕೂಲವಾಗುವಂತೆ ಮಾಹಿತಿ ನೀಡಿದವರಿಗೆ ತಲಾ ೫೦೦೦ ರೂ. ಬಹುಮಾನ ನೀಡುವುದಾಗಿ ಘೋಷಿಸಿದ್ದರು.[೨೭] ಬ್ರಿಟೀಷರಿಗೆ ದಂಗು ಬಡಿಸಿದ್ದ ೪ ಜನ

ಹೋರಾಟಗಾರರು ಬೆಳಗಾವಿ ಜಿಲ್ಲೆಯಲ್ಲಿ ಇದ್ದುದು ಚಳುವಳಿಯ ತೀವ್ರತೆಗೆ ಸಾಕ್ಷಿಯಾಗಿದೆ.

ಚಲೇಜಾವ್ ಚಳುವಳಿಯಲ್ಲಿ ಬೆಳಗಾವಿ ಜಿಲ್ಲೆಯಾದ್ಯಂತ ಅನೇಕ ಚಟುವಟಿಕೆಗಳು ನಡೆದವು. ಬೆಳಗಾವಿ ಜಿಲ್ಲೆಯಲ್ಲಿ ಚಲೆಜಾವ್ ಚಳುವಳಿ ನಡೆಸುವ ಗುಪ್ತ ಸಂಘಟನೆಗೆ ಶ್ರೀ ಬಿದರಿಯವರು ಪ್ರಮುಖರಾಗಿದ್ದರು. ಕೇಂದ್ರ ಕಛೇರಿಯು ಬೆಳಗಾವಿಯಲ್ಲಿದ್ದು ಅದರ ಕಾರ್ಯನಿರ್ವಹಣೆಯನ್ನು ಶ್ರೀ ಜಯದೇವರಾವ್ ಕುಲಕರ್ಣಿಯವರು ನೋಡಿಕೊಳ್ಳುತ್ತಿದ್ದರು.[೨೮]

ಜಿಲ್ಲೆಯಾದ್ಯಂತ ಅನೇಕ ಗುಂಪುಗಳು ವ್ಯವಸ್ಥಿತವಾಗಿ ಕಾರ್ಯ ಮಾಡಿದವು. ಕೇಂದ್ರ ಕಛೇರಿಯ ಮಾರ್ಗದರ್ಶನದಲ್ಲಿ ಕೆಳಗಿನ ಹಂತದಲ್ಲಿ ಕಾರ್ಯಗಳು ನಡೆದವು. ಪ್ರತಿಯೊಂದು ಗುಂಪುಗಳ ಮಧ್ಯ ಹೊಂದಾಣಿಕೆ ಇತ್ತು. ಮಹತ್ವದ ಕಾರ್ಯಗಳನ್ನು ಒಮ್ಮತದಿಂದ ೨-೩ ಗುಂಪುಗಳು ಕೂಡಿಕೊಂಡು ಮಾಡುತ್ತಿದ್ದವು. ಮಳೆ ಬಿಸಿಲೆನ್ನದೆ, ಹಸಿವು ನೀರಡಿಕೆಯನ್ನದೆ ಹೊಲಗಳಲ್ಲಿ ಗುಡ್ಡಗಾಡುಗಳಲ್ಲಿ ಹೋರಾಟಗಾರರು ನಿದ್ರಿಸಿ ಬಂದ ಕಷ್ಟಗಳನ್ನು ಸಹಿಸಿಕೊಂಡು ಹೋರಾಡಿದರು.

ಅನೇಕ ಸ್ಟೇಷನ್‌ಗಳನ್ನು ಸುಡಲಾಯಿತು, ಅಂಚೆಕಛೇರಿಗಳು, ಬಂಗ್ಲೆಗಳು, ಕಾಗದಪತ್ರಗಳನ್ನು ಸುಡಲಾಯಿತು. ಬ್ರಿಟೀಷರ ದಬ್ಬಾಳಿಕೆ ಜನತೆಯನ್ನು ಈ ಕಾರ್ಯಗಳನ್ನು ಮಾಡುವಂತೆ ಪ್ರೇರೇಪಿಸಿತು. ಈ ಹೋರಾಟಗಾರರ ಗುರಿ ಬ್ರಿಟೀಷರಿಗೆ ಅಸಹಕಾರ ತೋರಿಸುವುದಾಗಿತ್ತು. ಈ ಕಾರ್ಯದಲ್ಲಿ ಎಷ್ಟೇ ಹಿಂಸೆ, ನೋವು ತಮಗಾದರೂ ಹೋರಾಟಗಾರರು ಜನರ ಜೀವಕ್ಕೆ ಧಕ್ಕೆ ಮಾಡದೇ ಹೋರಾಟ ಮಾಡಿದರು. ಜನರ ಹಣ ಆಸ್ತಿಯನ್ನು ಕಬಳಿಸಲಿಲ್ಲ. ಅಹಿಂಸಾತ್ಮಕವಾಗಿ ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಹೋರಾಟ ಮುಂದುವರೆಯಿತು.

ಸಂಘಟಿತ ಕಾರ್ಯ ಮಾಡುವುದರಲ್ಲಿ ಬೆಳಗಾವಿ ಜಿಲ್ಲೆಯು ಮುಂಬಯಿಯಲ್ಲಿಯೇ ಪ್ರಥಮ ಪಂಕ್ತಿಯಲ್ಲಿ ಯಾವಾಗಲೂ ಉಳಿಯಿತು. ಎಷ್ಟೇ ಆಪತ್ತುಗಳು ಬಂದರೂ ಈ ಹೋರಾಟದಲ್ಲಿಯೂ ಸಂಘಟನೆಯು ವ್ಯವಸ್ಥಿತವಾಗಿ ಉಳಿಯಿತು.[೨೯]

೩.೪ ಮಹಿಳೆಯರ ಪಾತ್ರ :

ಬೆಳಗಾವಿ ಜಿಲ್ಲೆಯಲ್ಲಿ ಮಹಿಳೆಯರೂ ಸಹ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಮಾಡಿದರು. ಪುರುಷರೊಂದಿಗೆ ತಾವು ತಮ್ಮ ಕೈಲಾದ

ಸಹಾಯವನ್ನು ಮಾಡಿದ್ದಾರೆ. ಕರಪತ್ರ ಹಂಚುವುದು, ಸಭೆಗಳನ್ನು ನಡೆಸುವುದು, ಪ್ರಭಾತ ಪೇರಿ ನಡೆಸುವುದು ಮುಂತಾದ ಕಾರ್ಯಗಳಲ್ಲಿ ಮಹಿಳೆಯರು ಪಾಲ್ಗೊಂಡರು.

೧೯೩೦ ರ ಉಪ್ಪಿನ ಸತ್ಯಾಗ್ರಹದಲ್ಲಿ ಬೆಳಗಾವಿಯಲ್ಲಿ ಪ್ರಚಂಡ ಪ್ರಭಾತ ಪೇರಿಗಳು ಹೊರಡುತ್ತಿದ್ದವು. ಅವುಗಳಲ್ಲಿ ರಾಣಿ ಲಕ್ಷ್ಮೀ ಪಥಕ ಎಂಬ ಮಹಿಳೆಯರದ್ದೇ ಆದ ಒಂದು ಪ್ರಭಾತಪೇರಿ ದಿನಾಲೂ ಹಾಡುಗಳನ್ನು ಹಾಡುತ್ತ ಹೊರಡುತ್ತಿತ್ತು. ಶಾಂತಾಬಾಯಿ ೧೯೨೪ ರ ಡಿಸೆಂಬರ್ದಲ್ಲಿ ಬೆಳಗಾವಿಯಲ್ಲಿ ಕೂಡಿದ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಸ್ವಯಂ ಸೇವಕಿಯಾಗಿ ದುಡಿದರು ಮತ್ತು ೧೯೩೦ ಮತ್ತು ೧೯೩೨ ರ ಚಳುವಳಿಯಲ್ಲಿ ಸ್ವಯಂ ಸೇವಕಿಯಾಗಿ ದುಡಿದರು. ೧೯೪೧ ರ ಯುದ್ಧ ವಿರೋಧಿ ಘೋಷಣೆಯ ವಯಕ್ತಿಕ ಸತ್ಯಾಗ್ರಹದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ೫೦ಕ್ಕೂ ಮಿಕ್ಕ ಮಹಿಳೆಯರು ಯುದ್ಧ ವಿರೋಧಿ ಘೋಷಣೆ ಮಾಡಿ ಜೈಲಿಗೆ ಹೋದರು.[೩೦]

ಇವರಷ್ಟೇ ಅಲ್ಲದೆ ಜಿಲ್ಲೆಯಾದ್ಯಂತ ಹಳ್ಳಿಹಳ್ಳಿಗಳಿಂದ ನೂರಾರು ಮಹಿಳೆಯರು ದೇಶದ ರಾಷ್ಟ್ರೀಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಇಂಗ್ಲೀಷರು ನೀಡುವ ಕಿರುಕುಳಗಳನ್ನು ಸಹಿಸಿಕೊಂಡು ಸೆರೆಮನೆ ವಾಸವನ್ನು ಅನುಭವಿಸಿ, ಸ್ವಾತಂತ್ರ್ಯ ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮುಂಬೈಯ ಕಾಂಗ್ರೆಸ್ಸ ಅಧಿವೇಶನಕ್ಕೆ ಕರ್ನಾಟಕದಿಂದ ಭಾಗವಹಿಸಿದವರಲ್ಲಿ ಅಥಣಿಯ ಅಂಬಕ್ಕಾ ಬಳಿಗಾರರು ಒಬ್ಬರು. ಸ್ತ್ರೀಯಾದರೂ ಕ್ರಾಂತಿಕಾರರಿಂದ ಕರ್ನಾಟಕದ ಹುಲಿ ಎಂಬ ಬಿರುದು ಪಡೆದಿದ್ದರು.[೩೧] ೧೯೩೧ ರ ಉಪ್ಪಿನ ಸತ್ಯಾಗ್ರಹ ಮತ್ತು ೧೯೩೨ ರ ಕಾಯಿದೆಭಂಗ ಚಳುವಳಿಯಲ್ಲಿ ಭಾಗವಹಿಸಿ ಕಾರಾಗೃಹ ಕಂಡರು.[೩೨] ಹಳ್ಳಿಯಲ್ಲಿಯ ಹೆಣ್ಣು ಮಕ್ಕಳೂ ಸಹ ಚಳುವಳಿಗೆ ಸಹಾಯ ಮಾಡಿದರು. ಚಳುವಳಿಕಾರರಿಗೆ ಬುತ್ತಿಕಟ್ಟಿಕೊಟ್ಟು ತಮ್ಮ ಸೇವೆ ಸಲ್ಲಿಸಿದ್ದರು. ಹೀಗೆ ಮಹಿಳೆಯರ ಪಾತ್ರ ಕೂಡಾ ಸ್ವಾತಂತ್ರ್ಯ ಚಳುವಳಿ ವಿಶಿಷ್ಟವಾದುದು.

ಬೆಳಗಾವಿ ಜಿಲ್ಲೆಯಲ್ಲಿಯ ಹಲವಾರು ತಾಲೂಕುಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದವು. ಹಾಗೇ ಅಥಣಿ ತಾಲೂಕು ಕೂಡಾ ಚಳುವಳಿಗೆ ತನ್ನ ಕೊಡುಗೆಯನ್ನು ನೀಡಿದೆ. ಇಲ್ಲಿಯ ಹೊರಾಟಗಾರರು ಸಕ್ರೀಯವಾಗಿ ಚಳುವಳಿಯಲ್ಲಿ ಭಾಗವಹಿಸಿದರು. ಎ.ಎಸ್. ಕುಲಕರ್ಣಿ, ಗುರುಮಾಸ್ತರ ಜೇರೆ, ನಾರಾಯಣ ದೇಶಪಾಂಡೆ, ಸಿದ್ಧಾಂತಿ ಮುಂತಾದವರು ಅಣ್ಣೂ ಗುರೂಜಿ,

ರಾಮಚಂದ್ರ ವಡವಿ, ಬಿದರಿಯವರಂತಹ ನಾಯಕರ ಮಾರ್ಗದರ್ಶನದಲ್ಲಿ ಈ ಭಾಗದಲ್ಲಿ ಚಳುವಳಿಯನ್ನು ಹಬ್ಬಿಸಿದರು. ಇವರೆಲ್ಲ ಜನರಲ್ಲಿ ಹೊಸ ಚೈತನ್ಯವನ್ನು ಮೂಡಿಸಿದರು. ಸತ್ತಿ, ಜೂಗುಳ, ಕೊಟ್ಟಲಗಿ, ಕೊಕಟನೂರ, ಅಪಹಳ್ಳಿ, ರಾಮತೀರ್ಥ, ಕಕಮರಿ, ಖವಟಕೊಪ್ಪ, ಉಗಾರಖುರ್ದ, ಶೇಡಬಾಳ, ಮಾಂಜರಿ, ಮಂಗಸೂಳಿ, ಶಿರಗುಪ್ಪಿ, ಸಪ್ತಸಾಗರ, ಸವದಿ ಹೀಗೆ ಸುತ್ತಮುತ್ತಲಿನ ಊರುಗಳಲ್ಲಿ ಹೋರಾಟಗಾರರು ತಯಾರಾಗಿ ಚಳುವಳಿಯಲ್ಲಿ ಧುಮುಕಿದರು. ಈ ಭಾಗದ ಹೋರಾಟಗಾರರು ತಂತಿ ಕತ್ತರಿಸುವುದು, ರೈಲ್ವೆ ಹಳಿಗಳನ್ನು ಕೀಳುವುದು, ಸಿಂಧಿಗಿಡ ಕಡಿಯುವುದು, ಪೋಸ್ಟ ಚೀಲಗಳನ್ನು ಲೂಟಿ ಮಾಡುವುದು, ಮದ್ಯದಂಗಡಿಗಳನ್ನು ಮುಚ್ಚುವುದು ಮುಂತಾದವುಗಳನ್ನು ಮಾಡುತ್ತಿದ್ದರು. ಐನಾಪೂರವು ಸಹ ಇದಕ್ಕೆ ಹೊರತಾಗಿಲ್ಲ. ಇಲ್ಲಿಯ ಹೋರಾಟಗಾರರು ಸಹ ಸ್ವಾತಂತ್ರ್ಯ ಚಳುವಳಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಹಲವಾರು ಸಲ ಜೈಲುವಾಸ ಅನುಭವಿಸಿದ್ದಾರೆ. ರಾಷ್ಟ್ರೀಯ ಚಳುವಳಿಯಲ್ಲಿ ಕೃಷ್ಣೆಯ ದಡದ ಐನಾಪೂರದ ಹೋರಾಟಗಾರರು ಕೆಚ್ಚೆದೆಯಿಂದ ಹೋರಾಡಿದರು.

ಅಡಿಟಿಪ್ಪಣಿಗಳು :

೧. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೧, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೯೮೫.

೨. ಬಾ.ಯ. ದೇಶಪಾಂಡೆ (ಅಣ್ಣೂ ಗುರೂಜಿ) : *ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ*, ಸಂಪುಟ–೧, ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾವಿ, ೧೯೭೩, ಪು. ೨೬.

೩. "ಅದೇ", ಪು. ೨೯–೩೦.

೪. ಎಲ್.ಎಸ್. ಶಾಸ್ತ್ರಿ : *ಸ್ವಾತಂತ್ರ್ಯ ಸಂಗ್ರಾಮ* (ರಾಷ್ಟ್ರ, ರಾಜ್ಯ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ) ಪ್ರಕಾಶಕರು, ಬೆಳಗಾವಿ ಜಿಲ್ಲಾ ಸ್ವಾತಂತ್ರ್ಯ ಯೋಧರ ಶೈಕ್ಷಣಿಕ ಸಂಘ, ಬೆಳಗಾವಿ, ೨೦೦೬, ಪು. ೮೩.

೫. ಸರೋಜಿನಿ ಚವಲಾರ : *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು*, 'ಬೆಳಗಾವಿ ತಾಲೂಕಿನ ಸ್ವರಾಜ್ಯ ಸ್ಥಾಪನೆಯ ಹಿನ್ನೆಲೆ', ಪು. XV-XVII ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ, ಮೂರುಸಾವಿರ ಮಠ, ಹುಬ್ಬಳ್ಳಿ, ೧೯೮೮.

೬. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೧, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೯೮೫.

೭. "ಅದೇ", ಪು. ೯೮೫.

೮. ಪ್ರಜಾವಾಣಿ ದಿನಪತ್ರಿಕೆ, 'ಬೆಳಗಾವಿ ಜಿಲ್ಲೆ ಉಗ್ರ ಹೋರಾಟದ ಕಡೆಗೆ ಹೆಚ್ಚಿನ ಒಲವು', ೧೯೯೭, ಡಿಸೆಂಬರ್–೨೦.

೯. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೧, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೯೮೬.

೧೦. ಎಲ್.ಎಸ್. ಶಾಸ್ತ್ರಿ : *ಸ್ವಾತಂತ್ರ್ಯ ಸಂಗ್ರಾಮ* (ರಾಷ್ಟ್ರ, ರಾಜ್ಯ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ) ಪ್ರಕಾಶಕರು, ಬೆಳಗಾವಿ ಜಿಲ್ಲಾ ಸ್ವಾತಂತ್ರ್ಯ ಯೋಧರ ಶೈಕ್ಷಣಿಕ ಸಂಘ, ಬೆಳಗಾವಿ, ೨೦೦೬, ಪು. ೮೯.

೧೧. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೧, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೯೮೭.

೧೨. ಬಾ.ಯ. ದೇಶಪಾಂಡೆ (ಅಣ್ಣು ಗುರೂಜಿ) : *ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ*, ಸಂಪುಟ-೧, ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾವಿ, ೧೯೭೩, ಪು. ೫೦.

೧೩. "ಅದೇ", ಪು. ೫೧.

೧೪. ಎಸ್. ಚಂದ್ರಶೇಖರ್ : 'ಗಾಂಧೀಜಿ ಆಗಮನ', ಬಿ. ಷೇಕ್ ಅಲಿ (ಸಂ.), *ಕರ್ನಾಟಕ ಚರಿತ್ರೆ* ಸಂಪುಟ-೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೯೭.

೧೫. ಬಾ.ಯ. ದೇಶಪಾಂಡೆ (ಅಣ್ಣು ಗುರೂಜಿ) : *ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ*, ಸಂಪುಟ-೧, ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾವಿ, ೧೯೭೩, ಪು. ೫೪.

೧೬. "ಅದೇ", ಪು. ೫೪.

೧೭. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೧, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೯೮೯.

೧೮. "ಅದೇ", ಪು. ೯೮೯.

೧೯. "ಅದೇ", ಪು. ೯೯೦.

೨೦. "ಅದೇ", ಪು. ೯೯೦.

೨೧. "ಅದೇ", ಪು. ೯೯೦.

೨೨. ಬಾ.ಯ. ದೇಶಪಾಂಡೆ (ಅಣ್ಣು ಗುರೂಜಿ) : *ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ*, ಸಂಪುಟ-೧, ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾವಿ, ೧೯೭೩, ಪು. ೮೯.

೨೩. "ಅದೇ", ಪು. ೮೯.

೨೪. "ಅದೇ", ಪು. ೯೬.

೨೫. "ಅದೇ", ಪು. ೧೦೧-೧೦೨.

೨೬. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೧, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೯೯೧.

೨೭. "ಅದೇ", ಪು. ೯೯೪.

೨೮. ಬಾ.ಯ. ದೇಶಪಾಂಡೆ (ಅಣ್ಣು ಗುರೂಜಿ) : *ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ*, ಸಂಪುಟ–೧, ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾವಿ, ೧೯೭೩, ಪು. ೧೨೯.

೨೯. "ಅದೇ", ಪು. ೧೩೬.

೩೦. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೨, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೪೭೬–೪೭೮.

೩೧. ಸರೋಜಿನಿ ಚವಲಾರ : *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು*, ಪ್ರಕಾಶಕರು, ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ, ಮೂರುಸಾವಿರ ಮಠ, ಹುಬ್ಬಳ್ಳಿ, ೧೯೮೮, ಪು. ೩೩೯.

೩೨. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೨, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೪೭೭.

ಅಧ್ಯಾಯ – ನಾಲ್ಕು

ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರು

ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರು

ಭಾರತದಾದ್ಯಂತ ಬ್ರಿಟೀಷರ ವಿರುದ್ಧ ನಡೆದ ಚಳುವಳಿಯಲ್ಲಿ ದೇಶದ ಮೂಲೆ-ಮೂಲೆಗಳಿಂದ ಹೋರಾಟಗಾರರು ಭಾಗವಹಿಸಿದ್ದರು. ಇವರೆಲ್ಲರೂ ಗಾಂಧೀಜಿಯವರಿಂದ ಸ್ಫೂರ್ತಿಗೊಂಡು, ತಮ್ಮನ್ನು ತಾವು ಚಳುವಳಿಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡರು. ಇಂತಹ ಹೋರಾಟದಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಐನಾಪೂರದಿಂದಲೂ ಹೋರಾಟಗಾರರು ಭಾಗವಹಿಸಿದ್ದರು. ಇವರು ಖಾದಿಧಾರಿಗಳಾಗಿ, ಗಾಂಧೀಜಿಯವರ ಆದರ್ಶಗಳನ್ನೇ ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡು ಬಂದರು. ಅಸಹಕಾರ ಚಳುವಳಿ, ಕಾನೂನುಭಂಗ ಚಳುವಳಿಗಳಲ್ಲಿ ಭಾಗಿಯಾಗಿ ಜೈಲುವಾಸವನ್ನು ಅನುಭವಿಸಿದರು. ಈಚಲು ಮರ ಕಡಿಯುವುದು, ಸ್ವದೇಶಿ ವಸ್ತುಗಳ ಪ್ರಚಾರ, ವಿದೇಶಿ ವಸ್ತುಗಳ ಬಹಿಷ್ಕಾರ, ಪಾನ ನಿಷೇಧಗಳು ಇವರ ಪ್ರಮುಖ ಕಾರ್ಯಚಟುವಟಿಕೆಗಳಾಗಿದ್ದವು.

ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರು

೪.೧ ಗೋವಿಂದರಾವ್ ಮಹಿಪತರಾವ್ ದೇಶಪಾಂಡೆ.

೪.೨ ಮಧ್ವರಾವ್ ರಾಮಚಂದ್ರ ಮುತಾಲೀಕ

೪.೩ ವ್ಯಾಸರಾವ್ ತಮ್ಮಣ್ಣಾ ಮುತಾಲೀಕ

೪.೪ ನಾರಾಯಣರಾವ್ ಮಹಿಪತಿರಾವ್ ದೇಶಪಾಂಡೆ

೪.೫ ರಂಗೋ ನಾರಾಯಣ ಮುತಾಲೀಕ

೪.೬ ಶ್ರೀನಿವಾಸಾಚಾರ್ಯ ಗೋಪಾಲಾಚಾರ್ಯ ಕಟ್ಟಿ

೪.೭ ರಾಮಚಂದ್ರ ಅನಂತರಾವ್ ಪತಕಿ

೪.೮ ಲಕ್ಷ್ಮಣ ರಾಮಪ್ಪಾ ಪಾರಶೆಟ್ಟಿ

೪.೯ ಶಿವಪ್ಪಾ ಗೂಳಪ್ಪಾ ಚೌಗಲೆ (ಮಸರಗುಪ್ಪಿ)

೪.೧೦ ಕೃಷ್ಣಾಚಾರ್ಯ ಜೋಶಿ

೪.೧೧ ವಿ.ಎಸ್. ಜೋಶಿ

೪.೧೨ ಕೃಷ್ಣ ಭೀ. ಜೋಶಿ

೪.೧೩ ಗೋಪಾಲ ಕಕಮರಿ

೪.೧೪ ದತ್ತಾತ್ರೇಯ ಕುಲಕರ್ಣಿ

೪.೧ ಗೋವಿಂದರಾವ್ ಮಹಿಪತರಾವ್ ದೇಶಪಾಂಡೆ.

ಗೋವಿಂದರಾವ ಮಹಿಪತ ದೇಶಪಾಂಡೆ ಗುರುಗಳು ಸತ್ಯವಂತರು, ಸರಳ ಸ್ವಭಾವದವರು, ಶಿಕ್ಷಣ ಪ್ರೇಮಿಗಳು ಜೊತೆಗೆ ಆದರ್ಶ ಶಿಕ್ಷಕರೂ ಆಗಿದ್ದರು. ಹಾಗೆಯೇ ಅಪ್ಪಟ ಗಾಂಧೀವಾದಿಗಳು, ಸ್ವಾತಂತ್ರ್ಯ ಹೋರಾಟಗಾರರು. ಇವರು ಬಹುಮುಖ ವ್ಯಕ್ತಿತ್ವ ಹೊಂದಿದ್ದವರು. ಇವತ್ತಿನವರೆಗೂ ಐನಾಪೂರದ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದುಕೊಂಡಿರುವ ವ್ಯಕ್ತಿ ಜಿ.ಎಂ. ದೇಶಪಾಂಡೆ ಗುರುಗಳು.

ಜನನ : ಗೋವಿಂದರಾವ್ ಮ. ದೇಶಪಾಂಡೆಯವರು ೧೯೯೪ ಸಪ್ಟೆಂಬರ್ ೪ ರಂದು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಮಂಗಸೂಳಿಯಲ್ಲಿ ಜನಿಸಿದರು. ಇವರ ತಂದೆ ಮಹಿಪತ ದೇಶಪಾಂಡೆ ಮತ್ತು ತಾಯಿ ಶ್ರೀಮತಿ ಗಂಗಾಬಾಯಿ ಮ. ದೇಶಪಾಂಡೆಯವರು. ಇವರು ಮಂಗಸೂಳಿಯಲ್ಲಿ ಜನಿಸಿದರೂ, ಅವರು ಬೆಳೆದದ್ದು ಐನಾಪುರದಲ್ಲಿ. ಹೀಗಾಗಿ ಇವರು ಐನಾಪುರದವರೇ ಆದರು.

ಕೌಟುಂಬಿಕ ಹಿನ್ನಲೆ : ಗೋವಿಂದರಾವ್ ದೇಶಪಾಂಡೆಯವರು ಮಂಗಸೂಳಿಯಲ್ಲಿ ವತನದಾರ ಮನೆತನ. ತಂದೆ ಮಹಿಪತ ದೇಶಪಾಂಡೆಯವರು ಸರಳ ಸ್ವಭಾವದವರು. ಇವರ ತಂದೆ ತಾಯಿಗಳಿಗೆ ಗೋವಿಂದ, ನಾರಾಯಣ, ಮತ್ತು ಪಂಡಿತ ಮೂವರು ಗಂಡು ಮತ್ತು ಮಥುರಾ, ಸಾವಿತ್ರಿ, ಬಕುಳಾ ಮತ್ತು ಕುಸುಮಾವತಿ ಎಂಬ ನಾಲ್ಕು ಜನ ಹೆಣ್ಣು ಮಕ್ಕಳಿದ್ದರು. ಒಟ್ಟು ಏಳು ಮಕ್ಕಳಲ್ಲಿ ಗೋವಿಂದರಾವ್‌ರವರೇ ಹಿರಿಯರು. ಇವರ ತಾಯಿಯ ತವರೂರು ಬಿಜಾಪೂರ ಜಿಲ್ಲೆಯ ಬಬಲೇಶ್ವರ ಗ್ರಾಮ.

ಗೋವಿಂದರಾವ್‌ರವರಿಗೆ ಯಮುನಾಬಾಯಿಯವರೊಂದಿಗೆ ವಿವಾಹವಾಯಿತು. ಈ ದಂಪತಿಗಳಿಗೆ ಭಾರತಮಾತಾ, ಹಿಂದಮಾತಾ ಮತ್ತು ಭೂಮಾತಾ ಎಂಬ ಮೂವರು ಹೆಣ್ಣುಮಕ್ಕಳು ಮತ್ತು ಮಹಿಪತ ಎಂಬ ಮಗ ಇದ್ದರು.

ಶಿಕ್ಷಣ : ತಾಯಿಯ ತವರೂರಾದ ಬಿಜಾಪುರ ಜಿಲ್ಲೆಯ ಬಬಲೇಶ್ವರದಲ್ಲಿ ೭ನೇ ಇಯತ್ತೆಯವರೆಗೆ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಂಡರು. ನಂತರ ೧೯೦೯ ರಲ್ಲಿ ಬಬಲೇಶ್ವರ ಗ್ರಾಮದಿಂದ ಬಿಜಾಪೂರಕ್ಕೆ ಬಂದು ಶ್ರೀಕೃಷ್ಣ ಪಾಠಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದರು. ಮ್ಯಾಟ್ರಿಕ್ ಪಾಸಾದ ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ಮಹಾರಾಷ್ಟ್ರದ ಪೂನಾದ ಡೆಕ್ಕನ್ ಕಾಲೇಜಿನಲ್ಲಿ ಪ್ರವೇಶ ಪಡೆದುಕೊಂಡರು. ಅಲ್ಲಿ ೧೯೨೦ ರಲ್ಲಿ ಬಿ.ಎ. ಪದವಿಯನ್ನು ಪಡೆದರು. ಕಂದಗಲ್ ಹಣಮಂತರಾಯರು, ಕಾಕಾ ಖಾರನೀಸರು, ರಂ.ಶ್ರೀ. ಮುಗಳಿಯವರು ಇವರ ಸಹಪಾಠಿಗಳಾಗಿದ್ದರು. ಮುಂದೆ ಎಲ್.ಎಲ್.ಬಿ. ಅಧ್ಯಯನ ಪ್ರಾರಂಭಿಸಿದರು. ಕಾನೂನು ಪದವಿಯ ಎರಡನೇಯ ವರ್ಷದಲ್ಲಿದ್ದಾಗ ದೇಶದೆಲ್ಲೆಡೆ ಸ್ವಾತಂತ್ರ್ಯ ಚಳುವಳಿಯು ಚುರುಕುಗೊಂಡಿತ್ತು. ಆದ್ದರಿಂದ ಅಧ್ಯಯನವನ್ನು ಮೊಟಕುಗೊಳಿಸಿ ಚಳುವಳಿಯಲ್ಲಿ ಧುಮುಕಿದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಪ್ರೇರಣೆ :

ದೇಶಪಾಂಡೆ ಗುರುಗಳು ಕಾನೂನು ಪದವಿಯಲ್ಲಿ ಓದುತ್ತಿರುವಾಗ ಎಲ್ಲೆಡೆ ಚಳುವಳಿಯು ಜೋರಾಗಿತ್ತು. ಆವಾಗ ಗಾಂಧೀಜಿಯವರಿಂದ ಪ್ರಭಾವಿತರಾಗಿ ಅವರ ಕರೆಗೆ ಓಗೊಟ್ಟು ಹಳ್ಳಿಯ ಉದ್ಧಾರಕ್ಕಾಗಿ ಲೋಕಮಾನ್ಯ ಬಾಲಗಂಗಾಧರ ತಿಲಕರ ಚಿತಾಭಸ್ಮವನ್ನು ಹಣೆಗೆ ಹಚ್ಚಿಕೊಂಡು ಗಾಂಧೀಜಿಯವರಿಗೆ ನಮಸ್ಕರಿಸಿ ಹಳ್ಳಿಗಳ ಉದ್ಧಾರಕ್ಕಾಗಿ ತಮ್ಮನ್ನು ತೊಡಗಿಸಿಕೊಂಡರು.

ಸ್ವಾತಂತ್ರ್ಯ ಸಂಗ್ರಾಮಕ್ಕೆ ಕೊಡುಗೆ :

ಗೋವಿಂದರಾವ್ ದೇಶಪಾಂಡೆಯವರು ಆಗಿನ ಕಾಲದಲ್ಲಿಯೇ ಬಿ.ಎ. ಪದವಿಯನ್ನು ಪಡೆದಿದ್ದರು. ಆಗ ಶಾಲೆ ಕಲಿತವರ ಸಂಖ್ಯೆ ಕಡಿಮೆ ಇರುತ್ತಿತ್ತು. ಹೀಗಾಗಿ ಆಗ ಪದವೀಧರರಿಗೆ ಯಾವುದೇ ಉನ್ನತ ಹುದ್ದೆ ಬೇಕಾದರೂ ದೊರೆಯುತ್ತಿತ್ತು. ಆದರೆ ಮಾಸ್ತರರು ಅದಕ್ಕೆ ಅಪೇಕ್ಷೆ ಮಾಡದೆ ಗ್ರಾಮೀಣ ಜನರಲ್ಲಿ ಬೆರೆತು ಸಮಾಜಸೇವೆ ಮತ್ತು ರಾಷ್ಟ್ರ ಸೇವೆಗಾಗಿ ತಮ್ಮನ್ನು ತೊಡಗಿಸಿಕೊಳ್ಳುವ ಸತ್‌ಸಂಕಲ್ಪ ಮಾಡಿದರು.

ಇವರೊಬ್ಬ ನಿಷ್ಠಾವಂತ ಕಾಂಗ್ರೆಸ್ಸಿನ ಕಾರ್ಯಕರ್ತರಾಗಿದ್ದರು. ಈ ಭಾಗದ ಕಾಂಗ್ರೆಸ್ ಕಮೀಟಿಯ ಕಾರ್ಯಗಳು ಇವರ ಮೇಲೆಯೇ ಇದ್ದವು. ಕಾಂಗ್ರೆಸ್ ಸದಸ್ಯರನ್ನು ಆಯ್ಕೆ ಮಾಡುವುದು, ಖಾದಿ ಬಟ್ಟೆ ಬಳಸಲು ಕರೆ ನೀಡುವುದು, ಅಸ್ಪೃಶ್ಯತೆಯ ನಿವಾರಣೆಯ ಬಗೆಗಿನ ಕಾರ್ಯಗಳನ್ನು ಸ್ವತಃ ಮಾಡುತ್ತಿದ್ದರು. ಆಗ ಕಾಂಗ್ರೆಸ್ ಕಾರ್ಯಕರ್ತರಿಗೆ ಇವರ ಮನೆ ಅನ್ನಛತ್ರವಾಗಿತ್ತು[೧] ಎಂದು ಸ್ವತಃ ಅಣ್ಣೂಗುರೂಜಿಯವರೇ ಹೇಳಿದ್ದು ಅವರ ದೇಶಪ್ರೇಮದ ಬಗ್ಗೆ ಅವರಿಗಿದ್ದ ನಿಲುವನ್ನು ತಿಳಿಸುತ್ತದೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದಾಗ ಎಂದು ತಮ್ಮ ಮನೆಯ ಬಗ್ಗೆ ಕಾಳಜೀ ಮಾಡಲಿಲ್ಲ. ಮಾಡಿದ್ದು ಕೇವಲ ದೇಶದ ಚಿಂತೆ. ಒಮ್ಮೆ ಬ್ರಿಟೀಷರು ಇವರ ಮೇಲೆ ವಾರಂಟ್ ಹೊರಡಿಸಿದ್ದರು. ಅವರನ್ನುಹಿಡಿದು ಜೈಲಿಗೆ ಹಾಕುವವರಿದ್ದರು. ಆದರೆ ಆ ದಿನವೇ ಇವರ ಮಗಳಿಗೆ ಮನೆಯಲ್ಲಿ ನಾಮಕರಣ ಸಮಾರಂಭವನ್ನು ಏರ್ಪಡಿಸಿದ್ದರು. ಈ ಕಾರ್ಯಕ್ರಮಕ್ಕೆ ಅವರು ಬಂದೇ ಬರುತ್ತಾರೆಂದು ಪೊಲೀಸರು ಕಾಯುತ್ತಿದ್ದರು. ಸಾಯಂಕಾಲದ ಹೊತ್ತಿಗೆ ಮಾಸ್ತರರು ತಮ್ಮ ಮನೆಯ ಕಡೆಗೆ ಬಂದರು. ಆಗ ಅಲ್ಲೇ ಇದ್ದ ಪೊಲೀಸರು ಇವರನ್ನು ಹಿಡಿಯಲು ಮುಂದಾದರು. ಮಾಸ್ತರರು ಆಗ ಬಾಗಿಲಿನಿಂದಲೇ 'ಜೈ ಭಾರತ ಮಾತಾ' ಎಂದು ಹೇಳಿ ಅಲ್ಲಿಂದ ಪಾರಾದರು. ಇದರಿಂದ ಅವರ ಹೆಂಡತಿ ಮೊದಲನೇಯ ಮಗಳಿಗೆ 'ಭಾರತಮಾತಾ' ಎಂದು ಹೆಸರಿಟ್ಟರು. ಅದೇ ರೀತಿ ಮುಂದೆ ಜನಿಸಿದ ಮೂವರು ಮಕ್ಕಳಿಗೂ ಕ್ರಮವಾಗಿ ಹಿಂದಮಾತಾ, ಭೂಮಾತಾ ಮತ್ತು ಮಹಿಪತ ಎಂದು ಹೆಸರಿಟ್ಟರು. ಇದು ಅವರ ಅಪ್ಪಟ ದೇಶಪ್ರೇಮದ ಪ್ರತೀಕವಾಗಿದೆ.

ಇವರ ಸಹೋದರ ನಾರಾಯಣರವರು ಸಹ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಅವರು ವಿದೇಶಿ ಬಟ್ಟೆಯನ್ನು 'ಸೂತಕದ ಅರಿವೆ' ಎಂದು ಕರೆಯುತ್ತಿದ್ದರು. "ಸೂತಕದ (ಪರದೇಶಿ) ಅರಿವೆಯನ್ನು ಹೋಳಿ ಮಾಡ್ರಲ್ಲಾ" ಎಂದು ಅವರು ಹೇಳಿದಾಗ ಮಾಸ್ತರರು ವಿದೇಸೀ ಬಟ್ಟೆಗಳನ್ನು ಬೆಂಕಿಗೆ ಹಾಕಿ ಹೋಳಿ ಮಾಡುತ್ತಿದ್ದರು.[೨] ಗಾಂಧೀಜಿಯವರ ತತ್ವ ಆದರ್ಶಗಳು ದೇಶಪಾಂಡೆಯವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ್ದವು. ಅವುಗಳನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡು ಬಂದರು.

೧೯೨೦ ರಲ್ಲಿ ಕಾಯ್ದೆ ಅಭ್ಯಾಸ ಮಾಡುತ್ತಿರುವಾಗ ಮುಂಬಯಿ ಚೌಪಾಟಿಯಲ್ಲಿ ಲೋಕಮಾನ್ಯ ಟಿಳಕರ ಪಾರ್ಥಿವ ದೇಹದ ಅಗ್ನಿಸಂಸ್ಕಾರ ನಡೆದಾಗ

ಆ ವಿಶಾಲವಾದ ಮರಳು ರಾಶಿಯಲ್ಲಿ ಜನಸಾಗರದ ಮಧ್ಯ ದೇಶಪಾಂಡೆಯವರು ಒಂದು ಪ್ರತಿಜ್ಞೆಗೈದರು. "ಸುಶಿಕ್ಷಿತ ತರುಣರಿಗೆ ಗಾಂಧೀಜಿ ಆದೇಶ ನೀಡಿದಂತೆ ನಾನು ಹಳ್ಳಿಗೆ ಹೋಗಿ ಸಮಾಜಸೇವೆ, ದೇಶಸೇವೆಗೈಯುವೆ" ಎಂದು ಅದೇ ಪ್ರಕಾರ ಅವರು ಐನಾಪೂರಕ್ಕೆ ಬಂದು ಹೈಸ್ಕೂಲನ್ನು ಸ್ಥಾಪನೆ ಮಾಡಿದರು.[೩]

ಅಸಹಕಾರ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದರು. ಮತ್ತು ತಮ್ಮೊಂದಿಗೆ ನೂರಾರು ಹೋರಾಟಗಾರರನ್ನು ತಯಾರಿ ಮಾಡಿದರು. ಆಗ ಐನಾಪೂರಕ್ಕೆ ಅಣ್ಣೂ ಗುರೂಜಿಯವರು ಮೇಲಿಂದ ಮೇಲೆ ಬರುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಬಗೆಗಿನ ಲೇಖನಗಳನ್ನು ತಯಾರಿಸುವ ಪ್ರತಿ ಹಂತದಲ್ಲೂ ಮಾಸ್ತರರೊಂದಿಗೆ ಚರ್ಚಿಸುತ್ತಿದ್ದರು. ದೇಶಪಾಂಡೆ ಗುರುಗಳು ಸುತ್ತಲಿನ ಮಂಗಸೂಳಿ, ಸತ್ತಿ, ಸಪ್ತಸಾಗರ, ಅಡಹಳ್ಳಿ ಮುಂತಾದೆಡೆಗಳಿಗೆ ಹೋಗಿ ಭಾಷಣಗಳನ್ನು ಮಾಡಿ ಜನರಲ್ಲಿ ದೇಶಾಭಿಮಾನ ಮೂಡಿಸುತ್ತಿದ್ದರು.

ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಗುರುಮಾಸ್ತರ ಚೇರೆಯವರು, ಅಣ್ಣುಗುರೂಜಿಯವರು, ಎ.ಎಸ್. ಕುಲಕರ್ಣಿಯವರಂತಹ ಮುಖಂಡರು ಐನಾಪೂರಕ್ಕೆ ಭೇಟಿ ನೀಡಿ ಜನಜಾಗೃತಿ ಕಾರ್ಯಗಳನ್ನು ಮಾಡುತ್ತಿದ್ದರು. ಇವರೆಲ್ಲರೊಂದಿಗೆ ದೇಶಪಾಂಡೆ ಗುರುಗಳ ಆತ್ಮೀಯ ಒಡನಾಟವಿತ್ತು. ಇವರೊಬ್ಬ ರಾಷ್ಟ್ರಮಟ್ಟದ ನಾಯಕರಾಗಿದ್ದರು. ಎಲ್ಲ ಮುಖಂಡರುಗಳು ಐನಾಪೂರಕ್ಕೆ ಬಂದಾಗ ಮೊದಲು ಭೇಟಿಯಾಗುತ್ತಿದ್ದುದು ದೇಶಪಾಂಡೆ ಗುರುಗಳನ್ನು.

ಸುತ್ತಲಿನ ಊರುಗಳಾದ ಮಾಂಜರಿ, ಜುಗೂಳ, ಕಾಗವಾಡ, ಮಂಗಾವತಿ, ಉಗಾರಗಳಿಗೆ ಮಾಸ್ತರರು ಹೋಗಿ ಭಾಷಣಗಳನ್ನು ಮಾಡಿ ಜನಜಾಗೃತಿ ಕಾರ್ಯಗಳನ್ನು ಮಾಡಿದ್ದರು.

೧೯೪೨ ರ ಆಂದೋಲನದಲ್ಲಿ ಶ್ರೀ ದೇಶಪಾಂಡೆ ಮಾಸ್ತರರನ್ನು ಪೊಲೀಸರು ಬಂಧಿಸಿ ಹತ್ತು ತಿಂಗಳವರೆಗೆ ಸ್ಥಾನಬದ್ಧತೆಯಲ್ಲಿ ಹಿಂಡಲಗಾ ಜೈಲಿನಲ್ಲಿಟ್ಟಿದ್ದರು. ಜೈಲಿನಲ್ಲಿ ಯಾವಾಗಲೂ ಹರಟೆ, ವಿನೋದಗಳಿಂದ ಶುಷ್ಕ ಜೀವನದಲ್ಲಿ ರಸ ತುಂಬುತ್ತಿದ್ದರು.[೪]

ಎಸ್. ನಿಜಲಿಂಗಪ್ಪ, ಬಿ.ಡಿ. ಜತ್ತಿ, ವೀರೇಂದ್ರ ಪಾಟೀಲ, ಆರ್.ಪಿ. ಕಿತ್ತೂರ ಮತ್ತು ಶ್ರೀಮತಿ ಸರೋಜಿನಿ ಮಹಿಷಿಯವರು ಅಥಣಿಗೆ ಬಂದಾಗ ಐನಾಪೂರಕ್ಕೆ ಬಂದು ಮಾಸ್ತರರಿಗೆ ಭೇಟಿ ಆಗಿಯೇ ಹೋಗುತ್ತಿದ್ದರು.

ಗಾಂಧೀಜಿಯವರ ಹತ್ಯೆಯ ನಂತರ ಚಾಳಪೋಳದಲ್ಲಿ ಬ್ರಾಹ್ಮಣರ ಮನೆಗಳನ್ನು ಸುಡಲು ದಂಗೆಕೋರರು ಐನಾಪೂರಕ್ಕೆ ಆಗಮಿಸಿದ್ದರು. ಆಗ ಮಾಸ್ತರರು ಇದನ್ನು ತಿಳಿದು ಮೊದಲು ಐನಾಪೂರದ ಮೋಳೆದ ಅಗಸಿಗೆ ಹೋಗಿ "ನಾನೂ ಬ್ರಾಹ್ಮಣ, ಮೊದಲು ನನ್ನನ್ನು ಸುಟ್ಟು ನಂತರ ಊರಲ್ಲಿ ಹೋಗಿರಿ" ಎಂದು ದಂಗೆಕೋರರಿಗೆ ಎದೆಯೊಡ್ಡಿ ನಿಂತರು. ಆಗ ಆ ದಂಗೆಕೋರರು ಇವರ ಮುಂದೆ ನಿಲ್ಲಲಾಗದೆ, ಅಲ್ಲಿಂದ ಕಾಲ್ತೆಗೆದರು. ಮಾಸ್ತರರು ಯಾರಿಗೂ, ಯಾವುದಕ್ಕೂ ಜೀವನದಲ್ಲಿ ಹೆದರಲಿಲ್ಲ.

ಸಾಮಾಜಿಕ ಕಾರ್ಯಗಳು :

ಗ್ರಾಮದಲ್ಲಿ ರಸ್ತೆಗಳನ್ನು, ವಿದ್ಯುತ್ತನ್ನು, ನೀರು, ಹೈನುಗಾರಿಕೆ, ಒಳಚರಂಡಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್, ಅಂಚೆ ಕಛೇರಿ, ಮಾರುಕಟ್ಟೆ, ಕಿರಾಣಿ ಅಂಗಡಿ, ದವಾಖಾನೆ, ಸಾರಿಗೆ ವ್ಯವಸ್ಥೆ ಹೀಗೆ ಹಲವಾರು ಯೋಜನೆಗಳನ್ನು ಹಾಕಿಕೊಂಡು ಅವುಗಳಲ್ಲಿ ಒಂದೊಂದಾಗಿ ಪ್ರಯತ್ನಿಸಿ ಗ್ರಾಮಕ್ಕೆ ಯೋಜನೆಗಳನ್ನು ಜನರಿಗೆ ತಲುಪುವಂತೆ ಮಾಡಿದರು.[೫]

ಅಥಣಿ ತಾಲೂಕಿನ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರಾಗಿದ್ದರು. ಜೊತೆಗೆ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಕಮೀಟಿಯ ಸದಸ್ಯರಾಗಿ, ಅಧ್ಯಕ್ಷರಾಗಿ ಉತ್ತಮ ಕೆಲಸಗಳನ್ನು ಮಾಡಿದ್ದಾರೆ.

ದೇಶಪಾಂಡೆ ಮಾಸ್ತರರು ಶಿಕ್ಷಣ ಪ್ರೇಮಿಗಳಾಗಿದ್ದರು. ಎಲ್ಲರನ್ನು ವಿದ್ಯಾವಂತರನ್ನಾಗಿ, ಸುಶಿಕ್ಷಿತರನ್ನಾಗಿ ಮಾಡುವ ಮಹದಾಸೆ ಅವರಿಗಿತ್ತು. ಕೆ.ಆರ್.ಈ.ಎಸ್. ಎಂಬ ಶಿಕ್ಷಣ ಸಂಸ್ಥೆಯನ್ನು ಐನಾಪೂರದಲ್ಲಿ ಸ್ಥಾಪಿಸಿದರು. ಚಲೇಜಾವ್ ಚಳುವಳಿಯಲ್ಲಿ ಬಂಧಿತರಾಗಿ ಹಿಂಡಲಗಾ ಜೈಲಿಗೆ ಹೋಗುವವರಿದ್ದಾಗ ಅವರ ಸಹಾಯಕ ಶಿಕ್ಷಕರಾಗಿದ್ದ ದಿವಂಗತ ಬಿಂದು ಮಾಸ್ತರರಿಗೆ (ಬಿಂದು ಕುಲಕರ್ಣಿ) ಜೈಲಿನಿಂದ ಬರುವವರೆಗೆ ಶಾಲೆಯನ್ನು ನಡೆಸಿಕೊಂಡು ಹೋಗಲು ತಿಳಿಸಿದ್ದರು. ಎಂತಹ ಪರಿಸ್ಥಿ ಎದುರಾದರೂ ಶಾಲೆಯನ್ನು ಮುಚ್ಚಬೇಡ ಎಂದು ಹೇಳಿದರು. ಇದು ಅವರ ಶಿಕ್ಷಣದ ಬಗ್ಗೆ ಕಾಳಜಿಯನ್ನು ತಿಳಿಸುತ್ತದೆ.

೧೯೩೭ ರಲ್ಲಿ ಐನಾಪೂರದ ಏಳ್ಗೆಗಾಗಿ ಊರಲ್ಲಿ ಗ್ರಾಮ ಪಂಚಾಯತಿಯನ್ನು ಸ್ಥಾಪಿಸಿದರು.[೬] ಕೆರೆಯ ನೀರು ಸರಿ ಇವೆಯೋ ಇಲ್ಲವೋ ಎಂಬುದನ್ನು ಖಾತ್ರಿ ಮಾಡಿಕೊಳ್ಳಲು ನಾನಾ ಡಾಕ್ಟರರು ಮತ್ತು ದೇಶಪಾಂಡೆ

ಗುರುಗಳು ಕೂಡಿ ವರ್ಷಕ್ಕೊಮ್ಮೆ ಕೆರೆಯ ನೀರನ್ನು ಒಂದು ಬಾಟಲಿಯಲ್ಲಿ ಹಾಕಿ ಪೂನಾ ಪ್ರಯೋಗಾಲಯಕ್ಕೆ ಕಳಿಸಿ ಪರೀಕ್ಷೆ ಮಾಡಿಸುತ್ತಿದ್ದರು.[೭]

ಐನಾಪೂರ ಗ್ರಾಮದಲ್ಲಿ ಆಸ್ಪತ್ರೆ ಸೌಲಭ್ಯವಿರಲಿಲ್ಲ. ಡಾ॥ ಸಾಬಡೆಯವರನ್ನು ಜಮಖಂಡಿಯಿಂದ ಕರೆಸಿ ಜನರಿಗೆ ವೈದ್ಯಕೀಯ ಸೇವೆಯನ್ನು ಒದಗಿಸಿದರು. ಅಂಚೆ ವ್ಯವಸ್ಥೆ ಮತ್ತು ತಾರ ವ್ಯವಸ್ಥೆಯನ್ನು ಮಾಡಿಸಿದರು. ಗಾಂಧೀಚೌಕವನ್ನು ಉದ್ಘಾಟಿಸಿದರು.[೮]

ದೇಶಪಾಂಡೆ ಗುರುಗಳು ತ್ಯಾಗಿಗಳು. ತಮ್ಮ ಜೀವನಕ್ಕಿಂತ ವಯಕ್ತಿಕ ಸುಖಕ್ಕಿಂತ ಇನ್ನೊಬ್ಬರ ದುಃಖಕ್ಕೆ ಹೆಚ್ಚು ಸ್ಪಂದಿಸುವವರಾಗಿದ್ದರು. ತಮ್ಮ ಸಂಬಳವನ್ನು ಎಂದೂ ಪೂರ್ಣ ತೆಗೆದುಕೊಂಡಿಲ್ಲ. ಉದಾಹರಣೆಗೆ ಶಾಲೆಯ ನಗದು ಪುಸ್ತಕದಲ್ಲಿ ೪೦೦ ರೂ. ಮುಂದೆ ಸಹಿ ಮಾಡುತ್ತಿದ್ದರು. ಆದರೆ ಕೇವಲ ೫೦ ರೂ. ತೆಗೆದುಕೊಳ್ಳುತ್ತಿದ್ದರು. ಪರಊರಿನ ಶಿಕ್ಷಕರಿಗೆ ಪೂರ್ಣ ಸಂಬಳ ಕೊಟ್ಟು ಉಳಿದ ಹಣದಲ್ಲಿ ಶಾಲೆ ನಡೆಸುತ್ತಿದ್ದರು.[೯] ಜನರಿಗೆ ಆವಾಗ ಸಂಚರಿಸಲು ಬಸ್ಸಿನ ವ್ಯವಸ್ಥೆ ಇರಲಿಲ್ಲ. ಜನರು ತೊಂದರೆ ಅನುಭವಿಸುವ ಪರಿಸ್ಥಿತಿ ಇತ್ತು. ಇದನ್ನು ಮಾಸ್ತರರು ತಿಳಿದುಕೊಂಡಿದ್ದರು. ಅಥಣಿ ನವಲಿಹಾಳ ಮಾರ್ಗವಾಗಿ ಐನಾಪೂರಕ್ಕೆ ಬಸ್ಸಿನ ವ್ಯವಸ್ಥೆಯು ಇವರ ಪ್ರಯತ್ನದಿಂದಲೇ ಆಗಿವೆ. ಜಿಲ್ಲಾ ಲೋಕಲ್ ಬೋರ್ಡಿನ ಸದಸ್ಯರಾಗಿದ್ದರು. ಗ್ರಾಮ ಸುಧಾರಣಾ ಸಮಿತಿ, ಜಿಲ್ಲಾ ಅಭಿವೃದ್ಧಿ ಮಂಡಳ, ಕುಟುಂಬ ಕಲ್ಯಾಣ ಯೋಜನೆ, ಬರಗಾಲ ಪರಿಹಾರ ಸಮಿತಿ, ಮುಂತಾದ ಕಮೀಟಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.[೧೦]

ಅಧಿಕಾರ ಕೈಯಲ್ಲಿ ಬಂದಾಗ ಕುರುಡರಾಗುವ ಎಷ್ಟೋ ಜನರಿರುವಾಗ ದೇಶಪಾಂಡೆ ಗುರುಗಳು ಎಂದೂ ಅಧಿಕಾರದ ದುರುಪಯೋಗ ಮಾಡಲಿಲ್ಲ. ಊರಿನ ಪ್ರಗತಿಗಾಗಿ ದುಡಿದರು ಎಂಬುದು ಅವರ ಸಾಮಾಜಿಕ ಕಾರ್ಯಗಳಿಂದ ತಿಳಿದುಬರುತ್ತದೆ. ಯಾವೊಬ್ಬ ಮಂತ್ರಿಗಳೂ ಮಾಡದ ಕಾರ್ಯವನ್ನು ಒಬ್ಬ ವ್ಯಕ್ತಿ ಮಾಡಿ ತೋರಿಸುವುದು ಸಾಮಾನ್ಯ ಕೆಲಸವಲ್ಲ. ಅದನ್ನು ಸಾಧಿಸುವುದು ಮಾಸ್ತರರಂತಹ ನಿಸ್ವಾರ್ಥ ವ್ಯಕ್ತಿಗಳು ಮಾತ್ರ.

ಇವರು ಸರಳ ಜೀವಿಗಳು, ಉತ್ತಮ ಲೇಖಕರು, ಶಿಕ್ಷಣ ಪ್ರೇಮಿಗಳು, ಸಾಮಾಜಿಕ ಕಳಕಳಿಯನ್ನು ಹೊಂದಿದವರಾಗಿದ್ದರು. ಗಾಂಧೀಜಿಯವರ ಕನಸಂತೆ ಹಳ್ಳಿಗಳ ಉದ್ಧಾರಕ್ಕೆ ಪಣತೊಟ್ಟು ಕಡೆಯವರೆಗೆ ಶ್ರಮಿಸಿದರು. ಇಂತಹ ಮಹಾನ್ ಚೇತನ ಡಿಸೆಂಬರ್ ೯, ೧೯೭೬ ರಂದು ಕಣ್ಮರೆಯಾಗಿ ಭಗವಂತನಲ್ಲಿ ಒಂದಾಯಿತು.

೪.೨ ಮಾಧ್ವರಾವ್ ರಾಮಚಂದ್ರ ಮುತಾಲೀಕ :

ಭಾರತವನ್ನು ಬ್ರಿಟೀಷರ ದಾಸ್ಯ ಶೃಂಖಲೆಯಿಂದ ಬಿಡುಗಡೆಗೊಳಿಸಲು ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಮಧ್ವರಾವ್ ರಾಮಚಂದ್ರ ಮುತಾಲೀಕರು ಒಬ್ಬರು. ಇವರು ಅಪ್ಪಟ ಗಾಂಧೀವಾದಿಗಳಾಗಿದ್ದರು.

ಜನನ : ಇವರು ೧೯೦೭ ರ ಮಾರ್ಚ ೧೯ ರಂದು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಸತ್ತಿ ಊರಲ್ಲಿ ಜನಿಸಿದರು. ಇವರ ತಂದೆ ರಾಮಚಂದ್ರ ಮುತಾಲೀಕರು ಮತ್ತು ತಾಯಿ ಶ್ರೀಮತಿ ಚಂಪಾಬಾಯಿ ಮುತಾಲೀಕರು.

ಕೌಟುಂಬಿಕ ಹಿನ್ನಲೆ :

ಮಧ್ವರಾವರು ಹುಟ್ಟಿದ್ದು ಮತ್ತು ಬೆಳೆದದ್ದು ತಾಯಿಯ ತವರಾದ ಸತ್ತಿ ಊರಲ್ಲಿ. ತಂದೆ–ತಾಯಿಗಳಿಗೆ ಇವರೊಬ್ಬರೆ ಮಗ. ಹುಟ್ಟಿದ ಮೂನೇ ದಿನವೇ ತಾಯಿ ತೀರಿಕೊಂಡರು. ಮುಂದೆ ಅಬಚಿಯ ಆರೈಕೆಯಲ್ಲಿ ಸತ್ತಿಯಲ್ಲಿಯೇ ಬೆಳೆದರು. ವಯಸ್ಕರಾಗುವವರೆಗೆ ಎಲ್ಲ ಆಸ್ತಿ ರಿಸಿವ್ಹರ್ ಕಡೆಗೆ ಇದ್ದವು. ಪ್ರಬುದ್ಧರಾದ ಮೇಲೆ ಸರ್ಕಾರದ ಅಧೀನದಲ್ಲಿದ್ದ ಭೂಮಿಯನ್ನು ತಮ್ಮ ಹೆಸರಿನಲ್ಲಿ ಪಡೆದುಕೊಂಡು ಐನಾಪುರದಲ್ಲಿ ಒಕ್ಕಲುತನವನ್ನು ಆರಂಭಿಸಿದರು.

ಮಧ್ವರಾವ್ ಮುತಾಲೀಕರ ಧರ್ಮಪತ್ನಿಯ ಹೆಸರು ಗೋಧಾಬಾಯಿ. ಇವರ ತವರೂರು ಹಿಪಕಲ್ ಗ್ರಾಮ. ಈ ದಂಪತಿಗಳಿಗೆ ಏಳು ಜನ ಮಕ್ಕಳು. ಅವರಲ್ಲಿ ರಾಮ (ಎಂ.ಎಸ್ಸಿ. ಅಗ್ರಿ), ಕೃಷ್ಣ (ಇಂಜಿನಿಯರ್), ವಸಂತ (ಬಿ.ಎಸ್ಸಿ.), ಮೋಹನ (ಇಂಜಿನಿಯರ್) ಮತ್ತು ಅಶೋಕ (ಎಂ.ಎಸ್ಸಿ) ಎಂಬ ಐದು ಜನ ಗಂಡುಮಕ್ಕಳು. ಪುಷ್ಪಾ (ಎಂ.ಡಿ. ಗೈನಾಕಾಲಾಜಿಸ್ಟ್), ಹೇಮಾ (ಎಸ್.ಎಸ್.ಸಿ.) ಎಂಬ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಮಧ್ವರಾವರವರು ತಮ್ಮ ಎಲ್ಲ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ಕೊಡಿಸಿದ್ದಾರೆ. ಇವರೆಲ್ಲರೂ ಈಗ ಒಕ್ಕಲುತನವನ್ನು ಮಾಡುತ್ತಿದ್ದಾರೆ.

ಶಿಕ್ಷಣ : 048757

ಮಧ್ವರಾವ್ ಮುತಾಲೀಕರು ಮ್ಯಾಟ್ರಿಕ್‌ವರೆಗೆ ಶಿಕ್ಷಣ ಪಡೆದುಕೊಂಡು ಪ್ರಾಥಮಿಕ ಶಿಕ್ಷಣವನ್ನು ಸತ್ತಿಯಲ್ಲಿಯೂ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಅಥಣಿಯಲ್ಲಿಯೂ ಮುಗಿಸಿದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಪ್ರೇರಣೆ :

ಮಧ್ವರಾವರು ದೇಶದಲ್ಲಿ ಸಂಚಲನ ಮೂಡಿಸಿದ್ದ ಮಹಾತ್ಮಾ ಗಾಂಧೀಜಿಯವರಿಂದ ಮತ್ತು ಐನಾಪೂರದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದ ದೇಶಪಾಂಡೆ ಗುರುಗಳಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು.

ಸ್ವಾತಂತ್ರ್ಯ ಸಂಗ್ರಾಮಕ್ಕೆ ಕೊಡುಗೆ :

ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಅನೇಕ ಕಷ್ಟಗಳನ್ನು ಎದುರಿಸಿದರು. ಆದರೂ ಅದಾವುದಕ್ಕೂ ಹೆದರದೆ ಹೋರಾಟವನ್ನು ಮುಂದುವರೆಸಿದರು.

೧೯೩೦ ಜನೇವರಿ ೨೬ ರಂದು ಐನಾಪೂರದಲ್ಲಿ ಧ್ವಜಾರೋಹಣ ಮಾಡಿದರು. ನಾರಾಯಣರಾವ್ ದೇಶಪಾಂಡೆ, ಮಧ್ವರಾವ್ ಮುತಾಲೀಕ್, ವ್ಯಾಸರಾವ್ ಮುತಾಲೀಕ್, ಬೋಗಾರ ವಕೀಲ ಪಾಲ್ಗೊಂಡಿದ್ದರು.[೧೧]

ವಿದೇಶೀ ವಸ್ತು ಬಹಿಷ್ಕಾರ ಮತ್ತು ಖಾದಿ ಬಟ್ಟೆಯ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು. ಅಣ್ಣುಗುರೂಜಿ, ಗುರುಮಾಸ್ತರ ಜೇರೆ, ಮತ್ತು ದೇಶಪಾಂಡೆ ಮಾಸ್ತರರು ಮತ್ತು ನಾರಾಯಣ ದೇಶಪಾಂಡೆಯವರ ಮಾರ್ಗದರ್ಶನದಲ್ಲಿ ಹೋರಾಟವನ್ನು ಮಾಡಿದರು. ಸುತ್ತಮುತ್ತಲಿನ ಅನೇಕ ಊರುಗಳ ಜನರೊಂದಿಗೆ ಒಡನಾಟವಿತ್ತು.

೧೯೩೨-೩೩ ರಲ್ಲಿ ಕಾಯಿದೆ ಭಂಗ ಮಾಡಿ ಚಳುವಳಿಯಲ್ಲಿ ಭಾಗಿಯಾಗಿದ್ದರಿಂದ ೧೫ ದಿನಗಳ ಕಾರಾಗೃಹವಾಸವನ್ನು ಅನುಭವಿಸಿದರು.[೧೨] ಕರಪತ್ರ ಹಂಚುವುದು, ಸೆರೆ ಅಂಗಡಿಗಳನ್ನು ಮುಚ್ಚುವ ಕಾರ್ಯಗಳನ್ನು ಮಾಡಿದ್ದರು.

ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡಿದ್ದ ಪಿಂಚಣಿಯನ್ನು ಇವರು ನಿರಾಕರಿಸಿದ್ದು ಇವರ ನಿಸ್ವಾರ್ಥ ಸೇವೆಗೆ ನಿದರ್ಶನವಾಗಿದೆ.

ಸಾಮಾಜಿಕ ಕಾರ್ಯಗಳು :

೧೯೦೬ ರಲ್ಲಿ ಐನಾಪೂರದಲ್ಲಿ ದಿ. ಕುಬೇರ ಕೊ ಆಫ್ ಸಹಕಾರಿ ಸೊಸಾಯಿಟಿ ಲಿ. ಐನಾಪೂರ ಹೆಸರಿನಲ್ಲಿ ಒಂದು ಸೊಸೈಟಿ ಸ್ಥಾಪನೆಯಾಯಿತು. ಇಂದು ಅದಕ್ಕೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್ ನಿಯಮಿತ ಐನಾಪೂರ ಎಂದು ಕರೆಯುತ್ತಾರೆ.

ಈ ಬ್ಯಾಂಕಿನ ಅಧ್ಯಕ್ಷರಾಗಿ ಮಧ್ವರಾವ್ ಮುತಾಲೀಕರು ೪೫ ವರ್ಷಗಳವರೆಗೆ ಯಶಸ್ವಿಯಾಗಿ ಕಾರ್ಯನಿರ್ವಹಿಸಿದರು. ಊರಿನ ರೈತರಿಗೆ ಆರ್ಥಿಕ ಬೆಂಬಲ ನುಡಿದರು. ಕ್ಯಾಟಲ್ ಬಿಲ್ಡಿಂಗ್ ಸೊಸೈಯಿಟಿಯ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿದರು. ಇವೆರಡೂ ಸಂಸ್ಥೆಗಳಿಗೂ ಅವರು ಅವಿರೋಧವಾಗಿಯೇ ಆಯ್ಕೆಯಾಗುತ್ತಿದ್ದರು.

ಊರಿನ ಎಲ್ಲ ರೈತರಿಗೆ ನೀರಾವರಿ ಸೌಲಭ್ಯ ಸಿಗಲೆಂದು ಸದುದ್ಧೇಶದಿಂದ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡು ಕಾಯಪ್ರವೃತ್ತರಾದರು. ಆದರೆ ಕಾರಣಾಂತರಗಳಿಂದ ಅದು ಯಶಸ್ವಿಯಾಗದೇ ಅವರ ಹಂಬಲ ಕೊನೆಯವರೆಗೂ ಮನಸ್ಸಿನಲ್ಲೇ ಕೊರಗಾಗಿಯೇ ಉಳಿಯಿತು.

ಇವರು ಆಧ್ಯಾತ್ಮ ಜೀವಿಗಳೂ ಹೌದು. ಇವರು ದಿನಾಂಕ ೪-೩-೧೯೮೭ ರಂದು ಇಹಲೋಕವನ್ನು ತ್ಯಜಿಸಿದರು.

೪.೩ ಶ್ರೀ ವ್ಯಾಸರಾವ್ ತಮ್ಮಣ್ಣಾ ಮುತಾಲೀಕ :

ಶ್ರೀ ವ್ಯಾಸರಾವ್ ತಮ್ಮಣ್ಣಾ ಮುತಾಲೀಕರೂ ಸಹ ಐನಾಪೂರದ ಒಬ್ಬ ಸ್ವಾತಂತ್ರ್ಯ ಹೋರಾಟಗಾರರು. ದೇಶಕ್ಕಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಉತ್ಸಾಹದಿಂದ ಭಾಗವಹಿಸಿ, ನಿಸ್ವಾರ್ಥಸೇವೆ ಸಲ್ಲಿಸಿ ಸೆರೆಮನೆವಾಸವನ್ನು ಅನುಭವಿಸಿದರು.

ಜನನ : ಶ್ರೀ ವ್ಯಾಸರಾವ ತಮ್ಮಣ್ಣಾ ಮುತಾಲೀಕರು ೧೯೧೦ ರಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಐನಾಪೂರದಲ್ಲಿ ಜನಿಸಿದರು. ಇವರ ತಂದೆ ತಮ್ಮಣ್ಣಾ ಮುತಾಲೀಕರು ಮತ್ತು ತಾಯಿ ಶ್ರೀಮತಿ ಕಮಲಾಬಾಯಿ ಮುತಾಲೀಕರು.

ಕೌಟುಂಬಿಕ ಹಿನ್ನಲೆ : ಇವರ ತಂದೆ ತಮ್ಮಣ್ಣಾ ಮುತಾಲೀಕರು ಮೂಲತಃ ಐನಾಪೂರದವರು. ಇಲ್ಲಿಯೇ ಒಕ್ಕಲುತನವನ್ನು ಮಾಡುತ್ತಿದ್ದರು. ಇವರ ತಂದೆ ತಾಯಿಗಳಿಗೆ ಒಟ್ಟು ಇಬ್ಬರು ಮಕ್ಕಳು. ಮೊದಲನೇಯವರೇ ವ್ಯಾಸರಾಯರು. ಎರಡನೇಯವರು ರಾಮಚಂದ್ರ. ವ್ಯಾಸರಾಯರ ಧರ್ಮಪತ್ನಿ ಶ್ರೀಮತಿ ಉಷಾ ಮುತಾಲೀಕರು ಈ ದಂಪತಿಗಳಿಗೆ ಮೋಹನ ಮತ್ತು ಕೃಷ್ಣ ಎಂಬ ಇಬ್ಬರು ಗಂಡು ಮಕ್ಕಳು. ಸಂದ್ಯಾ ಮತ್ತು ಶ್ರೀದೇವಿ ಎಂಬ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ. ಹಿರಿಯ ಮಗ ಮೋಹನರವರು ಬೆಂಗಳೂರಿನಲ್ಲಿ ನೌಕರಿ ಮಾಡುತ್ತಿದ್ದರೆ ಎರಡನೇ ಮಗ ಕೃಷ್ಣ ಮುಂಬಯಿಯಲ್ಲಿ ನೌಕರಿಯಲ್ಲಿದ್ದಾರೆ.

ಮೊದಲು ವ್ಯಾಸರಾಯರು ಭಾರತೀಯ ಸೇವೆಯಾದ ವಾಯುಸೇನೆಯಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿಂದ ನಿವೃತ್ತಿಯಾದ ಮೇಲೆ ಧಾರವಾಡಕ್ಕೆ ಬಂದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಕಾರ್ಯ ನಿರ್ವಹಿಸಿದರು. ನಂತರ ಐನಾಪೂರಕ್ಕೆ ಬಂದು ಒಕ್ಕಲುತನವನ್ನು ಪ್ರಾರಂಭಿಸಿದರು.

ಶಿಕ್ಷಣ : ಶ್ರೀ ವ್ಯಾಸರಾವ್ ಮುತಾಲೀಕರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಐನಾಪೂರದಲ್ಲಿಯೂ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಧಾರವಾಡದಲ್ಲಿ ಮುಗಿಸಿದರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಪ್ರೇರಣೆ : ಶ್ರೀ ಜಿ.ಎಂ. ದೇಶಪಾಂಡೆ ಗುರುಗಳು ಮತ್ತು ಅವರ ಸಹೋದರರಾದ ಶ್ರೀ ನಾರಾಯಣ ದೇಶಪಾಂಡೆಯವರ ಪ್ರಭಾವ ಹಾಗೂ ಮಹಾತ್ಮಾ ಗಾಂಧೀಜಿಯವರ ಪ್ರಭಾವದಿಂದಾಗಿ ದೇಶಸೇವೆಯನ್ನು ಮಾಡಬೇಕೆಂಬ ಮಹದಾಸೆಯಿಂದ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು.

ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆ :

ಶ್ರೀ ವ್ಯಾಸರಾವ್ ಮುತಾಲೀಕರು ಅಪ್ಪಟ ಗಾಂಧೀವಾದಿಗಳು. ದೇಶಕ್ಕಾಗಿ ಎಂತಹ ತ್ಯಾಗಕ್ಕೂ ಸಿದ್ಧರಾದವರು. ಹಲವಾರು ಬಾರಿ ಬ್ರಿಟೀಷರ ಕೆಂಬಣ್ಣಿಗೆ ಗುರಿಯಾದರು. ಸೆರೆ ಅಂಗಡಿಗಳನ್ನು ಬಂದು ಮಾಡುವುದು, ಶಿಂಧಿಗಿಡ ಕಡಿಯುವುದು, ಧ್ವಜಾರೋಹಣ ಮಾಡುವುದು, ವಿದೇಶೀ ವಸ್ತುಗಳ ವಿರುದ್ಧ ಪ್ರಚಾರ ಕೈಗೊಳ್ಳುವುದು ಇವರ ಪ್ರಮುಖ ಕಾರ್ಯಗಳನ್ನು ಮಾಡಿದರು.

ಜನೇವರಿ ೨೬, ೧೯೩೦ ರಂದು ಐನಾಪೂರದಲ್ಲಿ ಶ್ರೀ ನಾರಾಯಣರಾವ್ ದೇಶಪಾಂಡೆ, ವ್ಯಾಸರಾವ ಮುತಾಲೀಕ, ಶ್ರೀ ಮಧ್ವರಾವ್ ಮುತಾಲೀಕ್ ಮತ್ತು ಬೋಗಾರ ವಕೀಲರೊಂದಿಗೆ ಸೇರಿ ಧ್ವಜಾರೋಹಣ ಮಾಡಿದ್ದರು[೧೩] ಎಂದು ಹೇಳಿದ್ದಾರೆ.

೧೯೩೦-೩೧ರಲ್ಲಿ ವಿದೇಶೀ ವಸ್ತುಗಳನ್ನು ಬಹಿಷ್ಕರಿಸಿದ್ದಕ್ಕಾಗಿ ೫ ತಿಂಗಳು ಜೈಲುವಾಸವನ್ನು ಅನುಭವಿಸಿದರು. ಇವರನ್ನು ಹಿಂಡಲಗಾ ಜೈಲಿನಲ್ಲಿ ಇಡಲಾಗಿತ್ತು.[೧೪]

ಪಿಂಚಣಿಯನ್ನು ನಿರಾಕರಿಸಿದರು. ಸರ್ಕಾರದವರು ತಾಮ್ರಪತ್ರ ಕೊಡಲು ಬಂದಾಗ ಅದನ್ನೂ ನಿರಾಕರಿಸಿದರು. ಇದು ಅವರ ನಿಸ್ವಾರ್ಥ ಗುಣಕ್ಕೆ ಸಾಕ್ಷಿಯಾಗಿದೆ.

ಇವರು ಸ್ನೇಹಜೀವಿಗಳು, ಪರೋಪಕಾರಿಗಳೂ ಆಗಿದ್ದರು. ಇವರು ೨೦೦೨ ರಲ್ಲಿ ಇಹಲೋಕವನ್ನು ತ್ಯಜಿಸಿದರು.

೪.೪ ಶ್ರೀ ನಾರಾಯಣರಾವ್ ಮಹಿಪತಿರಾವ್ ದೇಶಪಾಂಡೆ :

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಗಡಿನಾಡಿನ ಹೋರಾಟಗಾರ ನಾರಾಯಣ ದೇಶಪಾಂಡೆಯವರು ಗೋವಿಂದರಾವ್ ದೇಶಪಾಂಡೆಯವರ ಸಹೋದರ. ಅಣ್ಣನ ಮಾರ್ಗದರ್ಶನದಲ್ಲಿ ನಡೆದು ಅವರ ಆದರ್ಶ ಗುಣಗಳನ್ನು ತಮ್ಮಲ್ಲಿ ಬೆಳೆಸಿಕೊಂಡು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಇವರು ಚಳುವಳಿಯಲ್ಲಿ ರಾಷ್ಟ್ರಭಕ್ತರ ಮುಂದಾಳತ್ವ ವಹಿಸಿಕೊಂಡು ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದರು. ಕಡೆಯವರೆಗೂ ಗಾಂಧೀವಾದಿಗಳಾಗಿಯೇ ಉಳಿದರು.

ಜನನ : ಇವರು ೧೯೦೧ ರಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಮಂಗಸೂಳಿಯಲ್ಲಿ ಜನಿಸಿದರು. ತಂದೆ ಮಹಿಪತ ದೇಶಪಾಂಡೆಯವರು ತಾಯಿ ಶ್ರೀಮತಿ ಗಂಗಾಬಾಯಿ ಮ. ದೇಶಪಾಂಡೆಯವರು. ಇವರ ತಾಯಿಯ ತವರೂರು ಬಿಜಾಪೂರ ಜಿಲ್ಲೆಯ ಬಬಲೇಶ್ವರ ಗ್ರಾಮ.

ಕೌಟುಂಬಿಕ ಹಿನ್ನಲೆ : ನಾರಾಯಣ ದೇಶಪಾಂಡೆಯವರ ತಂದೆ ತಾಯಿಗಳು ಮೂಲತಃ ಮಂಗಸೂಳಿಯವರು. ಅಲ್ಲಿ ಇವರದು ವತನದಾರ ಮನೆತನ. ಇವರಿಗೆ ಗೋವಿಂದರಾವ್ ಮತ್ತು ಪಂಡಿತರಾವ್ ಎಂಬ ಇಬ್ಬರು ಸಹೋದರರು, ಮಥುರ, ಸಾವಿತ್ರಿ, ಬಕುಳಾ, ಕುಸುಮಾವತಿ ಎಂಬ ನಾಲ್ಕು ಜನ ಸಹೋದರಿಯರಿದ್ದರು. ಸೇವಾಮನೋಭಾವನೆಯ ವ್ಯಕ್ತಿ ನಾರಾಯಣರು.

ತಮ್ಮ ಕೊನೆಯವರೆಗೂ ಅವಿವಾಹಿತರಾಗಿಯೇ ಉಳಿಯಬೇಕೆಂದು ಬಯಸಿದ್ದರು. ಆದರೆ ಅವರ ತಾಯಿಯವರ ಇಚ್ಛೆಯಿಂದಾಗಿ ತಮ್ಮ ವಿಚಾರವನ್ನು ಕೈಬಿಡಬೇಕಾಯಿತು. ರಮಾಬಾಯಿಯವರೊಂದಿಗೆ ವಿವಾಹವಾಯಿತು. ಈ ದಂಪತಿಗಳಿಗೆ ಮೂರು ಜನ ಮಕ್ಕಳು. ಅನಂತ, ಮೃದುಲಾ (ಗುಲಾಬ) ಮತ್ತು ಶಾಲಾ ಎಂದು. ಇವರ ಹಿರಿಯ ಮಗ ಅನಂತ ದೇಶಪಾಂಡೆಯವರು ದೇಶಸೇವೆಯ ಭಾಗವಾದ ವಾಯುಸೇನೆಯಲ್ಲಿ 'ಆನರರಿ ಪ್ಲೈಟ್ ಲೆಪ್ಟಿನೆಂಟ್' ಹುದ್ದೆ ನಿರ್ವಹಿಸಿ ನಿವೃತ್ತರಾಗಿ ಶ್ರೀ ರಾಮ ಬಡಾವಣೆ ಮುತಗಾ, ಬೆಳಗಾವಿಯಲ್ಲಿ ವಾಸಿಸುತ್ತಿದ್ದಾರೆ.

ಶಿಕ್ಷಣ : ನಾರಾಯಣರು ಪ್ರಾಥಮಿಕ ಶಿಕ್ಷಣವನ್ನು ಮಂಗಸೂಳಿಯಲ್ಲಿಯೂ, ನಂತರ ಮಾಧ್ಯಮಿಕ ಶಿಕ್ಷಣವನ್ನು ಮೀರಜ್ ಮತ್ತು ಬೆಳಗಾವಿಯ ಸರದಾರ್ ಶಾಲೆಯಲ್ಲಿ ಮುಗಿಸಿದರು.

ಪ್ರೇರಣೆ : ಸಹೋದರರಾದ ಜಿ.ಎಂ. ದೇಶಪಾಂಡೆಯವರ ಆದರ್ಶಗಳಿಂದ ಪ್ರಭಾವಿತರಾದರು ಮತ್ತು ಸ್ವಾತಂತ್ರ್ಯ ಚಳುವಳಿಯ ಅಗ್ರಮಾನ್ಯ ನಾಯಕರಾದ ಗಾಂಧೀಜಿಯವರಿಂದ ಪ್ರಭಾವಿತರಾಗಿ ಚಳುವಳಿಯಲ್ಲಿ ಧುಮುಕಿದರು.

ಸ್ವಾತಂತ್ರ್ಯಕ್ಕೆ ಕೊಡುಗೆ :

೧೯೧೭ ರಲ್ಲಿ ತಿಲಕರು ಅಥಣಿಗೆ ಭೇಟಿ ನೀಡಿದ್ದಾಗ ಸುತ್ತಮುತ್ತಲಿನ ಅನೇಕ ಹಳ್ಳಿಗಳ ಜನ ಆಗಮಿಸಿದ್ದರು. ಅವರಲ್ಲಿ ಶ್ಯಾಮರಾವ್ ಕುಲಕರ್ಣಿ, ನಾರಾಯಣರಾವ್ ದೇಶಪಾಂಡೆ, ಶಿವರಾಮ ಕೋಷ್ಠಿ ಮತ್ತು ಶಿವಪ್ಪಾ ಜಮಖಂಡಿಯವರು ಭಾಗವಹಿಸಿದ್ದರು.[೧೫]

೧೯೩೦ ರಲ್ಲಿ ನಾಗರೀಕ ಅಸಹಕಾರ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರಿಂದಾಗಿ ೨ ತಿಂಗಳ ಕಾರಾಗೃಹ ವಿಧಿಸಿ ಹಿಂಡಲಗಾ ಜೈಲಿನಲ್ಲಿ ಇಡಲಾಗಿತ್ತು. ಇವರ ಖೈದಿ ನಂಬರ – ೭೫೧೪ ಆಗಿತ್ತು. ಅವಧಿ ೨-೧೨-೧೯೩೦ ರಿಂದ ೩-೨-೧೯೩೧ ರವರೆಗೆ.[೧೬]

೧೯೩೦ ರಲ್ಲಿ ಐನಾಪೂರದಲ್ಲಿ ಧ್ವಜಾರೋಹಣ ಮಾಡಿದ್ದರು.[೧೭] ಸೇವಾದಳವನ್ನು ಸೇರಿ ಖಾದಿಧಾರಿಗಳಾದರು. ಮೂರು ಭಾರಿ ಸೆರೆಮನೆಗೆ ಹೋಗಿದ್ದರು. ಗಾಂಧೀಜಿಯವರ ಕಟ್ಟಾ ಅನುಯಾಯಿಯಾಗಿದ್ದ ದೇಶಪಾಂಡೆಯವರು ಅಣ್ಣುಗುರೂಜಿ, ವೆಂಕರಡ್ಡಿ ಹೂಲಿ, ಶ್ರೀರಂಗ ಕಾಮತ್, ಎ.ಎಸ್. ಕುಲಕರ್ಣಿಯವರ ಗರಡಿಯಲ್ಲಿ ಪಳಗಿದ್ದರು.

ಅಥಣಿ, ಐನಾಪೂರ, ಅಡಹಳ್ಳಿ, ಕಿತ್ತೂರು, ರಾಮತೀರ್ಥ, ಸೂಡಿ, ಮಂಗಸೂಳಿ ಗ್ರಾಮಗಳಿಗೆ ಹೋಗಿ ತಮ್ಮ ಉಕ್ಕಿನ ಕಂಠದಿಂದ ಜನರನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾಗುವಂತೆ ಪ್ರೇರೇಪಿಸುತ್ತಿದ್ದರು.

೧೯೪೨ ರಲ್ಲಿ ಚಲೇಜಾವ್ ಚಳುವಳಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡರು. ಇದರಿಂದ ೨೦ ತಿಂಗಳು ಶಿಕ್ಷೆಯಾಯಿತು.[೧೮] ಸಿಂಧಿ ಗಿಡ ಕಡಿಯುವುದು, ಪಾನ ನಿಶೇಧ, ವಿದೇಶಿ ಬಟ್ಟೆ ಹೋಳಿ ಮಾಡುವುದು ಅವರ ಕಾರ್ಯಚಟುವಟಿಕೆಗಳಾಗಿದ್ದವು. ಜನರಲ್ಲಿ ದೇಶಾಭಿಮಾನವನ್ನು ಮೂಡಿಸುತ್ತಿದ್ದರು.

ಇವರಿಗೆ ಧ್ವನಿವರ್ಧಕದ ಅವಶ್ಯಕತೆಯೇ ಇರಲಿಲ್ಲ. ಜನರನ್ನು ತಮ್ಮೆಡೆಗೆ ಸೆಳೆಯುತ್ತಿದ್ದರು.

೧೯೨೪ ರಲ್ಲಿ ಗಾಂಧೀಜಿಯವರು ಬೆಳಗಾವಿಗೆ ತೆರಳುವ ಮುಂಚೆ ಮಂಗಸೂಳಿಯಲ್ಲಿ ವಾಸ್ತವ್ಯ ಹೂಡಿದ್ದರು. ಆವಾಗ ನಾರಾಯಣರೇ ಮೇಲುಸ್ತುವಾರಿಯನ್ನು ವಹಿಸಿಕೊಂಡಿದ್ದರಲ್ಲದೆ ಮಹಾತ್ಮಾ ಗಾಂಧೀಜಿಯವರ ಕಡೆಯಿಂದ ಭೇಷ್ ಎನಿಸಿಕೊಂಡಿದ್ದರು.[೧೯]

ಬ್ರಿಟೀಷರಿಗೆ ಇವರು ಎಷ್ಟೊಂದು ಸಿಂಹಸ್ವಪ್ನವಾಗಿದ್ದರೆಂದರೆ ಇವರೊಬ್ಬರನ್ನೇ ಬಂಧಿಸಲು ಬ್ರಿಟೀಷ್ ಮೇಲಾಧಿಕಾರಿಗಳು ಪೋಲೀಸ್ ಪಡೆಯೊಂದಿಗೆ ಮಂಗಸೂಳಿಗೆ ಮುತ್ತಿಗೆ ಹಾಕಿದ್ದರು. ಬೆಳಗಿನ ಜಾವ ಬಹಿರ್ದೆಸೆಗೆ ಹೋದಾಗ ಜನ ಪೋಲೀಸರನ್ನುಕಂಡು ಭಯಭೀತರಾಗಿ ಇವರಿಗೆ ವಿಷಯ ತಿಳಿಸಿದರು. ಆಗ ಇವರು ತಾವಾಗಿಯೇ ಮೇಲಾಧಿಕಾರಿಗಳಿಗೆ ನಾನು ಬೆಳಿಗ್ಗೆ ಭಾಷಣ ಮಾಡಿ ನಿಮ್ಮೊಂದಿಗೆ ಬರುತ್ತೇನೆಂದು ಹೇಳಿ ಅದೇ ಪ್ರಕಾರ ಜಾಹಿರ ಸಭೆ ನಡೆಸಿ 'ಜೈ ಹಿಂದ್' ಘೋಷಣೆಯನ್ನು ಮಾಡಿದ ನಂತರ ಇವರನ್ನು ಬಂಧಿಸಿದರು.

೧೯೩೭ ರ ಪ್ರಥಮ ಚುನಾವಣೆಯಲ್ಲಿ ಕಾಂಗ್ರೆಸ್ ಭಾಗವಹಿಸಬೇಕೆಂದು ನಿರ್ಧಾರ ಮಾಡಿತು. ಬೆಳಗಾವಿಯ ಉತ್ತರ ಮತ್ತು ದಕ್ಷಿಣ ಭಾಗಕ್ಕೆ ಸ್ಪರ್ಧಿಗಳು ಚುನಾವಣಾ ಕಣಕ್ಕಿಳಿದರು. ಈ ಚುನಾವಣಾ ಪ್ರಚಾರಕ್ಕೆ ನೆಹರೂರವರೂ ಆಗಮಿಸಿದ್ದರು. ಅಣ್ಣುಗುರೂಜಿ, ಗಂಗಾಧರರಾವ್ ದೇಶಪಾಂಡೆ, ಚೆನ್ನಪ್ಪಾ ವಾಲಿಯವರೊಂದಿಗೆ ಶ್ರೀ ನಾರಾಯಣ ದೇಶಪಾಂಡೆಯವರು ವ್ಯಾಖ್ಯಾನದ ರಂಗವನ್ನು ಹಗಲು ರಾತ್ರಿಯೆನ್ನದೆ ದುಡಿದು ಪರಿಣಾಮಕಾರಿಯಾಗಿ ಮಾಡಿದರು. ಒಮ್ಮೊಮ್ಮೆ ಒಬ್ಬೊಬ್ಬರು ಭಾಷಣ ಮಾಡುತ್ತಿದ್ದರು.[೨೦]

ಅಣ್ಣೂಗುರೂಜಿ, ಎ.ಎಸ್.ಕುಲಕರ್ಣಿ, ಗುರುಮಾಸ್ತರ ಜೇರೆಯವರೊಂದಿಗೆ ಕೂಡಿ ಅಥಣಿ ತಾಲೂಕಿನಲ್ಲಿ ಚಳುವಳಿ ವಾತಾವರಣವನ್ನು ಮತ್ತಷ್ಟು ನಿರ್ಮಾಣ ಮಾಡಿದರು.

ಗಾಂಧೀಜಿಯವರ ಆದರ್ಶದಿಂದ ಪ್ರಭಾವಿತರಾಗಿದ್ದ ನಾರಾಯಣರು, ಗಾಂಧೀಜಿಯವರ ಪ್ರೀತಿಯ ಸೇವಕರಾಗಿದ್ದರು. ಎಲ್ಲ ಸಂಬಂಧಗಳನ್ನು ತ್ಯಜಿಸಿ ಖಾದಿಧಾರಿಗಳಾಗಿ ಉಳಿದರು. ಗಾಂಧಿ ತತ್ವಗಳನ್ನು ಮನಸಾರೆ ಒಪ್ಪಿಕೊಂಡು ಆಚರಣೆಗೆ ತಂದ ನಿಜವಾದ ಸತ್ಯಾಗ್ರಹಿ ನಾರಾಯಣರು. ಸೇವೆ ಮತ್ತು ತ್ಯಾಗ ಅವರ

ನೈತಿಕ ಶಕ್ತಿಗಳಾಗಿದ್ದವು. ಇದರಿಂದ ಜಯವು ಯಾವಾಗಲೂ ಅವರ ಬೆನ್ನ ಹಿಂದೆಯೇ ಇತ್ತು.

ಅವರ ಮಾತಿನಲ್ಲಿ ಅದ್ಭುತ ಶಕ್ತಿ ಇತ್ತು. ಆದ್ದರಿಂದಲೇ ಅವರಿಂದ ಜನ ಪ್ರಭಾವಿತರಾದರು. ಮನೆತನಕ್ಕಾಗಿ ಏನೂ ಮಾಡಲಿಲ್ಲ. ಮಾಡಿದ್ದೆಲ್ಲಾ ದೇಶಕ್ಕಾಗಿ. ಸ್ನೇಹಜೀವಿಯಾಗಿದ್ದರು. ಬಡವ ಬಲ್ಲಿದರೆನ್ನದೆ ಎಲ್ಲರನ್ನೂ ಗೌರವದಿಂದ ಕಾಣುತ್ತಿದ್ದರು. ಸ್ವಾತಂತ್ರ್ಯ ದೊರಕಿದಾಗ ಸಂಭ್ರಮದಿಂದ ಊರಿಗೆಲ್ಲಾ ಊಟಬಡಿಸಿ ಸಂತಸಪಟ್ಟರು.

೧೯೪೮ ರಲ್ಲಿ ಗಾಂಧೀಜಿಯವರ ಹತ್ಯೆಯಾದಾಗ ತೀವ್ರ ಆಘಾತಗೊಂಡರು. ಇವರ ಮನಸ್ಸಿನ ಮೇಲೆ ಪರಿಣಾಮವಾಯಿತು. ಆಗ ಕಿತ್ತೂರು ಸಕ್ಕರೆ ಕಾರ್ಖಾನೆಯ ಮಾಲೀಕರಾಗಿದ್ದ ಸರ್ದಾರ್ ಘಾನ್ಸೆ ಎಂಬುವವರು ಇವರಿಗೆ ಆಶ್ರಯ ನೀಡಿದ್ದರು.

ಇಂತಹ ಅಪರೂಪದ ನಿಸ್ವಾರ್ಥ ವ್ಯಕ್ತಿ. ಅಪ್ರತಿಮ ದೇಶಭಕ್ತ, ಧೀರ ನಾರಾಯಣ ಶ್ರೀಮನ್ ನಾರಾಯಣನನ್ನು ಜೂನ್ ೨, ೧೯೫೦ ರಂದು ಕೂಡಿಕೊಂಡರು.

ಸಾಮಾಜಿಕ ಕಾರ್ಯಗಳು : ಮಂಗಸೂಳಿಯಲ್ಲಿ ಗ್ರಾಮ ಪಂಚಾಯತಿಯನ್ನು ಸ್ಥಾಪನೆ ಮಾಡಿ, ಗ್ರಾಮ ಪಂಚಾಯತಿ ಸದಸ್ಯರೂ ಆಗಿದ್ದರು. ಇವರ ದೇಶಸೇವೆಯನ್ನು ಗುರುತಿಸಿ ಕಾಂಗ್ರೆಸ್ ಸುವರ್ಣ ಮಹೋತ್ಸವದ ನಿಮಿತ್ಯವಾಗಿ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಕಮೀಟಿ ೨೮-೧೨-೧೯೩೫ ರಲ್ಲಿ ಪ್ರಶಸ್ತಿಪತ್ರ ನೀಡಿ ಗೌರವಿಸಿದೆ.

ಸ್ವಾತಂತ್ರ್ಯ ಹೋರಾಟಗಾರರ ಸಂಘ ಮತ್ತು ಸ್ವಾತಂತ್ರ್ಯ ಯೋಧರ ಸಂಘಗಳ ಪ್ರಶಸ್ತಿ ನೀಡಿ ಗೌರವಿಸಿದೆ.

೪.೫ ಶ್ರೀ ರಂಗೋ ನಾರಾಯಣ ಮುತಾಲೀಕ :

ಶ್ರೀ ರಂಗೋ ನಾರಾಯಣ ಮುತಾಲೀಕರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರು. ಇವರು ಗಾಂಧೀವಾದಿಗಳಾಗಿ ದೇಶಸೇವೆಯಲ್ಲಿ ಸಕ್ರೀಯವಾಗಿ ಭಾಗಿಯಾಗಿದ್ದರು.

ಜನನ : ಇವರು ಸುಮಾರು ೧೯೨೫ ರಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಐನಾಪೂರದಲ್ಲಿ ಜನಿಸಿದರು. ಇವರ ತಂದೆ ನಾರಾಯಣ ಮುತಾಲೀಕರು. ತಾಯಿ ಶ್ರೀಮತಿ ಸುಮಿತ್ರಾ (ಸೋಮಕ್ಕ) ಮುತಾಲೀಕರು.

ಕೌಟುಂಬಿಕ ಹಿನ್ನಲೆ :

ರಂಗೋ ಮುತಾಲೀಕರು ಮೂಲತಃ ಐನಾಪೂರದವರು. ಇವರು ಯಾವಾಗಲೂ ದೇಶಪಾಂಡೆ ಗುರುಗಳ ಜೊತೆಗೆ ಅವರ ಮನೆಯಲ್ಲೇ ಇರುತ್ತಿದ್ದರು. ಕಡೆತನಕ ಬ್ರಹ್ಮಚಾರಿಗಳಾಗಿಯೇ ಉಳಿದು ದೇಶಕ್ಕಾಗಿ ನಿಸ್ವಾರ್ಥ ಭಾವದಿಂದ ಕೆಲಸ ಮಾಡಿದರು. ಇವರಿಗೆ ಸೋನೋಪಂತ ಮುತಾಲೀಕ ಎಂಬ ಒಬ್ಬ ಸಹೋದರರು ಮತ್ತು ಸುಶೀಲಾ, ಇಂದ್ರಾಯಿಣಿ, ಪಮ್ಮಕ್ಕ, ಶಾಂತಾ ಎಂಬ ಸಹೋದರಿಯರಿದ್ದರು.

ಶಿಕ್ಷಣ : ಇವರು ಮ್ಯಾಟ್ರಿಕ್‌ಪೂರ್ವದ ಶಿಕ್ಷಣವನ್ನು ಐನಾಪೂರದಲ್ಲಿಯೇ ಪಡೆದರು.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಲು ಪ್ರೇರಣೆ :

ಐನಾಪೂರದಲ್ಲಿ ಅತ್ಯಂತ ಪ್ರಭಾವ ಬೀರಿದ್ದ ಶ್ರೀ ಜಿ.ಎಂ. ದೇಶಪಾಂಡೆ ಗುರುಗಳಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು.

ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆ :

ಐನಾಪೂರದ ಇನ್ನುಳಿದ ಸ್ವಾತಂತ್ರ್ಯ ಹೋರಾಟಗಾರರ ಜೊತೆ ಜೊತೆ ರಂಗೋರವರು ಕಾರ್ಯ ನಿರ್ವಹಿಸಿದರು. ಬ್ರಿಟೀಷರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಶ್ರೀ ದೇಶಪಾಂಡೆ ಗುರುಗಳೊಂದಿಗೆ ಪ್ರಭಾತ ಫೇರಿಯಲ್ಲಿ ಪಾಲ್ಗೊಳ್ಳುತ್ತಿದ್ದರು.

೧೯೪೨ ರಲ್ಲಿ 'ಬ್ರಿಟೀಷ್ ಚಲೇಜಾವ್' (ಬ್ರಿಟೀಷರೇ ತೊಲಗಿರಿ) ಎಂದು ಐನಾಪೂರದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಗೋಡೆಯ ಮೇಲೆ ಮತ್ತು ಮಾನೆಯವರ ಮನೆಯ ಗೋಡೆಯ ಮೇಲೆ ಬರೆದು ಅರೆಸ್ಟ್ ಆಗಿದ್ದರು. ಆವಾಗ ಇವರಿಗೆ ಎರಡೂವರೆ ತಿಂಗಳು ಸೆರೆಮನೆ ವಾಸವಾಯಿತು.[೨೧]

ಐನಾಪೂರದಲ್ಲಿರುವ ಬಿಂದುನ ಭಾವಿಯಲ್ಲಿ ಒಮ್ಮೆ ಪೋಸ್ಟ್ ಬಾಕ್ಸನ್ನು ಎಸೆದಿದ್ದರು. ಶ್ರೀ ನಾರಾಯಣರಾವ್ ರವರು ಮತ್ತು ಶ್ರೀ ದೇಶಪಾಂಡೆ ಮಾಸ್ತರರೊಡಗೂಡಿ ಸ್ವಾತಂತ್ರ್ಯಕ್ಕಾಗಿ ದುಡಿದರು. ಇವರು ಪಿಂಚಣಿಯನ್ನು ಸಹ ತೆಗೆದುಕೊಳ್ಳಲಿಲ್ಲ. ಅವರ ಮೇಲೆ ಗಾಂಧೀಜಿಯವರ ಪ್ರಭಾವ ಎಷ್ಟಾಗಿತ್ತು ಎಂಬುದಕ್ಕೆ ಇದೇ ಸಾಕ್ಷಿಯಾಗಿದೆ.

ಸಾರ್ವಜನಿಕ ಕಾರ್ಯಗಳು :

ಶ್ರೀ ರಂಗೋ ನಾರಾಯಣ ಮುತಾಲೀಕರು ಐನಾಪೂರದಲ್ಲಿ ಶ್ರೀ ನಾರಾಯಣ ಧರ್ಮಾರ್ಥ ವಾಚನಾಲಯವನ್ನು ನಡೆಸುತ್ತಿದ್ದರು.

ಈ ಮಹಾನ್ ವ್ಯಕ್ತಿ ಇಹಲೋಕವನ್ನು ತ್ಯಜಿಸಿದ್ದು ೧೯೭೩ರ ಮೇ ೧ ರಂದು.

೪.೬ ಶ್ರೀನಿವಾಸಾಚಾರ್ಯ ಗೋಪಾಲಾಚಾರ್ಯ ಕಟ್ಟಿ :

ಶ್ರೀನಿವಾಸಾಚಾರ್ಯ ಗೋಪಾಲಾಚಾರ್ಯ ಕಟ್ಟಿಯವರು ಐನಾಪೂರದ ಇನ್ನೋರ್ವ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಅಪ್ಪಟ ಗಾಂಧೀವಾದಿಗಳು, ಸರಳ ಜೀವಿಗಳು.

ಜನನ : ೧೯೧೦ ರಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಐನಾಪೂರದಲ್ಲಿ ಜನಿಸಿದರು. ತಂದೆಯ ಹೆಸರು ಗೋಪಾಲಾಚಾರ್ಯ ಕಟ್ಟಿ ಮತ್ತು ತಾಯಿ ರಂಗೂಬಾಯಿ ಕಟ್ಟಿಯವರು.

ಕೌಟುಂಬಿಕ ಹಿನ್ನಲೆ : ಶ್ರೀನಿವಾಸಾಚಾರ್ಯರ ಹಿರಿಯರು ಮೂಲತಃ ಐನಾಪೂರ ಗ್ರಾಮದವರು. ಇವರ ತಂದೆ ತಾಯಿಗಳಿಗೆ ೪ ಜನ ಮಕ್ಕಳು. ಅವರಲ್ಲಿ ಇವರೇ ಹಿರಿಯವರು. ಇವರಿಗೆ ಕೃಷ್ಣಾಜಿ ಎಂಬ ಓರ್ವ ಸಹೋದರರು ಮತ್ತು ಇಬ್ಬರು ಸಹೋದರಿಯರಿದ್ದರು. ಒಬ್ಬರ ಹೆಸರು ಸುಶೀಲಾಬಾಯಿ ಇನ್ನೊಬ್ಬರ ಹೆಸರು ತಿಳಿದು ಬಂದಿಲ್ಲ.

ಶ್ರೀನಿವಾಸಾಚಾರ್ಯರ ಧರ್ಮಪತ್ನಿ ಶ್ರೀಮತಿ ಇಂದಿರಾಬಾಯಿ ಕಟ್ಟಿ ಈ ದಂಪತಿಗಳಿಗೆ ಗೋಪಾಲ ಎಂಬ ಓರ್ವ ಪುತ್ರ ಮತ್ತು ಸುಲಭಾ, ಚಿತ್ರಾ ಮತ್ತು ವಿಭಾ ಎಂಬ ಮೂವರು ಪುತ್ರಿಯರಿದ್ದಾರೆ. ಸುಲಭಾ ಎಂಬುವವರು ತಾಸಗಾವಿನ ಜಿಲ್ಲಾ ಪಂಚಾಯತ ಆಫೀಸಿನಲ್ಲಿ ನೌಕರಿಯಲ್ಲಿದ್ದಾರೆ. ಶ್ರೀನಿವಾಸಾಚಾರ್ಯರು ಒಕ್ಕಲುತನದ ಜೊತೆಗೆ ಸಿಂಪಗಿತನವನ್ನು ಮಾಡುತ್ತಿದ್ದರು.

ಶಿಕ್ಷಣ : ಇವರು ಪ್ರಾಥಮಿಕ, ಮಾಧ್ಯಮಿಕ ಮತ್ತು ಮ್ಯಾಟ್ರಿಕ್ ಶಿಕ್ಷಣವನ್ನು ಐನಾಪೂರದಲ್ಲಿಯೇ ಮುಗಿಸಿದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಪ್ರೇರಣೆ :

ಮೊದಲಿನಿಂದಲೂ ದೇಶದ ಸಲುವಾಗಿ ಹೋರಾಡಿದ ಕನ್ನಡ ಕಲಿಗಳ ಪ್ರಭಾವ ಇವರ ಮೇಲಾಗಿತ್ತು. ತಾವೂ ಭಾರತ ಮಾತೆಯ ಸೇವೆ ಮಾಡಬೇಕೆಂಬ ಉದ್ದೇಶದಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು.

ಸ್ವಾತಂತ್ರ್ಯ ಚಳುವಳಿಗೆ ಕೊಡುಗೆ :

ಶ್ರೀನಿವಾಸಾಚಾರ್ಯರು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡವರು. ಕಾರಾಗೃಹವಾಸವನ್ನು ಅನುಭವಿಸಿದರೂ ಸಹ ತಮ್ಮ

ಹೋರಾಟವನ್ನು ಮುಂದುವರೆಸಿದರು. ಧ್ವಜಾರೋಹಣ ಮಾಡುವುದು, ಕಾನೂನು ಭಂಗ ಮಾಡುವುದು, ಬೇರೆ ಊರುಗಳಿಂದ ಬಂದ ಚಳುವಳಿಗಾರರಿಗೆ ವ್ಯವಸ್ಥೆ ಮಾಡುವುದು ಮುಂತಾದವುಗಳು ಇವರ ಕಾರ್ಯಗಳಾಗಿದ್ದವು. ನೆರೆಯ ಅಥಣಿ, ಅಡಹಳ್ಳಿ, ಐಗಳಿ, ಸತ್ತಿ, ಸಪ್ತಸಾಗರ, ಶೇಡಬಾಳ, ಕಾಗವಾಡ, ಗಣೇಶವಾಡಿಯ ಜನರೊಂದಿಗೆ ಕಾರ್ಯ ಮಾಡಿದರು.

“೧೯೩೦ ಜನೇವರಿ ೨೬ ರಂದು ನಮ್ಮ ಊರಾದ ಅಥಣಿ ತಾಲೂಕಿನ ಐನಾಪೂರದಲ್ಲಿ ಧ್ವಜಾರೋಹಣ ಮಾಡಿದೆವು. ನಾರಾಯಣರಾವ್ ದೇಶಪಾಂಡೆ, ಮಧ್ವರಾವ್ ಮುತಾಲೀಕ್, ವ್ಯಾಸರಾವ್ ಮುತಾಲೀಕ, ಬೋಗಾರ ವಕೀಲ ಮತ್ತು ನಾನು ಮಾತ್ರ ಇದರಲ್ಲಿ ಪಾಲುಗೊಂಡವರು”[೨೨] ಎಂದು ಹೇಳಿದ್ದಾರೆ.

ನೆರೆಯ ಊರುಗಳಲ್ಲಿ ರಾಷ್ಟ್ರೀಯತೆಯ ಪ್ರಚಾರವನ್ನು ಮಾಡಿದ್ದರು. ಅಡಹಳ್ಳಿ, ಐಗಳಿ, ರಾಮತೀರ್ಥ, ಸವದಿ ಮತ್ತು ಐನಾಪೂರದ ಹೋರಾಟಗಾರರ ಜೊತೆಗೂಡಿ ಕೆಲಸ ಮಾಡಿದರು.

“ನಾನೂ ಮತ್ತು ನಾರಾಯಣ ದೇಶಪಾಂಡೆ ಇವರು ಕೂಡಿ ಊರಲ್ಲಿ ‘ಯೂಥ್ ಲೀಗ್’ ಸ್ಥಾಪಿಸಿ ಅದರ ಮುಖಾಂತರ ನೆರೆ ಊರುಗಳಲ್ಲಿ ವಿಶೇಷತಃ ಮಂಗಸೂಳಿ, ಸಪ್ತಸಾಗರಗಳಲ್ಲಿ ರಾಷ್ಟ್ರೀಯತೆಯ ಪ್ರಚಾರ ಮಾಡಿದೆವು”[೨೩] ಎಂದು ಹೇಳಿದ್ದಾರೆ.

ಗುರುಮಾಸ್ತರ ಜೇರೆಯವರಿಂದ ತರಬೇತಿಯನ್ನು ಪಡೆದಿದ್ದರು. ಐನಾಪೂರದಲ್ಲಿ ಯುವಕರಿಗೆ ತರಬೇತಿ ನೀಡಿದರು.

“೧೯೩೨ ರಲ್ಲಿ ನಾನು ಜೈಲಿಗೆ ಹೋಗದೆ ಕೆಲಸ ಮಾಡಬೇಕೆಂದು ಮೇಲಿನವರು ಸೂಚಿಸಿದ್ದರಿಂದ ಮಂಗಸೂಳಿಯ ಶಿವರಾಮ ಕೋಷ್ಟಿ ಮತ್ತು ರಾವಜಿ ಪೂಜಾರಿ ಇವರನ್ನು ನಮ್ಮ ಊರಿನಲ್ಲಿ ಕರೆತಂದು ೨೮-೨-೩೨ ರಂದು ಝುಂಡಾವಂದನೆ ಮಾಡಿಸಿ ಕಾನೂನು ಮುರಿಯಲು, ೨-೩-೩೨ ರಂದು ಅವರನ್ನು ಬಂಧಿಸಿದರಲ್ಲದೆ ಎಂ.ಆರ್. ಮುತಾಲೀಕ ಹಾಗೂ ನನ್ನನ್ನು ಬಂಧಿಸಿದರು. ನಾರಾಯಣ ದೇಶಪಾಂಡೆಯವರ ಮೇಲೆ ವಾರಂಟ ಇದ್ದರೂ ಅವರು ಸಿಗಲಿಲ್ಲ. ಬೆಳಗಾವಿಯಲ್ಲಿ ಖಟ್ಲೆ ನಡೆದಾಗ ಕೋಷ್ಟಿ ಮತ್ತು ಪೂಜಾರಿ ಇಬ್ಬರೂ “ನಾವು ಸ್ವಂತ ಪ್ರೇರಣೆಯಿಂದ ಕಾನೂನು ಭಂಗ ಮಾಡಿದೆವು. ಇವರುಗಳ ಪ್ರೇರಣೆ ಇರಲಿಲ್ಲ ಎಂದು ಹೇಳಿಕೆ ಕೊಡಲು ೧೯-೩-೩೨ ರಂದು ನಮ್ಮ ಬಿಡುಗಡೆಯಾಯಿತು”[೨೪] ಎಂದು ಬರೆದಿದ್ದಾರೆ.

ಇವರು ರಾತ್ರಿ ರೈತ ಜನರನ್ನು ಸೇರಿಸಿ ಅವರಿಗೆ ಪಾಠ ಹೇಳುತ್ತಿದ್ದರು. ಪಾಶ್ಚಾಪೂರದ ಜೋಶಿಯವರು ಮತ್ತು ಅಂಕಲಗಿಯ ಪಾಟೀಲರು ಜಮಖಂಡಿಯ ಸಾಬಡೆಯವರು ಇವರ ಮಿತ್ರರಾಗಿದ್ದರು.

ಇವರು ಸಾದಾ ಜೀವಿಗಳಾಗಿದ್ದರು. ಕಡೆಯವರೆಗೂ ಖಾದಿಧಾರಿಗಳಾಗಿಯೇ ಉಳಿದರು. ಅಣ್ಣೂಗುರೂಜಿ, ಐನಾಪೂರದ ದೇಶಪಾಂಡೆ ಗುರುಗಳು ಮತ್ತು ನಾರಾಯಣ ದೇಶಪಾಂಡೆಯವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಿದರು. ದೇಶಕ್ಕಾಗಿ ಕೊಡುಗೆ ನೀಡಿದ ಈ ಮಹಾನ್ ಹೋರಾಟಗಾರರು ೧೯೯೯ ರಲ್ಲಿ ಇಹಲೋಕವನ್ನು ತ್ಯಜಿಸಿದರು.

೪.೭ ರಾಮಚಂದ್ರ ಅನಂತರಾವ್ ಪತಕಿ :

ಭಾರತದಲ್ಲಿ ಬ್ರಿಟೀಷರ ವಿರುದ್ಧ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗಿಯಾಗಿದ್ದ ಐನಾಪೂರದ ಇನ್ನೋರ್ವ ಸ್ವಾತಂತ್ರ್ಯ ಹೋರಾಟಗಾರರು ರಾಮಚಂದ್ರ ಪತಕಿಯವರು.

ಜನನ : ರಾಮಚಂದ್ರ ಪತಕಿಯವರು ತಮ್ಮ ತಾಯಿಯ ತವರೂರಾದ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಮಂಗಸೂಳಿ ಗ್ರಾಮದಲ್ಲಿ ೧೯೧೧ ರ ಫೆಬ್ರುವರಿ ೧೫ ರಂದು ಜನಿಸಿದರು. ಇವರ ತಂದೆ ಅನಂತರಾವ್ ಪತಕಿ ಮತ್ತು ತಾಯಿ ಶ್ರೀಮತಿ ರಾಧಾಬಾಯಿ ಪತಕಿಯವರು.

ಕೌಟುಂಬಿಕ ಹಿನ್ನಲೆ : ರಾಮಚಂದ್ರ ಪತಕಿಯವರ ತಂದೆಯವರು ಕೃಷಿಕರಾಗಿದ್ದರು. ಇವರ ತಂದೆ-ತಾಯಿಗಳಿಗೆ ಒಟ್ಟು ಆರು ಜನ ಮಕ್ಕಳು ಅವರಲ್ಲಿ ಇವರೇ ಹಿರಿಯರು. ಇವರಿಗೆ ಹಣಮಂತರಾವ್, ವಾಮನರಾವ್, ಬಿಂದೂರಾವರ ಎಂಬ ಮೂವರು ಸಹೋದರರು ಮತ್ತು ಕೌಸಲ್ಯಾ ಮತ್ತು ಲಕ್ಷ್ಮೀಬಾಯಿ ಎಂಬ ಇಬ್ಬರು ಸಹೋದರಿಯರಿದ್ದಾರೆ.

ಶಿಕ್ಷಣ : ರಾಮಚಂದ್ರ ಪತಕಿಯವರು ಐನಾಪೂರದಲ್ಲಿಯೇ ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಪಡೆದರು. ಉನ್ನತ ಶಿಕ್ಷಣವನ್ನು ಅಂದರೆ ಬಿ.ಎ. ವರೆಗಿನ ಶಿಕ್ಷಣವನ್ನು ಕೊಲ್ಹಾಪೂರದ ರಾಜಾರಾಂ ಕಾಲೇಜಿನಲ್ಲಿ ಪಡೆದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಪ್ರೇರಣೆ :

ಮಹಾತ್ಮಾ ಗಾಂಧೀಜಿಯವರ ಜೀವನ ಮತ್ತು ಆದರ್ಶಗಳಿಮದ ಸ್ಫೂರ್ತಿ ಪಡೆದು, ಬಿ.ಎ. ಅಂತಿಮ ವರ್ಷದಲ್ಲಿ ಅಧ್ಯಯನ ಮಾಡುತ್ತಿದ್ದಾಗ ಅವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು.

ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆ :

ಪತಕಿಯವರು ಸಾದಾ, ಸರಳ ಜೀವಿಗಳಾಗಿದ್ದರು. ಅಪ್ಪಟ ಗಾಂಧೀವಾದಿಗಳಾಗಿದ್ದರು. ಕಡೆಯವರೆಗೂ ಬ್ರಹ್ಮಚಾರಿಗಳಾಗಿಯೇ ಉಳಿದು ದೇಶಸೇವೆಗಾಗಿ ಜೀವನ ಮೀಸಲಿಟ್ಟರು. ಚಳುವಳಿಯಲ್ಲಿ ಭಾಗಿಯಾಗಿ ಜೈಲುವಾಸವನ್ನು ಅನುಭವಿಸಿದರು.

ಕೆಲಕಾಲ ಗಾಂಧೀಜಿಯವರ ಸಾಬರಮತಿ ಆಶ್ರಮದಲ್ಲಿದ್ದರು. ಭೂದಾನ ಚಳುವಳಿಯಲ್ಲಿ ವಿನೋಭಾ ಭಾವೆಯವರೊಂದಿಗೆ ಹುಬ್ಬಳ್ಳಿಯಿಂದ ಮೈಸೂರವರೆಗೆ ಪಾದಯಾತ್ರೆ ಕೈಗೊಂಡಿದ್ದರು.[೨೫]

ಹೀಗೆ ಗಾಂಧೀಜಿ ಮತ್ತು ವಿನೋಭಾ ಭಾವೆಯವರೊಂದಿಗೆ ಪತಕಿಯವರು ಆತ್ಮೀಯ ಒಡನಾಟ ಹೊಂದಿದ್ದರು. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಕರಪತ್ರ ಹಂಚುವುದು, ಸೆರೆ ಅಂಗಡಿಗಳನ್ನು ಮುಚ್ಚುವುದು. ಮುಂತಾದವು ಇವರ ಕಾರ್ಯಗಳಾಗಿದ್ದವು. ಹಳ್ಳಿ-ಹಳ್ಳಿಗಳಿಗೆ ಹೋಗಿ ಜನರಲ್ಲಿ ಬ್ರಿಟೀಷರ ವಿರುದ್ಧ ಜಾಗೃತಿಯನ್ನುಂಟು ಮಾಡಿದರು. ಹೀಗೆ ಬ್ರಿಟೀಷರಿಗೆ ತಲೆನೋವಾಗಿ ಪರಿಣಮಿಸಿದ್ದರು.

ಇವರ ಕಾರ್ಯಗಳು ಬ್ರಿಟೀಷರ ಕೆಂಬಣ್ಣಿಗೆ ಗುರಿಯಾಗುವಂತೆ ಮಾಡಿದವು. ಇವರನ್ನು ಸೆರೆಮನೆಗೆ ಸೇರಿಸಿದರು. ಆರು ತಿಂಗಳು ಸೆರೆವಾಸವನ್ನು ಕುಡಚಿಯಲ್ಲಿ ಕಳೆದರು. ಅನಂತರ ಇವರನ್ನು ಹುಬ್ಬಳ್ಳಿಯ ಸೆರೆಮನೆಗೆ ವರ್ಗಾಯಿಸಲಾಯಿತು. ಗೋವಾದಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಸೇವಾದಳದ ನಾಯಕರಾಗಿದ್ದರು.[೨೬]

ನಿಜಲಿಂಗಪ್ಪ, ರಾಮಕೃಷ್ಣ ಹೆಗಡೆ, ಬಿ.ಡಿ. ಜತ್ತಿ, ಹಳ್ಳಿಕೇರಿ ಗುದ್ಲೆಪ್ಪಾ, ಆರ್. ಆರ್. ದಿವಾಕರ ಮುಂತಾದವರೊಂದಿಗೆ ಆತ್ಮೀಯ ಸಂಬಂಧವನ್ನು ಹೊಂದಿದ್ದರು.

ಇವರು ಸೇವಾ ಮನೋಭಾವನೆಯ ವ್ಯಕ್ತಿಯಾಗಿದ್ದರು. ಇವರು ಹುದಲಿಯ ಕುಮರಿ ಆಶ್ರಮದಲ್ಲಿದ್ದಾಗ ಗಂಗಾಧರರಾವ್ ದೇಶಪಾಂಡೆ ಮತ್ತು ಗಡಿನಾಡ ಗಾಂಧಿ ಎಂದೇ ಪ್ರಸಿದ್ಧರಾದ ಖಾನ್ ಅಬ್ದುಲ್ ಗಫಾರ್ ಖಾನ್‌ರಿಂದ ತಮ್ಮ ಸೇವಾ ಮನೋಭಾವನೆಗೆ ಮೆಚ್ಚುಗೆಯನ್ನು ಪಡೆದುಕೊಂಡಿದ್ದರು.

ಸಾಮಾಜಿಕ ಕಾರ್ಯಗಳು : ಪತಕಿಯವರು ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಿದ್ದಾರೆ. ಹರಿಜನ ಕೇರಿಯಲ್ಲಿ ಸಫಾಯಿ ಕಾರ್ಯಗಳನ್ನು ಮಾಡುತ್ತಿದ್ದರು. ಆದ್ದರಿಂದ ಇವರು ಹುಬ್ಬಳ್ಳಿ ಗಾಂಧೀ ಎಂದೇ ಪ್ರಸಿದ್ಧರಾದರು. ಹುಬ್ಬಳ್ಳಿಯಲ್ಲಿ 'ವಿದ್ಯಾರಣ್ಯ' ಎಂಬ ವಾಚನಾಲಯದಲ್ಲಿ ಕಾರ್ಯ ನಿರ್ವಹಿಸಿದರು. ಅಲ್ಲಿ ಕಸ ಗುಡಿಸುವುದರಿಂದ ಹಿಡಿದು ಪುಸ್ತಕ ಕೊಡುವವರೆಗಿನ ಎಲ್ಲ ಕಾರ್ಯಗಳನ್ನು ಇವರೇ ಮಾಡುತ್ತಿದ್ದರು.

ಹುಬ್ಬಳ್ಳಿಯಲ್ಲಿದ್ದಾಗ ಪುರಂದರ ಉತ್ಸವ, ಗಣೇಶ ಉತ್ಸವ, ಕನಕ ಉತ್ಸವ ಮತ್ತು ನಾಡ ಹಬ್ಬಗಳನ್ನು ಆಚರಿಸುತ್ತಿದ್ದರು. ನಾಟಕಗಳನ್ನು ಬರೆದು ಅದರಲ್ಲಿ ಪಾತ್ರ ವಹಿಸುತ್ತಿದ್ದರು. ಹುಬ್ಬಳ್ಳಿಯಲ್ಲಿ ಕುಲಕರ್ಣಿ ಹಕ್ಕಲ, ಮಾಲಾಲಿ ಜೋಪಡಿಗಳಲ್ಲಿ ರಾತ್ರಿ ಶಾಲೆಗಳನ್ನು ನಡೆಸಿದರು. ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳು ಮತ್ತು ರಾಜ್ಯ ಯುವ ಕಾಂಗ್ರೆಸ್ಸಿನ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದರು. ಹುಬ್ಬಳ್ಳಿಯ ನ್ಯೂ ಇಂಗ್ಲೀಷ್ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಕಾಲ ಮತ್ತು ಐನಾಪೂರ ಹೈಸ್ಕೂಲದಲ್ಲಿಯೂ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ.

ಗೋವಾ ವಿಮೋಚನಾ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದರು.[೨೭] ಊರಿನ ರಸ್ತೆಗಳನ್ನು ಸ್ವಚ್ಛ ಮಾಡುವ ಕಾರ್ಯಗಳನ್ನು ಮಾಡುತ್ತಿದ್ದರು. ಐನಾಪುರದಲ್ಲಿ ದೂರವಾಣಿ ಮತ್ತು ನಳದ ನೀರಿನ ವ್ಯವಸ್ಥೆಯನ್ನು ಮಾಡಲು ಪ್ರಯತ್ನಿಸಿ ಅವರಲ್ಲಿ ಯಶಸ್ವೀಯಾದರು. ಬದುಕಿನುದ್ದಕ್ಕೂ ಶಾಂತಿ, ಅಹಿಂಸೆ ಮತ್ತು ನಿರಪೇಕ್ಷ ಭಾವನೆ ಮುಂತಾದ ಗುಣಗಳನ್ನು ಅಳವಡಿಸಿಕೊಂಡು ಬಂದರು. ಸರಳಜೀವಿ, ಪರೋಪಕಾರಿ, ಉದಾರವಾದಿಗಳಾಗಿದ್ದರು. ತಮ್ಮ ಹೊಲ, ಮನೆ, ಹಣವನ್ನೆಲ್ಲಾ ದೇಶಕ್ಕಾಗಿ ನೀಡಿದ ಮಹಾನ್ ತ್ಯಾಗಿ ಪತಕಿಯವರು.

ದೇಶಕ್ಕಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ ಗಾಂಧೀವಾದಿ, ಪದವಿ, ಪ್ರತಿಷ್ಠೆಗಾಗಿ ತಲೆ ಕೆಡಿಸಿಕೊಳ್ಳದೇ ನಿಸ್ವಾರ್ಥ ಭಾವದಿಂದ ಸೇವೆ ಸಲ್ಲಿಸಿದ, ಶಿಸ್ತುಬದ್ಧ ಜೀವನ, ನೇರ ನುಡಿಯ ವ್ಯಕ್ತಿ, ಎಲೆಯ ಮರೆಯ ಕಾಯಿಯಂತಿದ್ದರು. ಪತಕಿಯವರ ಆಸ್ತಿಯೆಂದರೆ ಎರಡು ಖಾದಿ ಕುರ್ತಾ, ಪಾಯಿಜಾಮ, ಲುಂಗಿ, ಪಂಚೆ. ಆದರೂ ಸಂತೃಪ್ತಿ ಸಮಾಧಾನದ ಬದುಕು. ಇಂತಹ ಅಪರೂಪದ ಚೇತನ ಜನೇವರಿ ೭, ೨೦೦೮ ರಂದು ಅಸ್ತಂಗತವಾಯಿತು.

೪.೮ ಲಕ್ಷ್ಮಣ ರಾಮಪ್ಪಾ ಪಾರಶೆಟ್ಟಿ :

ಬ್ರಿಟೀಷರ ಕಪಿಮುಷ್ಠಿಯಿಂದ ಭಾರತ ಮಾತೆಯನ್ನು ಬಿಡುಗಡೆಗೊಳಿಸಲು ಹೋರಾಡಿದ ಅನೇಕ ವೀರ ಪುತ್ರರಲ್ಲಿ ಶ್ರೀ ಲಕ್ಷ್ಮಣ ರಾಮಪ್ಪಾ ಪಾರಶೆಟ್ಟಿಯವರೂ ಒಬ್ಬರು. ಕಡೆಯವರೆಗೂ ಖಾದಿಧಾರಿಗಳಾಗಿಯೇ ಉಳಿದು ಅಪ್ಪಟ ಗಾಂಧೀವಾದಿಗಳಾಗಿದ್ದವರು.

ಜನನ : ಲಕ್ಷ್ಮಣ ರಾ. ಪಾರಶೆಟ್ಟಿಯವರು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಐನಾಪೂರದಲ್ಲಿ ೧೯೧೧ ರಲ್ಲಿ ಜನಿಸಿದರು. ಇವರ ತಂದೆ ಶ್ರೀ ರಾಮಪ್ಪಾ ಪಾರಶೆಟ್ಟಿಯವರು ಮತ್ತು ತಾಯಿ ಶ್ರೀಮತಿ ನಾಗವ್ವಾ ರಾ. ಪಾರಶೆಟ್ಟಿಯವರು.

ಕೌಟುಂಬಿಕ ಹಿನ್ನಲೆ : ಲಕ್ಷ್ಮಣ ಪಾರಶೆಟ್ಟಿಯವರ ಹಿರಿಯರು ಐನಾಪೂರದವರು. ಇಲ್ಲಿಯೇ ಒಕ್ಕಲುತನವನ್ನು ಮಾಡಿಕೊಂಡಿದ್ದರು. ಇವರು ತಂದೆ-ತಾಯಿಗಳಿಗೆ ಇವರೊಬ್ಬರೆ ಮಗ. ಇವರು ಒಕ್ಕಲುತನದ ಜೊತೆಗೆ ಕಿರಾಣಿ ವ್ಯಾಪಾರಸ್ಥರೂ ಆಗಿದ್ದರು. ಲಕ್ಷ್ಮಣ ಪಾರಶೆಟ್ಟಿಯವರ ಧರ್ಮಪತ್ನಿ ಶ್ರೀಮತಿ ಆವುಬಾಯಿ ಪಾರಶೆಟ್ಟಿ. ಈ ದಂಪತಿಗಳಿಗೆ ಸಿದ್ದಪ್ಪಾ, ಅಣ್ಣಾ ಸಾಹೇಬ, ಅಶೋಕ ಮತ್ತು ಅರುಣ ಎಂಬ ನಾಲ್ವರು ಪುತ್ರರು. ಸುಶೀಲಾ ಮತ್ತು ವಿಜಯಾ ಎಂಬ ಇಬ್ಬರು ಪುತ್ರಿಯರು ಇದ್ದಾರೆ. ಹಿರಿಯ ಮಗನಾದ ಸಿದ್ದಪ್ಪಾ ಇವರು ಈಗ ಒಕ್ಕಲುತನವನ್ನು ಮಾಡುತ್ತಿದ್ದು, ಕಿರಿಯ ಮಗನಾದ ಅಶೋಕ ಎಂಬುವವರು ಬೆಳಗಾವಿಯ ಹಿಂಡಾಲ ಕಾರ್ಖಾನೆಯಲ್ಲಿ ನೌಕರಿಯನ್ನು ಮಾಡುತ್ತಿದ್ದಾರೆ.

ಶಿಕ್ಷಣ : ಇವರು ಎಳನೇ ಇಯತ್ತೆಯವರೆಗೆ ಶಿಕ್ಷಣವನ್ನು ಐನಾಪೂರದಲ್ಲಿಯೇ ಪಡೆದುಕೊಂಡರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಪ್ರೇರಣೆ :

ಮಹಾತ್ಮಾ ಗಾಂಧೀಜಿಯವರಿಂದ ಪ್ರಭಾವಿತರಾಗಿ ಅವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಅಥಣಿಗೆ ಭೇಟಿ ನೀಡಿದ್ದ ತಿಲಕ ಮತ್ತು ಸರ್ದಾರ್ ಪಟೇಲರ ಪ್ರಭಾವವೂ ಇವರ ಮೇಲಾಗಿತ್ತು.

ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆ :

ದೇಶದೆಲ್ಲೆಡೆ ಸ್ವಾತಂತ್ರ್ಯ ಚಳುವಳಿಯು ಭರದಿಂದ ನಡೆಯುತ್ತಿದ್ದಾಗ ಇವರೂ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದರು. ಕಾಂಗ್ರೆಸ್ಸ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದ ಶ್ರೀ ಲಕ್ಷ್ಮಣ ಪಾರಶೆಟ್ಟಿಯವರು ಅನೇಕ ಬ್ರಿಟೀಷ್ ವಿರೋಧಿ ಕಾರ್ಯಗಳನ್ನು ಮಾಡಿದರು.

೧೯೩೨ ರ ಫೆಬ್ರುವರಿ ೫ ರಂದು ಇವರು ಧ್ವಜಾರೋಹಣದಲ್ಲಿ ಭಾಗವಹಿಸಿದ್ದರಿಂದ ಕಾಯಿದೆ ಭಂಗ ಮಾಡಿದರೆಂದು ಇವರನ್ನು ಅರೆಸ್ಟ್ ಮಾಡಿ ಕಾರಾಗೃಹ ಶಿಕ್ಷೆಯನ್ನು ವಿಧಿಸಲಾಯಿತು.

೧೯೩೨ ರ ಫೆಬ್ರುವರಿ ೬ ರಿಂದ ೧೯೩೨ ರ ಜೂನ್ ೪ ರವರೆಗೆ ಹಿಂಡಲಗಾ ಜೈಲಿನಲ್ಲಿದ್ದರು. ಸುಮಾರು ೪ ತಿಂಗಳುಗಳವರೆಗೆ ಸೆರೆಮನೆ ವಾಸವನ್ನು ಅನುಭವಿಸಿದರು. ಇವರೊಂದಿಗೆ ಶ್ರೀ ರಾಮಭಟ್ ಜೋಶಿ ಸಾ॥ ಕೊಕಟನೂರರವರು ಸಹಕಾರಾಗೃಹವಾಸದಲ್ಲಿದ್ದರು.[೨೭]

ತಾರ-ತಂತಿ ಕತ್ತರಿಸುವುದು, ಸೆರೆ ಅಂಗಡಿಗಳನ್ನು ಬಂದು ಮಾಡುವುದು ಇವರ ಇನ್ನಿತರ ಕಾರ್ಯಚಟುವಟಿಕೆಗಳಾಗಿದ್ದವು. ದೇಶಕ್ಕಾಗಿ ಎಷ್ಟೇ ಕಷ್ಟಗಳು ಎದುರಾದರೂ ಅವುಗಳನ್ನು ನಗುಮೊಗದಿಂದ ಎದುರಿಸಿದರು. ಸರ್ಕಾರ ನೀಡುವ ಪಿಂಚಣಿಯನ್ನು ಇವರು ಪಡೆದಿದ್ದರೂ ಅದನ್ನು ಧರ್ಮಾರ್ಥ ಕಾರ್ಯಗಳಿಗಾಗಿ ಉಪಯೋಗಿಸಿದ್ದು ಅವರ ನಿಸ್ವಾರ್ಥ ಜೀವನಕ್ಕೆ ಸಾಕ್ಷಿ. ಜೀವನ ಪೂರ್ತಿ ಗಾಂಧೀವಾದಿಗಳಾಗಿ, ಖಾದಿ ಬಟ್ಟೆಗಳನ್ನು ತೊಟ್ಟು ಗಾಂಧೀಜೀಯವರ ಮಾರ್ಗದರ್ಶನದಂತೆಯೇ ಜೀವನ ಸಾಗಿಸಿದರು. ಇಂತಹ ಒಬ್ಬ ಮಹಾನ್ ದೇಶಭಕ್ತರು ಡಿಸೆಂಬರ್ ೧೬, ೨೦೧೦ ರಂದು ಇಹಲೋಕವನ್ನು ತ್ಯಜಿಸಿದರು.

ಸಾಮಾಜಿಕ ಕಾರ್ಯಗಳು:

ಲಕ್ಷ್ಮಣ ರಾ. ಪಾರಶೆಟ್ಟಿಯವರು ನಿಸ್ವಾರ್ಥ ಜೀವನ. ಅವರು ಕೇವಲ ತಮ್ಮ ಕುಟುಂಬಕ್ಕಾಗಿ ದುಡಿಯದೇ ಸಮಾಜಕ್ಕಾಗಿ ದುಡಿದವರು. ಇದಕ್ಕೆ ಅವರ ಸೇವಾ ಕಾರ್ಯಗಳೇ ಸಾಕ್ಷಿ.

ಬೆಳಗಾವಿಯ ವೈಭವ ನಗರದಲ್ಲಿರುವ ಗಣಪತಿ ಗುಡಿಗೆ ಧನಸಹಾಯವನ್ನು ಮಾಡಿದರು. ಅದೂಅಲ್ಲದೆ ಐನಾಪುರದ ಗ್ರಾಮದೇವತೆ ಶ್ರೀ ಸಿದ್ಧೇಶ್ವರನ ದೇವಸ್ಥಾನದಲ್ಲಿ ಒಂದು ಪವಳಿಯನ್ನು ಕಟ್ಟಲು ಧನಸಹಾಯವನ್ನು ಮಾಡಿದರು.

ಇವರೊಬ್ಬ ಸರಳ ಜೀವಿ ಮತ್ತು ಆಧ್ಯಾತ್ಮಜೀವಿಗಳಾಗಿದ್ದರು. ಇವರ ನಿಸ್ವಾರ್ಥ ಸೇವೆಯನ್ನು ಗುರುತಿಸಿ ಹಲವಾರು ಸಂಘ-ಸಂಸ್ಥೆಗಳು ಸನ್ಮಾನವನ್ನು ಮಾಡಿವೆ. ಬೆಳಗಾವಿಯ ವೈಭವ ನಗರದವರು ಸತ್ಕಾರ ಸಮಾರಂಭ ಏರ್ಪಡಿಸಿದ್ದರು. ಬೆಳಗಾವಿಯ ಲಯನ್ಸ್ ಕ್ಲಬ್ ದಿನಾಂಕ ಡಿಸೆಂಬರ ೩೧, ೧೯೯೯ ರಂದು ಬೆಳಗಾವಿಯಲ್ಲಿ ಸತ್ಕರಿಸಿದ್ದಾರೆ.

೪.೯ **ಶಿವಪ್ಪಾ ಗೂಳಪ್ಪಾ ಚೌಗಲೆ (ಮಸರಗುಪ್ಪಿ) :**

ಶಿವಪ್ಪಾ ಗೂಳಪ್ಪಾ ಮಸರಗುಪ್ಪಿಯವರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಟ ಮಾಡಿದ ಸ್ವಾತಂತ್ರ್ಯ ಹೋರಾಟಗಾರರು. ಇವರು ಗಾಂಧಿವಾದಿಗಳು ಮತ್ತುಸರಳ ಜೀವಿಗಳಾಗಿದ್ದರು.

ಜನನ : ಶಿವಪ್ಪಾ ಚೌಗಲೆಯವರು ೧೯೧೭ ರಲ್ಲಿ ಅಥಣಿತಲೂಕಿನ ಐನಾಪೂರದಲ್ಲಿ ಜನಿಸಿದರು. ಇವರ ತಂದೆಯ ಹೆಸರು ಗೂಳಪ್ಪಾ ಚೌಗಲೆ ಮತ್ತು ತಾಯಿಯ ಹೆಸರು ಶ್ರೀಮತಿ ಲಗಮವ್ವಾ ಗೂ. ಚೌಗಲೆ.

ಕೌಟುಂಬಿಕ ಹಿನ್ನಲೆ : ಇವರ ಹಿರಿಯರು ಮಸರಗುಪ್ಪಿ ಎಂಬ ಊರಿಂದ ಬಂದು ಐನಾಪುರದಲ್ಲಿಯೇ ನೆಲೆಸಿದರು. ಇವರ ತಂದೆಯವರು ಒಕ್ಕಲುತನವನ್ನು ಮಾಡುತ್ತಿದ್ದರು. ಶಿವಪ್ಪಾ ಚೌಗಲೆಯವರಿಗೆ ಭೀಮಪ್ಪಾ ಚೌಗಲೆ ಎಂಬ ಓರ್ವ ಸಹೋದರ ಮತ್ತು ಸಾವಿತ್ರಿ, ತಂಗೆವ್ವಾ ಎಂಬ ಸಹೋದರಿಯರಿದ್ದರು. ಶಿವಪ್ಪಾ ಚೌಗಲೆಯವರ ಧರ್ಮಪತ್ನಿ ಸೋನಾಬಾಯಿ ಶಿ. ಚೌಗಲೆಯವರು. ಇವರಿಗೆ ಗೂಳಪ್ಪಾ ಮತ್ತಿ ಗಿರಿಮಲ್ಲಪ್ಪಾ ಎಂಬ ಇಬ್ಬರು ಪುತ್ರರು ಮತ್ತು ಭಾಗೀರಥಿ, ಕಲಾವತಿ ಎಂಬ ಇಬ್ಬರು ಪುತ್ರಿಯರೂ ಇದ್ದಾರೆ. ಶಿವಪ್ಪ ಚೌಗಲೆಯವರು ಒಕ್ಕಲುತನದ ಜೊತೆಗೆ ಕಿರಾಣಿ ಅಂಗಡಿಯನ್ನು ನಡೆಸುತ್ತಿದ್ದರು.

ಶಿಕ್ಷಣ : ಏಳನೇ ಇಯತ್ತೆಯವರೆಗೆ ಶಿಕ್ಷಣವನ್ನು ಐನಾಪೂರದಲ್ಲಿಯೇ ಪಡೆದುಕೊಂಡಿದ್ದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾಗಲು ಪ್ರೇರಣೆ : ಗಾಂಧೀಜಿಯವರು ಮತ್ತು ದೇಶಪಾಂಡೆ ಗುರುಗಳ ಪ್ರಭಾವದಿಂದ ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು.

ಸ್ವಾತಂತ್ರ್ಯ ಚಳುವಳಿಗೆ ಕೊಡುಗೆ :

ಶಿವಪ್ಪಾ ಚೌಗಲೆಯವರು ಬ್ರಿಟೀಷರ ವಿರುದ್ಧದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದರು. ಸೆರೆಮನೆ ವಾಸವನ್ನು ಅನುಭವಿಸಿದರು.

ಸಿಂಧಿಗಿಡ ಕಡಿಯುವುದು ಮತ್ತು ತಂತಿ ಕತ್ತಿರಿಸುವ ಕೆಲಸಗಳಲ್ಲಿ ಗ್ರಾಮದ ಸ್ವಾತಂತ್ರ್ಯ ಹೋರಾಟಗರರ ಜೊತೆ ಭಾಗವಹಿಸಿದ್ದರು. ಕಾಯಿದೆಭಂಗ ಮಾಡಲು ಇವರನ್ನು ಬಂಧಿಸಿ ಬೆಳಗಾವಿಯ ಕೇಂದ್ರ ಕಾರಾಗೃಹದಲ್ಲಿ ಇಡಲಾಗಿತ್ತು. ೬-೨-೧೯೩೨ ರಿಂದ ೪-೬-೧೯೩೨ ರವರೆಗೆ ನಾಲ್ಕು ತಿಂಗಳು ಕಾರಾಗೃಹವನ್ನು

ಅನುಭವಿಸಿದರು. ಆಗ ಪೊಲೀಸರಿಗೆ ಹೋರಾಟಗಾರರು ನಿಜವಾದ ಹೆಸರುಗಳನ್ನು ಹೇಳದೆ (ಪೊಲೀಸರು ಅವರ ಕುಟುಂಬದವರಿಗೆ ಹಿಂಸಿಸಬಾರದೆಂದು) ಹೆಸರು ಬದಲಾಯಿಸಿ ಬೇರೆ ಹೇಳುತ್ತಿದ್ದರು. ಹಾಗೆಯೇ ಶಿವಪ್ಪಾ ಗೂ. ಚೌಗಲೆಯವರು ತಮ್ಮ ಹೆಸರು ಗೋವಿಂದ ಕೃಷ್ಣಾ ಘೋರ್ಪಡೆ ಎಂಬುದಾಗಿ ಬದಲಾಯಿಸಿ ಹೇಳಿದ್ದರು.[೨೮]

ಚೌಗಲೆಯವರು ಬ್ರಿಟೀಷರ ವಿರೋಧಿ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗಿದ್ದರು. ತಮ್ಮ ಸ್ವಂತ ಸುಖವನ್ನು ಬಲಿಕೊಟ್ಟು ದೇಶಕ್ಕಾಗಿ ಸೇವೆ ಸಲ್ಲಿಸಿದರು. ಇವರ ದೇಶಸೇವೆಯನ್ನು ಗುರುತಿಸಿ ಕಾಂಗ್ರೆಸ್ ಸುವರ್ಣ ಮಹೋತ್ಸವದ ನಿಮಿತ್ತವಾಗಿ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಕಮೀಟಿ ೨೫-೧೨-೧೯೩೫ ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

ಸಾಮಾಜಿಕ ಕಾರ್ಯಗಳು :

ಶಿವಪ್ಪಾ ಚೌಗಲೆಯವರು ಐನಾಪೂರದ ಶ್ರೀ ವಿಶ್ವನಾಥ ದೇವಾಲಯದ ಸುತ್ತಲೂ ಗೋಡೆಯನ್ನು ಕಟ್ಟಿಸಲು ಧನಸಹಾಯ ಮಾಡಿದ್ದಾರೆ. ಅವರು ಆಧ್ಯಾತ್ಮ ಜೀವಿಗಳೂ ಹೌದು, ಗುರು ಕುಂಬಾರ ಮತ್ತು ಅಣ್ಣಪ್ಪಾ ಕುಂಬಾರ ಜೊತೆ ಸೇರಿ ಭಜನೆ ಮತ್ತು ಕಾಕಡಾರತಿಗಳನ್ನು ಮಾಡುತ್ತಿದ್ದರು. ಅನ್ನಸಂತರ್ಪಣೆಯ ಕಾರ್ಯಗಳನ್ನು ಮಾಡಿದ್ದಾರೆ.

ಪಿಂಚಣಿಯನ್ನು ಕೂಡ ತೆಗೆದುಕೊಳ್ಳದೆ ನಿಸ್ವಾರ್ಥದಿಂದ ಹೋರಾಟವನ್ನು ಮಾಡಿ ಆದರ್ಶ ಮೆರೆದರು. ಇವರು ಪ್ರತಿವರ್ಷ ಇಂಚಗೇರಿ ಮಾಧವಾನಂದ ಸ್ವಾಮೀಜಿಯವರನ್ನು ಕರೆದುಕೊಂಡು ಬಂದು ಐನಾಪೂರದಲ್ಲಿ ಏಳು ದಿನಗಳ ಕಾಲ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಕೊನೆಯವರೆಗೂ ಆಧ್ಯಾತ್ಮ ಜೀವಿಗಳಾಗಿಯೇ ಕಾಲ ಕಳೆದು ೨೦೦೩ ರಲ್ಲಿ ಇಹಲೋಕವನ್ನು ತ್ಯಜಿಸಿದರು.

ಕೃಷ್ಣಾಚಾರ್ಯ ಜೋಶಿ, ವಿ.ಎಸ್. ಜೋಶಿ, ಎಚ್.ಆರ್. ಕುಲಕರ್ಣಿ, ಕೃಷ್ಣ ಭೀ. ಜೋಶಿ, ಗೋಪಾಲ. ವಿ. ಕಕಮರಿ ಮತ್ತು ದತ್ತಾತ್ರೇಯ ಕುಲಕರ್ಣಿಯವರು ಸಹ ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು ೧೯೩೦-೩೧ ರ ಕಾಯಿದೆಭಂಗ ಚಳುವಳಿಯಲ್ಲಿ ಭಾಗವಹಿಸಿ ಕಾರಾಗೃಹವಾಸವನ್ನು ಅನುಭವಿಸಿದ್ದಾರೆ. ಆದರೆ ಇವರ ಬಗ್ಗೆ ಸಂಪೂರ್ಣ ಮಾಹಿತಿಯು ದೊರೆತಿರುವುದಿಲ್ಲ.

ದೇಶಕ್ಕಾಗಿ ದುಡಿದ ಮಹನೀಯರಲ್ಲಿ ಕೆಲವು ಜನರ ಬಗ್ಗೆ ವಿವರವಾದ ಮಾಹಿತಿಗಳು ಲಭಿಸಿ ಆಳವಾದ ಅಧ್ಯಯನ ಸಾಧ್ಯವಾಗುತ್ತದೆ. ಆದರೆ ಕೆಲವೊಮ್ಮೆ ಇನ್ನುಳಿದ ಹೋರಾಟಗಾರರ ಬಗ್ಗೆ ಯಾವುದೇ ವಿವರಗಳು ಲಭ್ಯವಾಗುವುದಿಲ್ಲ. ಹಾಗೆಂದ ಮಾತ್ರಕ್ಕೆ ಇವರು ಹೋರಾಟ ಮಾಡಿದ್ದು ಸುಳ್ಳೆಂದೇನಲ್ಲ. ಐನಾಪೂರದಲ್ಲಿ ಇನ್ನೂ ಅನೇಕ ಸ್ವಾತಂತ್ರ್ಯ ಹೋರಾಟಗಾರರು ದೇಶವನ್ನು ಬ್ರಿಟೀಷರಿಂದ ಬಂಧಮುಕ್ತ ಮಾಡುವಲ್ಲಿ ಶ್ರಮಿಸಿದ್ದಾರೆ. ಅಂತಹವರಲ್ಲಿ ಕೃಷ್ಣಾಚಾರ್ಯ ಜೋಶಿ, ವಿ.ಎಸ್. ಜೋಶಿ, ಕೃಷ್ಣ ಭೀ. ಜೋಶಿ, ಶ್ರೀ ಗೋಪಾಲ ಕಕಮರಿ, ದತ್ತಾತ್ರೇಯ ಕುಲಕರ್ಣಿ ಮುಂತಾದವರು ಪ್ರಮುಖರಾಗಿದ್ದಾರೆ.

ಇವರು ೧೯೩೦-೩೧ ರ ಕಾಯಿದೆಭಂಗ ಚಳುವಳಿಯಲ್ಲಿ ಭಾಗವಹಿಸಿ ಕಾರಾಗೃಹವಾಸವನ್ನು ಅನುಭವಿಸಿದರೆಂದು ಅಣ್ಣೂ ಗುರೂಜಿಯವರು 'ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ' ಸಂಪುಟ-೨ ರಲ್ಲಿ ಉಲ್ಲೇಖಿಸಿದ್ದಾರೆ. ಆದರೆ ಇವರ ಬಗ್ಗೆ ಕ್ಷೇತ್ರ ಅಧ್ಯಯನ ಕಾರ್ಯವನ್ನು ಕೈಗೊಂಡರೂ ಸಹ ಸಂಪೂರ್ಣ ಮಾಹಿತಿಗಳು ದೊರೆತಿರುವುದಿಲ್ಲ.

ಇಂತಹ ತ್ಯಾಗಿ, ನಿಸ್ವಾರ್ಥ ದೇಶಭಕ್ತರಿಂದ ಭಾರತ ಬ್ರಿಟೀಷರ ದಾಸ್ಯಶೃಂಖಲೆಯಿಂದ ಬಿಡುಗಡೆಯಾಗಲು ಸಾಧ್ಯವಾಯಿತು.

ಅಡಿಟಿಪ್ಪಣಿಗಳು :

೧. ಅಣ್ಣೂ ಗುರೂಜಿ : 'ನಮ್ಮ ದೇಶಪಾಂಡೆ ಮಾಸ್ತರರು', ದು.ನಿಂ. ಬೆಳಗಲಿ (ಸಂ.), ವಿದ್ಯಾಚೇತನ, ಪ್ರಕಾಶಕರು ಐನಾಪೂರ ವ್ಯಾಪಾರಿ ಸಂಘ ಐನಾಪೂರ, ೧೯೯೭, ಪು. ೩೧

೨. "ಅದೇ", ಪು. ೪೬.

೩. "ಅದೇ", ಪು. ೫೩.

೪. ಅಣ್ಣೂ ಗುರೂಜಿ : 'ಬಂಗಾರದ ಮನುಷ್ಯ : ಶ್ರೀ ಜಿ.ಎಂ. ದೇಶಪಾಂಡೆ ಸರ್', ವ್ಹಿ.ಎಸ್. ಮಾಳಿ (ಸಂ.), *ಐನಾಪೂರ ಸಾಂಸ್ಕೃತಿಕ ಅಧ್ಯಯನ*, ಪ್ರಕಾಶಕರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್ ನಿ. ಐನಾಪೂರ, ೨೦೦೬, ಪು. ೨೫.

೫. ಸಂಜೀವ ಕೋಳಿ : *ಐನಾಪೂರದ ಶ್ರೀ ದೇಶಪಾಂಡೆ ಗುರುಗಳು*, ಪ್ರಕಾಶಕರು ಪ್ರೇಮಾ ಪ್ರಕಾಶನ ಮೋಳೆ, ೨೦೧೦, ಪು. ೩೧.

೬. "ಅದೇ", ಪು. ೩೧.

೭. "ಅದೇ", ಪು. ೩೩.

೮. "ಅದೇ", ಪು. ೩೪.

೯. "ಅದೇ", ಪು. ೩೬.

೧೦. "ಅದೇ", ಪು. ೩೮–೩೯.

೧೧. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೧, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೧೧೭೧.

೧೨. ಬಾ.ಯ. ದೇಶಪಾಂಡೆ (ಅಣ್ಣೂ ಗುರೂಜಿ) : *ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ*, ಸಂಪುಟ–೧, ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾವಿ, ೧೯೭೩, ಪು. ೨೧.

೧೩. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೧, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೧೧೭೧.

೧೪. ಬಾ.ಯ. ದೇಶಪಾಂಡೆ (ಅಣ್ಣೂ ಗುರೂಜಿ) : *ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ*, ಸಂಪುಟ–೧, ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾವಿ, ೧೯೭೩, ಪು. ೨೧.

೧೫. ಇಂಡಿಯನ್ ಎಕ್ಸ್‌ಪ್ರೆಸ್, ಸಪ್ಟೆಂಬರ್ ೧೪, ಪು. ೭.

೧೬. ಜೈಲು ದಾಖಲೆ, ಬೆಳಗಾವಿ ಸೆಷನ್ ನ್ಯಾಯಾಲಯ ಕೇಸ್ ನಂ. ಜೆ.ಸಿ.–೩/೭೧೬೧/೭೩೯೩ ದಿನಾಂಕ ೨೨–೭–೧೯೩೨.

೧೭. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೧, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೧೧೭೧.

೧೮. ಬಾ.ಯ. ದೇಶಪಾಂಡೆ (ಅಣ್ಣೂ ಗುರೂಜಿ) : *ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ*, ಸಂಪುಟ–೨, ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾವಿ, ೧೯೭೩, ಪು. ೭೬.

೧೯. ಅರುಣ ರಾ. ಕುಲಕರ್ಣಿ : 'ಗಡಿನಾಡಿನ ಅನರ್ಘ್ಯ ಚೇತನ ದಿ. ನಾರಾಯಣ ದೇಶಪಾಂಡೆ', ಎಂ.ಬಿ. ದೇಸಾಯಿ (ಸಂ.), *ಕರ್ನಾಟಕದ ಸ್ವಾತಂತ್ರ್ಯ ಸಂಘದ ಶತಮಾನೋತ್ಸವದ ಸ್ಮರಣ ಸಂಚಿಕೆ*, ಪ್ರಕಾಶಕರು ಬೆಳಗಾವಿ ಜಿಲ್ಲಾ ಸ್ವಾತಂತ್ರ್ಯ ಯೋಧರ ಶೈಕ್ಷಣಿಕ ಸಂಘ ನಿಯಮಿತ, ಬೆಳಗಾವಿ, ೨೦೦೬ ಪು. ೬೨.

೨೦. ಬಾ.ಯ. ದೇಶಪಾಂಡೆ (ಅಣ್ಣೂ ಗುರೂಜಿ) : *'ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ'*, ಸಂಪುಟ–೧, ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾವಿ, ೧೯೭೩, ಪು. ೧೦೦.

೨೧. "ಅದೇ", ಸಂಪುಟ –೨, ಪು. ೭೬.

೨೨. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೧, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೧೧೭೧.

೨೩. ನ್ಯಾಯಾಲಯ ದೃಢೀಕರಣ ಪತ್ರ.

೨೪. ಸೂರ್ಯನಾಥ ಕಾಮತ್ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೧, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪು. ೧೧೭೨.

೨೫. ವ್ಹಿ.ಎಸ್. ಮಾಳಿ : 'ಪುರದ ಪುಣ್ಯ ಪುರುಷರು', ವ್ಹಿ.ಎಸ್. ಮಾಳಿ (ಸಂ.), *ಐನಾಪೂರ : ಸಾಂಸ್ಕೃತಿಕ ಅಧ್ಯಯನ*, ಪ್ರಕಾಶಕರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್ ನಿಯಮಿತ, ಐನಾಪೂರ, ೨೦೦೬, ಪು. ೩೯.

೨೬. **"ಅದೇ"**, ಪು. ೩೯.

೨೭. ಸಂಯುಕ್ತ ಕರ್ನಾಟಕ ಪತ್ರಿಕೆ, ಏಪ್ರಿಲ್ ೨೫, ೨೦೦೪, ಪು.

೨೮. ನ್ಯಾಯಾಲಯ ದೃಢೀಕರಣ ಪತ್ರ.

ಅಧ್ಯಾಯ : ಐದು

ಹೋರಾಟದ ಸ್ವರೂಪ ಮತ್ತು ಪರಿಣಾಮಗಳು

ಹೋರಾಟದ ಸ್ವರೂಪ ಮತ್ತು ಪರಿಣಾಮಗಳು

ದೇಶವ್ಯಾಪಿಯಾಗಿ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರು ಸ್ವದೇಶಿ ವ್ಯಾಪಾರ, ಸಿಂಧಿಗಿಡ ಕಡಿಯುವುದು, ಸೆರೆ ಅಂಗಡಿಗಳನ್ನು ಮುಚ್ಚುವುದು, ಅಸ್ಪ್ರಶ್ಯತಾ ನಿವಾರಣೆಯಂತಹ ಕಾರ್ಯಕ್ರಮಗಳಲ್ಲಿ ಹಾಗೂ ೧೯೩೦-೩೧ ರ ಕಾಯಿದೆಭಂಗ ಚಳುವಳಿ, ೧೯೩೨-೩೩ರ ಕಾಯಿದೆ ಭಂಗ ಚಳುವಳಿ ಮತ್ತು ೧೯೪೨ ರ ಚಲೇಜಾವ್ ಚಳುವಳಿಗಳಲ್ಲಿ ಭಾಗಿಯಾಗಿದ್ದರು. ಇದನ್ನು ಹಿಂದಿನ ಅಧ್ಯಾಯದಲ್ಲಿ ಈಗಾಗಲೇ ಉಲ್ಲೇಖಿಸಲಾಗಿದೆ.

೫.೧ ಸ್ವರೂಪ :

ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರ ಹೋರಾಟವು ಅಹಿಂಸಾತ್ಮಕ ಸ್ವರೂಪದ್ದಾಗಿದ್ದಿತು. ಇವರು ಎಲ್ಲಿಯೂ ಹಿಂಸೆಯನ್ನು ಮಾಡಲಿಲ್ಲ. ಜನರ ವಿತ್ತ ಜೀವಿತಗಳಿಗೆ ಎಂದೂ ಹಾನಿ ಮಾಡಲಿಲ್ಲ. ಸಂಪೂರ್ಣ ಅಹಿಂಸಾತ್ಮಕ ಮಾರ್ಗದಲ್ಲಿಯೇ ಹೋರಾಟ ನಡೆಸಿದರು. ಬ್ರಿಟೀಷ್ ಅಧಿಕಾರಿಗಳಿಗೆ ಹಿಂಸೆ ನಿಡುವುದಾಗಲೀ, ಆಸ್ತಿ-ಪಾಸ್ತಿ ದೋಚುವುದಾಗಲಿ ಮಾಡಲಿಲ್ಲ. ಹೋರಾಟಗಾರರ ಮಧ್ಯೆ ಸಾಮರಸ್ಯ, ಸಂಘಟನೆಯ ಗುಣಗಳಿದ್ದವು. ಸಂಘಟನಾತ್ಮಕವಾಗಿ ಊರ ಜನರ ಸಹಾಯ ಸಹಕಾರವನ್ನು ಚಳುವಳಿ ಪಡೆದಿತ್ತು.

ಇವರ ಹೋರಾಟವು ನಿಶಸ್ತ್ರಗಳಿಂದ ಕೂಡಿತ್ತು. ಇವರು ಶಸ್ತ್ರಾಸ್ತ್ರಗಳನ್ನು ಹೊಂದಿರಲಿಲ್ಲ. ಸಂಪೂರ್ಣವಾಗಿ ಸಾತ್ವಿಕ ಹೋರಾಟದ ಕ್ರಮವನ್ನೇ ಅನುಸರಿಸಿದರು. ಬ್ರಿಟೀಷರು ನೀಡಿದ ಶಿಕ್ಷೆಗಳನ್ನು ನಗು-ನಗುತ್ತಲೇ ಎದುರಿಸಿ ಕಾರಾಗೃಹವಾಸವನ್ನು ಭೋಗಿಸಿದರು.

ಸತ್ಯ, ತ್ಯಾಗ, ತಾಳ್ಮೆ ಮುಂತಾದ ಗಾಂಧೀಜಿಯವರ ತತ್ವಗಳಿಗೆ ಅನುಗುಣವಾಗಿಯೇ ಹೋರಾಟ ನಡೆದುಕೊಂಡು ಬಂದಿತು. ತಮ್ಮ ಜೀವನವನ್ನೇ ದೇಶಕ್ಕಾಗಿ ತ್ಯಾಗ ಮಾಡಿದರು.

ಗಾಂಧೀಜಿಯವರ ಕರೆಗೆ ಓಗೊಟ್ಟು ಗ್ರಾಮದಲ್ಲಿಯ ಜನರು ಹೋರಾಟದಲ್ಲಿ ಭಾಗವಹಿಸಿ ಬೆಂಬಲ ನೀಡಿದ್ದರು. ಇದೊಂದು ಸಾಮೂಹಿಕ ಹೋರಾಟವಾಗಿತ್ತು. ವಿದ್ಯಾರ್ಥಿಗಳು ಶಾಲೆಗಳನ್ನು ತೊರೆದು ಹೋರಾಟಗಾರರ ಕಾರ್ಯದಲ್ಲಿ ಭಾಗಿಯಾದರು. ಕರಪತ್ರ ಹಂಚುವುದು, ಪ್ರಭಾತಫೇರಿಯಲ್ಲಿ ದೇಶಭಕ್ತಿ ಗೀತೆಗಳನ್ನು ಹಾಡುವುದು, ಘೋಷಣೆಗಳನ್ನು ಕೂಗುವುದು, ಪಾನ ನಿಶೇಧ ಮುಂತಾದ ಕಾರ್ಯಗಳಲ್ಲಿ ಯುವಕರು ಭಾಗವಹಿಸಿದರು. ಮಹಿಳೆಯರೂ ಸಹ ಪ್ರಭಾತ ಫೇರಿಯಲ್ಲಿ ಭಾಗವಹಿಸಿ ಜನರಲ್ಲಿ ಜಾಗೃತಿಯನ್ನು ಮತ್ತು ದೇಶಾಭಿಮಾನವನ್ನು ಮೂಡಿಸುತ್ತಿದ್ದರು.

ಅಣ್ಣುಗುರೂಜಿ, ಚೆನ್ನಪ್ಪಾ ವಾಲಿ, ಹಳ್ಳಿಕೇರಿ ಗುದ್ಲೆಪ್ಪರವರಂತಹ ನಾಯಕರುಗಳ ಮಾರ್ಗದರ್ಶನದಂತೆ ಚಳುವಳಿ ನಡೆದುಕೊಂಡು ಬಂದಿತು. ಇದರಿಂದಾಗಿ ಐನಾಪೂರ ಗ್ರಾಮ ಚಳುಳಿಗೆ ಸ್ಪಂದಿಸಿ ಅವರ ಮಾರ್ಗದರ್ಶನದಂತೆ ಕಾರ್ಯಯೋಜನೆಯಂತೆ ಕೆಲಸ ಮಾಡಿತು. ಈ ಹೋರಾಟಗಾರರೆಲ್ಲ ಕಾಂಗ್ರೆಸ್ಸಿಗರು ಮತ್ತು ಕಾಂಗ್ರೆಸ್ಸಿನ ನಿಷ್ಠಾವಂತ ಕಾರ್ಯಕರ್ತರಾಗಿದ್ದರು.

ಈ ಹೋರಾಟದ ಮುಖ್ಯ ಉದ್ದೇಶ ಬ್ರಿಟೀಷರಿಗೆ ಅಸಹಕಾರವನ್ನು ತೋರಿಸಿ ಅವರಿಂದ ದೇಶವನ್ನು ಮುಕ್ತ ಮಾಡುವುದಾಗಿತ್ತು. ಬ್ರಿಟೀಷ್ ಸರ್ಕಾರದ ವಿರೋಧಿ ಚಟುವಟಿಕೆಗಳನ್ನು ಹೋರಾಟಗಾರರು ಕೈಗೊಂಡರು.

ಐನಾಪೂರದ ಸ್ವಾತಂತ್ರ್ಯ ಹೋರಾಟಗಾರರು ೧೯೩೦ ರಿಂದ ೧೯೪೭ ರವರೆಗೆ ಎಲ್ಲ ಹೋರಾಟಗಳಲ್ಲಿ ಮೊದಲಿನಿಂದಲೂ ಭಾಗಿಯಾಗಿದ್ದು ಕಂಡುಬರುತ್ತದೆ. ಕಷ್ಟಗಳನ್ನು ಪ್ರಸನ್ನವದನರಾಗಿ ಸ್ವೀಕರಿಸುವ ಕೆಚ್ಚೆದೆ ಇವರಲ್ಲಿತ್ತು. ಗೋವಿಂದರಾವ್ ದೇಶಪಾಂಡೆ ಮತ್ತ ಅವರ ಸಹೋದರ ನಾರಾಯಣ ದೇಶಪಾಂಡೆಯವರು ಮೊದಲು ಹೋರಾಟದ ಕಿಚ್ಚನ್ನು ಹೊತ್ತಿಸಿದರು. ಗಾಂಧೀಜಿಯವರ ಕನಸಿನಂತೆ ಚಳುವಳಿಯ ಜೊತೆ ಜೊತೆಗೆ ಹಳ್ಳಿಗಳ ಉದ್ಧಾರದಲ್ಲಿಯೂ ತೊಡಗಿಕೊಂಡರು. ಸ್ವಾತಂತ್ರ್ಯ ಹೋರಾಟಗಾರರು ಬ್ರಿಟೀಷರು ತಮ್ಮ ಕುಟುಂಬದವರಿಗೆ ತೊಂದರೆ ನೀಡಬಾರದೆಂಬ ಉದ್ದೇಶದಿಂದ ತಮ್ಮ ಹೆಸರನ್ನು ಬದಲಾಯಿಸಿ ಹೇಳಿದ್ದರು. ಇದನ್ನು ಹಿಂದಿನ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿದೆ. ಹೀಗೆ ಇದೊಂದು ವಿಶಿಷ್ಠ ರೀತಿಯ ಸ್ವರೂಪವನ್ನು ಹೊಂದಿತ್ತು.

೫.೨ ಪರಿಣಾಮಗಳು :

ಈ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಗಾಂಧೀಜಿ ಮತ್ತು ತಿಲಕರ ಪ್ರಭಾವವಿತ್ತು. ಗಾಂಧೀಜಿಯವರ ಸತ್ಯ, ಅಹಿಂಸೆ, ತ್ಯಾಗ, ಸರಳತೆ, ನಿಸ್ವಾರ್ಥತೆ ಮತ್ತು ತಿಲಕರ ನೇರ ನುಡಿ, ದಿಟ್ಟತನಗಳು ಇವರನ್ನು ಪ್ರಭಾವಿಸಿದ್ದವು. ಈ ಗುಣಗಳನ್ನು ಈ ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಜೀವನದುದ್ದಕ್ಕೂ ಬೆಳೆಸಿಕೊಂಡು ಬಂದರು. ಕಡೆಯವರೆಗೂ ಖಾದಿಧಾರಿಗಳಾಗಿ, ಅಪ್ಪಟ ಗಾಂಧೀವಾದಿಗಳಾಗಿಯೇ ಬದುಕಿದರು. ಪರೋಪಕಾರಿಗಳಾಗಿ ತಮ್ಮ ಸುಖಕ್ಕಿಂತ ದೇಶದ ಸುಖ ದೊಡ್ಡದೆಂಬ ಆದರ್ಶವನ್ನು ಮನಸಾರೆ ಪಾಲಿಸಿದರು. ಇದು ಈ ಸ್ವಾತಂತ್ರ್ಯ ಚಳುವಳಿಯಿಂದಾದ ಪರಿಣಾಮಗಳಲ್ಲಿ ಒಂದಾಗಿದೆ.

ಈ ಹೋರಾಟದಿಂದ ಗ್ರಾಮದ ಎಲ್ಲ ಜನರಲ್ಲಿ ದೇಶಾಭಿಮಾನ, ರಾಷ್ಟ್ರಪ್ರೇಮದ ಭಾವನೆಗಳು, ಸಾಮರಸ್ಯದ ಗುಣಗಳು ಮತ್ತಷ್ಟು ಜಾಗೃತವಾದವು. ಬೆಳಗಿನ ಪ್ರಭಾತ ಫೇರಿಯಿಂದ, ಪಾನ ನಿಶೇಧದಂತಹ ಕಾರ್ಯಕ್ರಮಗಳಿಂದ, ಗ್ರಾಮದಲ್ಲಿ ಒಳ್ಳೆಯ ವಾತಾವರಣ, ಪರಿಸರ ನಿರ್ಮಾಣವಾಯಿತು. ಜನರು ಸಕ್ರೀಯವಾಗಿ ಇದರಲ್ಲಿ ಪಾಲ್ಗೊಳ್ಳುವಂತಾಯಿತು. ಹರಿಜನ ಕೇರಿಗಳ ಸ್ವಚ್ಛತೆಯಿಂದಾಗಿ ಜನರಲ್ಲಿ ಸ್ವಚ್ಛತೆಯ ಅರಿವು ಮೂಡಿ ಬಂದಿತು. ಅಸ್ಪ್ರಶ್ಯತೆಯ ನಿವಾರಣೆಗಗಿ ಹರಿಜನಕೇರಿಗಳಿಗೆ ಹೋಗಿ ತಿಳುವಳಿಕೆ ಮೂಡಿಸಿದ್ದರಿಂದ ಅವರಲ್ಲಿ ವೈಚಾರಿಕತೆ ಮೂಡಿಬಂದಿತು. ಅವರೂ ಶಿಕ್ಷಣ ಪಡೆಯುವಂತಾಯಿತು.

ಪರಸ್ಪರರಲ್ಲಿಯ ಎಂದೂ ದ್ವೇಷ ಭಾವನೆಗಳು ನಿರ್ಮಾಣವಾಗಲಿಲ್ಲ. ಎಲ್ಲರೂ ಒಂದೆಂಬ ಭಾವನೆಯಿಂದ ಹಬ್ಬ-ಹರಿದಿನಗಳಲ್ಲಿ, ಪ್ರತಿಯೊಂದು ಕಾರ್ಯಗಳಲ್ಲಿಯೂ ಭಾಗಿಯಾದರು. ಅವರೆಲ್ಲರ ಗುರಿ ಬ್ರಿಟೀಷರಿಂದ ಭಾರತವನ್ನು ಮುಕ್ತಗೊಳಿಸುವುದು ಎಂಬುದಷ್ಟೇ ಆಗಿತ್ತು. ಹೀಗಾಗಿ ಒಂದಾಗಿ ಕಾರ್ಯ ಮಾಡುವಂತಾಯಿತು. ಸರ್ಕಾರ ಇವರ ಸೇವೆಗೆ ಗೌರವಧನವನ್ನು ಕೊಡಲು ನಿರ್ಧರಿಸಿದಾಗ ಕೆಲವು ಹೋರಾಟಗಾರರು ಇದನ್ನು ನಿರಾಕರಿಸಿದರು. ಇನ್ನು ಕೆಲವರು ಅದನ್ನು ಪಡೆದುಕೊಂಡರೂ ಸಹ ಅದನ್ನು ಸಾಮಾಜಿಕ ಕಾರ್ಯಗಳಿಗಾಗಿ ಬಳಸಿದರು. ಇಂತಹ ನಿಸ್ವಾರ್ಥ ಗುಣಗಳು ಮತ್ತಷ್ಟು ಚಳುವಳಿಗಾರರಲ್ಲಿ ಬೆಳೆದು ಬಂದಿದ್ದು ಈ ಹೋರಾಟದ ಪರಿಣಾಮದಿಂದ.

ಗಾಂಧೀಜಿಯವರ ಕನಸನ್ನು ಇವರು ನನಸು ಮಾಡುವಂತಾಯಿತು. ಗೋವಿಂದ ದೇಶಪಾಂಡೆಯವರು ತಮ್ಮ ಶಿಕ್ಷಣವನ್ನು ಅರ್ಧದಲ್ಲೇ ನಿಲ್ಲಿಸಿ,

ಐನಾಪೂರಕ್ಕೆ ಬಂದು ಅದನ್ನು ಒಂದು ಮಾದರಿ ಗ್ರಾಮವನ್ನಾಗಿಸಿದರು. ೧೯೨೪ ರಲ್ಲಿಯೇ ಐನಾಪುರದಲ್ಲಿ ಒಂದು ಹೈಸ್ಕೂಲನ್ನು ಸ್ಥಾಪನೆ ಮಾಡಿದರು. ಭಾರತ ದೇಶದಲ್ಲಿ ಕರ್ನಾಟಕ, ಮಹಾರಾಷ್ಟ್ರ, ಗುಜರಾತ ಈ ಮೂರು ರಾಜ್ಯಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಪ್ರಥಮ ಹೈಸ್ಕೂಲಾಗಿದೆ. ಇದನ್ನು ಹಿಂದಿನ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿದೆ. ಐನಾಪುರದಲ್ಲಿ ಕುಡಿಯುವ ನೀರು, ಆಸ್ಪತ್ರೆ, ಅಂಚೆ ವ್ಯವಸ್ಥೆ, ಸಾರಿಗೆ ವ್ಯವಸ್ಥೆ ಮುಂತಾದ ಕಾರ್ಯಗಳನ್ನು ಮಾಡಲು ದೇಶಪಾಂಡೆಯವರಿಗೆ ಗಾಂಧೀಜಿಯವರ ನಡೆ-ನುಡಿಗಳೇ ಪ್ರೇರಣೆಯಾಗಿದ್ದವು.

ಅದೂ ಅಲ್ಲದೆ ದೇಶಪಾಂಡೆ ಗುರುಗಳು ತಮ್ಮ ಮಕ್ಕಳಿಗೆ ಭಾರತಮಾತಾ, ಹಿಂದ್‌ಮಾತಾ ಮತ್ತು ಭೂಮಾತಾ ಎಂದು ನಾಮಕರಣ ಮಾಡಿದ್ದರು. ಇದು ಅವರ ಭಾರತ ದೇಶದ ಬಗೆಗಿನ ಅಭಿಮಾನ, ಪ್ರೀತಿಯ ದ್ಯೋತಕವಾಗಿದೆ.

ತಮ್ಮ ಸ್ವಂತ ಆಸ್ತಿಯನ್ನೇ ದೇಶಕ್ಕಾಗಿ ಕಳೆದುಕೊಂಡರೂ ಕಡೆಯವರೆಗೂ ಸ್ವಾವಲಂಬಿಗಳಾಗಿಯೇ ಬದುಕಿದರು. ಮತ್ತು ಎಂದೂ ದೇಶದ ಆಸ್ತಿಯನ್ನು ಕಳೆಯುವ ಕೆಲಸ ಮಾಡಲಿಲ್ಲ.

ನಾರಾಯಣರಾವ್ ದೇಶಪಾಂಡೆಯವರ ಉಕ್ಕಿನ ಕಂಠದ ಭಾಷಣಗಳು, ದೇಶಪ್ರೇಮದ ನುಡಿಗಳು ಜನರನ್ನು ಬಡಿದೆಬ್ಬಿಸಿದವು. ಜನರಲ್ಲಿ ಹೋರಾಟದ ಮನೋಭಾವ ಬೆಳೆದುಬರಲು ಸಾಧ್ಯವಾಯಿತು. ಕಾರಾಗೃಹದಲ್ಲಿದ್ದರೂ ಮನೆಯಬಗೆಗೆ ಎಂದೂ ವಿಚಾರಿಸಲಿಲ್ಲ. ಬದಲಾಗಿ ಊರು, ಅಲ್ಲಿಯ ಶಾಲೆಯ ಪರಿಸ್ಥಿತಿಯ ಬಗ್ಗೆಯೇ ವಿಚಾರಿಸುತ್ತಿದ್ದರು. ಇದು ಇನ್ನೊಂದು ಪರಿಣಾಮ.

ಕಡೆಯವರೆಗೂ ಈ ಹೋರಾಟಗಾರರು ಶಾಂತಮೂರ್ತಿಗಳಾಗಿ ಉಳಿದರು. ಹಿಂಸಾವೃತ್ತಿಯನ್ನೆಂದೂ ಆಚರಿಸಲಿಲ್ಲ. ಚಳುವಳಿಯ ಪರಿಣಾಮಗಳಲ್ಲಿ ಇದೂಒಂದು. ಈ ಸ್ವಾತಂತ್ರ್ಯ ಹೋರಾಟಗಾರರು ವಯಕ್ತಿಕ ಹಿತಕ್ಕಿಂತ ಲೋಕದ ಹಿತಕ್ಕೆ ಹೆಚ್ಚು ಮಹತ್ವ ಕೊಟ್ಟು ಬದುಕಿದರು. ಹಳ್ಳಿ-ಹಳ್ಳಿಗಳಲ್ಲಿಯ ಇಂತಹ ತ್ಯಾಗಿ, ನಿಸ್ವಾರ್ಥಿ, ದೇಶಪ್ರೇಮಿ ಹೋರಾಟಗಾರರ ಹೋರಾಟದ ಪ್ರತಿಫಲವಾಗಿ ಇಂಗ್ಲೀಷರು ಭಾರತ ಬಿಟ್ಟುಹೋಗಲು ಕಾರಣವಾಯಿತು. ಆ ಮೂಲಕ ೧೯೪೭ ಆಗಸ್ಟ್ ೧೫ ರಂದು ಭಾರತ ಸ್ವಾತಂತ್ರ್ಯವನ್ನು ಪಡೆದುಕೊಂಡಿತು.

ಅಧ್ಯಾಯ – ಆರು

ಸಮಾರೋಪ

ಸಮಾರೋಪ

ಭಾರತದ ಸ್ವಾತಂತ್ರ್ಯ ಸಂಗ್ರಾಮದ ವ್ಯಾಪ್ತಿ ಬಹಳ ವಿಸ್ತಾರವಾದುದು. ಈ ಸಂಗ್ರಾಮದಲ್ಲಿ ಭಾರತದ ಮೂಲೆ ಮೂಲೆಗಳಿಂದ ಅನೇಕ ಹಳ್ಳಿಗಳಿಂದ ಲಕ್ಷೋಪಲಕ್ಷ ಸ್ವಾತಂತ್ರ್ಯ ಹೋರಾಟಗಾರರು ಭಾಗವಹಿಸಿದರು. ತಮ್ಮ ತನು, ಮನ, ಧನದಿಂದ ನಿಸ್ವಾರ್ಥ ಸೇವೆ ಸಲ್ಲಿಸಿ ಭಾರತ ಮಾತೆ ಹೆಮ್ಮೆ ಪಡುವಂತಹ ವೀರ ಪುತ್ರರಾಗಿ ಸ್ವಾತಂತ್ರ್ಯ ಗಳಿಸಿಕೊಳ್ಳುವಲ್ಲಿ ಯಶಸ್ವಿಯಾದರು.

ಇಂತಹ ಮಹಾನ್ ಕಾರ್ಯದಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಕೃಷ್ಣಾ ತೀರದ ಗ್ರಾಮವಾದ ಐನಾಪೂರದಿಂದಲೂ ಹಲವಾರು ಸ್ವಾತಂತ್ರ್ಯ ಹೋರಾಟಗಾರರು ಭಾಗವಹಿಸಿದ್ದರು. ತಿಲಕ ಮತ್ತು ಗಾಂಧೀಜಿಯವರ ಪ್ರಭಾವದಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ, ಬ್ರಿಟೀಷ್ ಸರ್ಕಾರ ವಿಧಿಸಿದ ಕಠಿಣ ಶಿಕ್ಷೆಗಳನ್ನು ನಗುನಗುತ್ತಾ ಸಹಿಸಿ ಪುಟಕ್ಕಿಟ್ಟ ಚಿನ್ನದಂತೆ ಹೊರಬಂದರು. ತಮ್ಮ ಜೀವಿತದ ಕೊನೆಯವರೆಗೂ ಸತ್ಯ, ಅಹಿಂಸೆ, ತ್ಯಾಗ, ನಿಸ್ವಾರ್ಥ ಗುಣಗಳಿಂದ ಸರಳ, ಸಾತ್ವಿಕ ಜೀವನದಿಂದ ನಿರ್ವ್ಯಸನಿಗಳಾಗಿ ಬಾಳಿ ಬದುಕಿರುವುದು ನಮ್ಮೆಲ್ಲರಿಗೂ ಆದರ್ಶ.

ಇವರ ಅಮೂಲ್ಯ ಸೇವೆಗಾಗಿ ಭಾರತ ಸರ್ಕಾರ ಗೌರವಧನವನ್ನು ಘೋಷಿಸಿತು. ಆದರೆ ಕೆಲವು ಹೋರಾಟಗಾರರು ಇದನ್ನು ಸ್ವೀಕರಿಸಲಿಲ್ಲ. ಮತ್ತೆ ಕೆಲವರು ಸ್ವೀಕರಿಸಿದರೂ ಅದನ್ನು ಸಾಮಾಜಿಕ ಕಾರ್ಯಗಳಿಗಾಗಿ, ಧಾನ-ಧರ್ಮಕ್ಕಾಗಿ ವಿನಿಯೋಗಿಸಿದರು.

ನಮ್ಮ ಸ್ವಾತಂತ್ರ್ಯ ಹೋರಾಟಗಾರರು ದೇಶವನ್ನು ಬ್ರಿಟೀಷರ ದಾಸ್ಯದ ಶೃಂಖಲೆಯಿಂದ ಪಾರು ಮಾಡಲು ಅನೇಕ ಕಷ್ಟಗಳನ್ನು ನಗುತ್ತಲೇ ಅನುಭವಿಸಿದರು. ಅಂತಹ ಮಹಾನ್ ವ್ಯಕ್ತಿಗಳ ಹೆಸರುಗಳು ಇತಿಹಾಸದ ಪುಟಗಳಲ್ಲಿ ಮಸುಕಾಗಿ ದಾಖಲುಗೊಂಡಿವೆ. ಮೂರು-ನಾಲ್ಕು ಜನರ ಹೆಸರುಗಳು ಮಾತ್ರ ದಾಖಲಾಗಿವೆ. ಸ್ವಾತಂತ್ರ್ಯ ಹೋರಾಟಗಾರರು ಪ್ರಚಾರ ಪ್ರಿಯರಲ್ಲ. ಎಲೆಯ ಮರೆಯ ಕಾಯಿಯ


ಹಾಗೆ ಉಳಿದು ಸೇವೆಯನ್ನು ಸಲ್ಲಿಸಿದವರು. ಅವರ ಸೇವೆಯನ್ನು ಶಬ್ದಗಳಲ್ಲಿ ಹಿಡಿದಿಡಲು ಸಾಧ್ಯವಿಲ್ಲ. ಅವರ ಹೋರಾಟ ಸಾಂಘಿಕವಾಗಿತ್ತು. ಅನೇಕ ಹಳ್ಳಿ-ಹಳ್ಳಿಗಳಲ್ಲಿ ಇಂತಹ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಆಗಿ ಹೋಗಿದ್ದಾರೆ. ಅವರೆಲ್ಲರ ಬಗ್ಗೆ ಆಳವಾದ ಅಧ್ಯಯನ ನಡೆದರೆ ಸ್ವಾತಂತ್ರ್ಯ ಹೋರಾಟದ ಸ್ವರೂಪದ ಬಗ್ಗೆ ಮತ್ತು ಆ ಮೂಲಕ ಸ್ವಾತಂತ್ರ್ಯದ ಮೌಲ್ಯವನ್ನು ತಿಳಿದು ನಮ್ಮ ಕರ್ತವ್ಯವೇನೆಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ.

ರಾಷ್ಟ್ರೀಯ ಚಳುವಳಿಯಲ್ಲಿ ಸಾಮಾನ್ಯ ಜನರೂ ಭಾಗವಹಿಸಿ ತಮ್ಮ ಕೈಲಾದ ಸೇವೆಯನ್ನು ಮಾಡಿದ್ದೂ ಸಹ ಮಹತ್ವದ ಸಂಗತಿ. ಇಂತಹ ಅಧ್ಯಯನಗಳಿಂದ ಸ್ಥಳೀಯ ಇತಿಹಾಸದ ಮಹತ್ವ ಗೊತ್ತಾಗುತ್ತದೆ. ಅದರೊಂದಿಗೆ ಸ್ಥಳೀಯ ಇತಿಹಾಸಗಳು ರಾಷ್ಟ್ರೀಯ ಇತಿಹಾಸ ನಿರ್ಮಾಣದಲ್ಲಿ ಹೇಗೆ ಮಹತ್ವದ ಪಾತ್ರ ವಹಿಸುತ್ತವೆ ಎಂಬುದನ್ನು ತಿಳಿಯಬಹುದು. ಈ ನಿಟ್ಟಿನಲ್ಲಿ ಈ ಸ್ವಾತಂತ್ರ್ಯ ಹೋರಾಟಗಾರರ ಅಧ್ಯಯನ ಮಹತ್ವಪೂರ್ಣವಾಗಿದೆ.


ಸೂಕ್ಷ್ಮತರ ಅಧ್ಯಯನಗಳು ಆಗದೇ ಹೋದರೆ ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳು ಇತಿಹಾಸದ ಪುಟಗಳಲ್ಲಿ ಮೂಡದೆ ಕಣ್ಮರೆಯಾಗುವ ಸಾಧ್ಯತೆಗಳಿವೆ. ಆದ್ದರಿಂದ ಈ ತರಹದ ಸೂಕ್ಷ್ಮತರ ಅಧ್ಯಯನಗಳನ್ನು ಪ್ರಾದೇಶಿಕ ಮಟ್ಟದಲ್ಲಿ ಕೈಗೊಳ್ಳುವ ಅವಶ್ಯಕತೆಯಿದೆ.


ಸೂಕ್ಷ್ಮತರ ಅಧ್ಯಯನಗಳು ನಡೆದರೆ ಇನ್ನೂ ಮಹತ್ವಪೂರ್ಣ ಅಂಶಗಳು ಬೆಳಕಿಗೆ ಬರಲು ಸಾಧ್ಯ. ಭಾರತ ಜಗತ್ತಿನಲ್ಲಿ ಮುಂಚೂಣಿಯಲ್ಲಿ ನಿಲ್ಲಬೇಕಾದರೆ ನಮ್ಮವರ ತ್ಯಾಗದ ಅರಿವು ನಮಗಿರಬೇಕು. ಅಂದಾಗ ಮಾತ್ರ ನಮ್ಮ ಹೋರಾಟಗಾರರ ಕನಸನ್ನು ನನಸು ಮಾಡಲು ಸಾಧ್ಯ.

ಬೆಳಗಾವಿ ಜಿಲ್ಲೆ


BELGAUM
DISTRICT
N
MAHARASTRA
Bijapur
Shirul
Gundevadi
Navalihal
Athni
Halhalli
Kagvad
Koligud
Karadge
Arkall
Chikodi
Bagalkot
Nipani
Gurlapur
Hukeri
Ghatprabha
Yadawad
www.mapsofindia.com
Upparhatti
Ghatprapha
Panchgaon
Suldhal
Satugeri
Honga
Ramdurg
BELGAUM
Bail Hongal
Malprabha
Holand
Lingadhalli
Dharwar
Khauapur
Hanbur
Halsi
NH-4
NH-4A
GOA
To Dharwar
Uttara Kannada
LEGEND
National Highway
Major Road
Rail Line
District Headquaters
Major Town
Other Town
River
Map not to Scale
Copyright © 2010 www.mapsofindia.com
(Updated on 30th August 2010)

ಐನಾಪೂರ ಗ್ರಾಮದ ನಕಾಶೆ





ದಿ. ಶ್ರೀ ಗೋವಿಂದರಾವ್ ಮಹಿಪತರಾವ್ ದೇಶಪಾಂಡೆ




ಶ್ರೀ ಮಾಧ್ವರಾವ್ ರಾಮಚಂದ್ರ ಮುತಾಲೀಕ



ಶ್ರೀ ವ್ಯಾಸರಾವ್ ತಮ್ಮಣ್ಣಾ ಮುತಾಲೀಕ



ದಿ. ನಾರಾಯಣರಾವ್ ಮಹಿಪತಿರಾವ್ ದೇಶಪಾಂಡೆ



ಶ್ರೀ ರಾಮಚಂದ್ರ ಅನಂತರಾವ್ ಪತಕಿ



ಶ್ರೀ ಲಕ್ಷ್ಮಣ ರಾಮಪ್ಪಾ ಪಾರಶೆಟ್ಟಿ



ಶ್ರೀ ಶಿವಪ್ಪಾ ಗೂಳಪ್ಪಾ ಚೌಗಲೆ (ಮಸರಗುಪ್ಪಿ)



ಶ್ರೀ ಜಿ.ಎಂ. ದೇಶಪಾಂಡೆ ಗುರುಗಳು ೧೯೪೭ ರ ಅಗಸ್ಟ
೧೫ ರಂದು ಐನಾಪೂರದ ಗಾಂಧಿಚೌಕದಲ್ಲಿ ಧ್ವಜಾರೋಹಣ ಮಾಡಿದ್ದು



ಶ್ರೀ ಜಿ.ಎಂ. ದೇಶಪಾಂಡೆ ಗುರುಗಳ ಸಮಾಧಿ

No.JC-3/7161/[illegible]/62 [illegible]   Office of the Central Prison,
Belgaum, dt.[illegible]/62

JAIL CERTIFICATE

This is to certify that Shri. [illegible] Deshpande was confined in the Belgaum Central Prison, as a convicted prisoner No. 7014 for the period from 2/12/30 to 1/2/31. His further particulars of convictions are not available since the convict Register for the said period is in a torn/mutilated/destroyed condition and he has signed as [illegible].Deshpande in the property Register.

Yours faithfully
Sd/-
Superintendent,
Central Prison Belgaum

(SEAL)

To
Shri [illegible] D
Deshpande, [illegible], Tal: Athani
Dist. Belgaum
Receipt No. [illegible] dated [illegible] for Rs.[illegible]/- ([illegible] only)
enclosed

/ True copy /

[illegible] Medical Officer,
[illegible]nicipal Dispensary,
[illegible] ATHANI.

ATHANI
23rd March 1973.

From:

N. B. Dalvai, B.A.LL.B.
Pleader, Ex-M.L.A.
ATHANI (Dist: Belgaum).

This is to certify that I know Sri. Laxman Ramappa Parashetti of Ainapur taluka Athani Dist:- Belgaum since last 1932. He is a sincere Congress worker and he had taken part in freedom struggle in 1932. He had taken part in flag hoisting and for that he was convicted by District Magistrate Dharwar on 5-2-1932 and for that he was in Jail (Central Prison) of Hidalaga from 5-2-1932 to 4-6-1932. So, he was there as political prisoner for nearly 4 months for taking part in freedom movement. He is sincere congress worker throughout and he derives meagre income of Rs.1000/- yearly. So he deserves all kind of help as Freedom Fighters so, The freedom Fighters' state pension may be - - sanctioned immediately. He is an old of 60 years, of age.

I was an M.L.A. of Bombay State from 1946 to 1952. Now I am freedom fighter and getting State Pension of Freedom fighters.

(N. B. Dalavai)
B.A.LL.B. Pleader,
and Ex- M.L.A.

[illegible]

[illegible] Rs. 4.50

Sold at Belgaum Shanivarkoot, date 20-10-1971
to Shri Shivappa [illegible] Chougule alias [illegible] of Ainapur
through self.

Sd/ Sd/
S.V.

<u>Affidavit.</u>

Herein, I, Shri Shivappa [illegible] Chougule alias [illegible] of Ainapur, Taluka Athani, District Belgaum, this day at Belgaum, do hereby state on solemn affirmation and make affidavit as under :-

I am a permanent resident of Ainapur. I am a Congress worker since the last 30/40 years. I had taken part in the 1932 Congress movement. I was arrested at Dharwar for taking part in "Prabhat Feri", and was sentenced to 4 months R.I. and 50 Rs. fine and was kept in the Central Prison Belgaum. I had given my name falsely through fear of police as Annappa Bharmappa Tulpule resident of Gokak. At that time one Shri Laxman [illegible] [illegible], resident of [illegible] was in the Central Prison, Belgaum, as a convict from [illegible]-1932 to 4-6-1932, along with me. He had also given his another name as Govind Bin Krishna [illegible], through fear of Police and we were too young at that time.

We have got our jail certificates and they are issued in the names given by us falsely respectively, through fear of Police.

My total annual income from all sources is Rs. 1400/- (Rs. One thousand four hundred) only.

I am a permanent resident of the Mysore State since its formation.

Solemnly affirmed this 20th day of October 1971.

Sd/

I know the deponent who is present now.

Sd/

Belgaum,
20-10-1971

Deponent sworn solemnly to the contents before me.

Sd/
Notary Public, [illegible]

Belgaum,
20-10-1971.

ಆಕರ ಗ್ರಂಥಗಳು

ಅ. ಗ್ರಂಥಗಳು

೧. ಕಾಮತ್ ಸೂರ್ಯನಾಥ : *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*, ಸಂಪುಟ.೧, ೨, ೩ ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮.

೨. ಕೆ.ಎನ್.ಎ. ಎಚ್ಚಾರ್ಕೆ: *ಇತಿಹಾಸ–೨*, ಸ್ವಪ್ನಾ ಬುಕ್ ಹೌಸ್, ಬೆಂಗಳೂರು.

೩. ದೇಶಪಾಂಡೆ, ಬಾ.ಯ. (ಅಣ್ಣು ಗುರೂಜಿ) : *ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ*, ಸಂಪುಟ–೧, ೨, ಪ್ರಕಾಶಕರು, ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾವಿ, ೧೯೭೩.

೪. ಚವಲಾರ ಸರೋಜಿನಿ : *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು*, ಪ್ರಕಾಶಕರು, ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ, ಮೂರುಸಾವಿರ ಮಠ, ಹುಬ್ಬಳ್ಳಿ, ೧೯೮೮.

೫. ಸದಾಶಿವ ಕೆ. : *ಆಧುನಿಕ ಭಾರತದ ಇತಿಹಾಸ*, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು.

೬. ನ್ಯಾಯಾಲಯದ ಆದೇಶ : ಬೆಳಗಾವಿ ಡಿವಿಜನ್ ಸೆಷನ್ ನ್ಯಾಯಾಲಯ, ಕೇಸ್ ನಂಬರ ಜೆ.ಸಿ. ೩/೭೧೬೧/೭೩೫೩/೭೨.

೭. ಶಾಸ್ತ್ರಿ ಎಲ್.ಎಸ್. : *ಸ್ವಾತಂತ್ರ್ಯ ಸಂಗ್ರಾಮ* (ರಾಷ್ಟ್ರ, ರಾಜ್ಯ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ) ಪ್ರಕಾಶಕರು, ಬೆಳಗಾವಿ ಜಿಲ್ಲಾ ಸ್ವಾತಂತ್ರ್ಯ ಯೋಧರ ಶೈಕ್ಷಣಿಕ ಸಂಘ, ಬೆಳಗಾವಿ, ೨೦೦೬.

೮. ಸಂಜೀವ ಕೋಳಿ : *ಐನಾಪೂರದ ಶ್ರೀ ದೇಶಪಾಂಡೆ ಗುರುಗಳು*, ಪ್ರಕಾಶಕರು ಪ್ರೇಮಾ ಪ್ರಕಾಶನ ಮೋಳೆ, ೨೦೧೦.

೯. ಜೈಲು ದಾಖಲೆ, ಬೆಳಗಾವಿ ಸೆಷನ್ ನ್ಯಾಯಾಲಯ ಕೇಸ್ ನಂ. ಜೆ.ಸಿ.–೩/೭೧೬೧/೭೩೫೩ ದಿನಾಂಕ ೨೨–೭–೧೯೩೨.

ಆ. ಲೇಖನಗಳು :

೧. ಮಾಳಿ, ವ್ಹಿ.ಎಸ್. (ಸಂ.): 'ಐನಾಪೂರ : ಇತಿಹಾಸದ ಪುಟಗಳು', *ಐನಾಪುರ : ಸಾಂಸ್ಕೃತಿಕ ಅಧ್ಯಯನ*, ಪ್ರಕಾಶಕರು : ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ ನಿಯಮಿತ, ಐನಾಪೂರ, ೨೦೦೬.

೨. ಮಾಳಿ, ವ್ಹಿ.ಎಸ್. : 'ಪುರದ ಪುಣ್ಯ ಪುರುಷರು', ವ್ಹಿ.ಎಸ್. ಮಾಳಿ (ಸಂ.)., *ಐನಾಪೂರ : ಸಾಂಸ್ಕೃತಿಕ ಅಧ್ಯಯನ*, ಪ್ರಕಾಶಕರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್ ನಿಯಮಿತ, ಐನಾಪೂರ, ೨೦೦೬.

೩. ಕುಲಕರ್ಣಿ ವಾಮನ ಅ. : 'ಸ್ವಾತಂತ್ರ್ಯ ಸಂಗ್ರಾಮದ ನೆನಪುಗಳು', ವ್ಹಿ.ಎಸ್. ಮಾಳಿ (ಸಂ.), *ಅಥಣಿ ತಾಲೂಕು ಸಮಗ್ರ ದರ್ಶನ*, ಪ್ರಕಾಶನ : ವಿಮೋಚನ ಪ್ರಕಾಶನ ಅಥಣಿ, ೨೦೦೭.

೪. ಎಸ್. ಚಂದ್ರಶೇಖರ್ : 'ಗಾಂಧೀಜಿ ಆಗಮನ', ಬಿ. ಷೇಕ್ ಅಲಿ (ಸಂ.), *ಕರ್ನಾಟಕ ಚರಿತ್ರೆ* ಸಂಪುಟ-೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೫. ಕುಲಕರ್ಣಿ ಅರುಣ ರಾ. : 'ಗಡಿನಾಡಿನ ಅನರ್ಘ್ಯ ಚೇತನ ದಿ. ನಾರಾಯಣ ದೇಶಪಾಂಡೆ', ಎಂ.ಬಿ. ದೇಸಾಯಿ (ಸಂ.)., *ಕರ್ನಾಟಕದ ಸ್ವಾತಂತ್ರ್ಯ ಸಂಘದ ಶತಮಾನೋತ್ಸವದ ಸ್ಮರಣ ಸಂಚಿಕೆ*, ಪ್ರಕಾಶಕರು ಬೆಳಗಾವಿ ಜಿಲ್ಲಾ ಸ್ವಾತಂತ್ರ್ಯ ಯೋಧರ ಶೈಕ್ಷಣಿಕ ಸಂಘ ನಿಯಮಿತ, ಬೆಳಗಾವಿ, ೨೦೦೬.

ಇ. ಪತ್ರಿಕೆಗಳು :

- ಪ್ರಜಾವಾಣಿ ಪತ್ರಿಕೆ 'ಕರ್ನಾಟಕ ದರ್ಶನ', ೧೯೯೭, ಡಿಸೆಂಬರ್-೨೦.
- ಇಂಡಿಯನ್ ಎಕ್ಸ್‌ಪ್ರೆಸ್, ೧೯೯೮, ಸಪ್ಟೆಂಬರ್, ೧೪.
- ಸಂಯುಕ್ತ ಕರ್ನಾಟಕ ಪತ್ರಿಕೆ, ಏಪ್ರಿಲ್ ೨೫, ೨೦೦೪.

AKSHARA GRANTHALAYA
ACC.NO. 048757
048757